ಕರ್ಮವೀರ

ಹುಬ್ಬಳ್ಳಿ ತಾ. ೨೭-೧೨-೪೮

ಸಂಪುಟ ೨೦] [ಸಂಚಿಕೆ ೫೦

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಪ. ರಾ. ಪುರೋಹಿತ]


[ಸಂಸ್ಥಾಪಕರು—
ರಂ. ರಾ. ದಿವಾಕರ

★

...ಘೋರ ದಬ್ಬಾಳಿಕೆಗಳು ಕೂಡ ...ಸ್ವರೂಪದಲ್ಲೆ ಮೊದಲಾಗುವವು. ...ಪೂರ್ವರೂಢಿಗಳನ್ನು ದುರ್ಲಕ್ಷಿಸ...ವದು, ...ಸೂರುಗಳನ್ನು ಅಸಹಾಸ...ದಲ್ಲಿ ತೇಲಿಸಿಬಿಡುವದು, ದುರ್ಬಲ...ರನ್ನು ಉದ್ಧಟತನದಿಂದ ಪೀಡಿಸು...ವದು, ಉದ್ಧಟರನ್ನು ಔದಾಸೀನ್ಯ...ದಿಂದ ಸೈರಿಸುವದು, ಇವುಗಳಲ್ಲಿ ...ದಬ್ಬಾಳಿಕೆಯ ಪರಂಪರೆಯ ಉಗಮ...ವಿದೆ. ಆ ಮೇಲೆ ತಲೆ...ಮಾರು ತಲೆಮಾರುಗಳ ವರೆಗೆ ...ಸಜ್ಜನರೂ ವಿವೇಕಿಗಳೂ ಅದನ್ನು ...ಪ್ರತಿಭಟಿಸಲು ಪ್ರಯತ್ನಿಸಿದರೂ ...ಅಸಮರ್ಥರಾಗುವದು. ಆದುದರಿಂದ ...ಎಂದೇ ಒಂದು ದಬ್ಬಾಳಿಕೆಯ ಕೃತಿ ...ಆರಂಭವಿಸಿದರೂ ಅದನ್ನು ಅವಿಶ್ರಾಂತ...ವಾಗಿ, ತೊಂದರೆಯಾದರೂಲೆಕ್ಕಿಸದೆ, ...ಬೆಟ್ಟುಹಿಡಿದು ಖಂಡಿಸಬೇಕು.

—"ಲಂಡನ್ ಟೈಮ್ಸ್"
[೧೬೦ ವರ್ಷ ಹಳೆಯ ಅಗ್ರಲೇಖದಲ್ಲಿ]

★



ಗಾಂಧೀನಗರದ ಗೋಪುರ

ಜಯಪುರದ ಗಾಂಧೀನಗರದಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದಾಗ ನಡೆದ ಸರ್ವೋದಯ ಪ್ರದರ್ಶನಿಯ ಹೊರ ಗೋಪುರ. ಸರಳಸೌಂದರ್ಯದ ರುಚಿ ಗೊತ್ತುವಂತೆ ಕೇವಲ ಬಿದಿರು—ಹುಲ್ಲು ಗಳಿಂದ ನಿರ್ಮಿಸಲ್ಪಟ್ಟಿದೆ ಈ ಗೋಪುರ.

ಚಿತ್ರ: ಶ್ರೀ. ನಾರಾಯಣರಾವ ಕುಲಕರ್ಣಿ, ವಿಜಾಪುರ

ಜಯಪುರ ಕಾಂಗ್ರೆಸ್ಸಿನ ಪೂರ್ಣ ವಿವರಗಳಿಗೆ

ಒಳಗೆ ನೋಡಿರಿ



ನನ್ನ ಅಣ್ಣನು ಇರುವ ಊರ ಹೆಸರು [illegible]ಹಳ್ಳಿ ಎಂದು. ಅದೊಂದು ಸಣ್ಣ ಸ್ಥಳ. ಅಣ್ಣ ಪೋಸ್ಟಮಾಸ್ಟರಾಗಿ ಅಲ್ಲಿಗೆ ಹೋಗಿ ಸೇರಿ ಆಗಲೇ ನಾಲ್ಕು ವರ್ಷಗಳಾಗಿ ಹೋಗಿದ್ದರೂ – ರಜೆಯ ಅಭಾವದ ಕಾರಣ – ನನಗೆ ಅಲ್ಲಿಗೆ ಹೋಗಲಾಗಿರಲಿಲ್ಲ. ಅವರಲ್ಲಿಂದ ಪ್ರತಿ ಹದಿನೈದು ದಿನಗಳಿಗೂ ತಪ್ಪದೆ ನನ್ನನ್ನು ಬರುವಂತೆ ಒತ್ತಾಯಪಡಿಸಿ ಕಾಗದ ಬರೆಯುತ್ತಿದ್ದರು. ಅವರಿಗೆ ನಾಳೆ ಆದಿತ್ಯವಾರ, ನಾಡದ್ದು ಆದಿತ್ಯವಾರ ಎಂತ ವಾಯಿದೆ ಕೊಟ್ಟು ಕೊಟ್ಟು, ಕಾಗದ ಬರೆದೂ ಬರೆದು ನನ್ನ ಕೈ ಸೋತು ಹೋಗಿದ್ದಿತು. ಅವರಿಗೂ ನನ್ನ ದಾರಿ ನೋಡಿ ನೋಡಿ ಕಣ್ಣು ನೊಂದಿತ್ತು, ಮನ ಉದಾಸೀನ ಪಟ್ಟಿದ್ದಿತು. ಅಂತೂ ಕಡೆಗೆ ಗೌರಿಚೌತಿಯ ರಜೆಯಲ್ಲಿ ಜೊತೆಗೆ ಇನ್ನೆರಡು ದಿನ ಹೆಚ್ಚಿಗೆ ರಜೆ ತೆಗೆದುಕೊಂಡು – ಹೊರಡುವುದೆಂತ ನಿಶ್ಚಯಿಸಿದೆ. ಅಂತೆಯೇ ಸೆಪ್ಟಂಬರ ತಿಂಗಳ ನಾಲ್ಕನೇ ತಾರೀಖು ಶನಿವಾರ ದಿನ ಹೊರಡುವದೆಂತ ನಿರ್ಧರಿಸಿ, ಆ ದಿನ ಅವರು ಕೊಡ್ಲಿಪೇಟೆಗೆ ತಪ್ಪದೇ ಬಂದಿರಬೇಕೆಂದು ಬರೆದು ತಿಳಿಸಿದೆ.

ಸರಿ. ಸೆಪ್ಟಂಬರ ನಾಲ್ಕನೇ ತಾರೀಖೂ ಬಂದಿತು. ನನಗೆ ರಜೆಯೂ ಸಿಕ್ಕಿದ್ದಿತು. ಆ ದಿನ ಬಸ್ಸುಸ್ಟೇಂಡಿಗೆ ಬಂದು ತಲುಪಿಯೂ ಆಯಿತು. ಆದರೆ ನನ್ನ ಹಾಳು ಅದೃಷ್ಟ! ಬಸ್ಸು ಹೋಗಿ ಆಗಲೇ ಐದು ನಿಮಿಷಗಳಾಗಿ ಹೋಗಿತ್ತು ಮತ್ತು ಆ ಹಾಳೂರಿಗೆ ಇನ್ನೊಂದು ಬಸ್ಸಿರಲಿಲ್ಲ. ಅಂತೂ ಅಣ್ಣನಿಗೆ – ಅಷ್ಟು ನಿಶ್ಚಯವಾಗಿ–ಬರೆದ ಕಾಗದದ ವಾಯಿದೆ ತಪ್ಪಿತು. ಹೋಗಲಿ ಇನ್ನು ಅವರಿಗೆ ಟೆಲಿಗ್ರಾಮ್ ಮಾಡುವ ಎಂದರೆ, ಆ ಊರ ಪೋಸ್ಟ ಆಫೀಸಿಗೆ ಆ ವ್ಯವಸ್ಥೆ ಮೊದಲೇ ಇಲ್ಲ. ಕಡೆಗೆ ಹಾಗೂ ಹೀಗೂ ಮರುದಿನ, ಬಸ್ಸು ಹೊರಡುವದಕ್ಕೆ ಮೊದಲೇ ಬಂದು ಗುದ್ದಾಟ ಬಡಿದಾಟಗಳ ಸಂದಿಯಲ್ಲಿ ಟಿಕೇಟನ್ನು ಬಹು ಪ್ರಯಾಸದಿಂದ ಕೊಂಡು ಬಸ್ಸು ಹತ್ತಿದೆ. ಟಿಕೇಟು ಸಿಕ್ಕಿದ್ದೇ ಅಣ್ಣನ ಮನೆ ಕಂಡಷ್ಟು ಸಂತೋಷವಾಯಿತು, ನನಗೆ.

ನಾನು ಸರೀ ಐದು ಗಂಟೆಗೆ ಕೊಡ್ಲಿಪೇಟೆಗೆ ತಲುಪಿದೆ. ಕೊಡ್ಲಿಪೇಟೆಯಿಂದ ಅಣ್ಣನೂರಿಗೆ ಬರೆ ಆರು ಮೈಲು. ಅಣ್ಣ ಬಂದು ಬಸ್ಸು ನೋಡಿ ಹೋಗಿದ್ದುದಾಗಿ ಅಲ್ಲಿದ್ದ ಸಾಹುಕಾರು ವ್ಯಾಪಾರಿಗಳು ನಾನು ಅಣ್ಣನ ಮುಖಚರ್ಯೆಯ ಪಟ್ಟಿಯನ್ನು ವರದಿ ಮಾಡಿದ ಮೇಲೆ ನನ್ನನ್ನೆ ಆಶ್ಚರ್ಯದಿಂದ ನೋಡುತ್ತಾ– ತಿಳಿಸಿದರು. ಆದರೆ ಆ ಮಹಾನುಭಾವರುಗಳಿಗೆ ಆ ಹಳ್ಳಿಯ ಹೆಸರು ಗೊತ್ತೆ ವಿನಾ [illegible] ಗೊತ್ತಿರಲಿಲ್ಲ. ಕಡೆಗೆ ಒಬ್ಬ ಬ್ಯಾರಿ – ತನ್ನ ಅರ್ಧಮರ್ಧ ಕನ್ನಡದಲ್ಲಿ– ಏನೇನೋ ದಾರಿ ಹೇಳಿದ. ನಾನು ಅವನ ಮಾತು ಕೇಳಿ ಹೊರಟೇಬಿಟ್ಟೆ. ಹಾಂ, ಆಗ ಸಮಯ ಐದೂವರೆ ಗಂಟೆ.

ಏಳೂವರೇ ಗಂಟೆ. ಹಾದಿ ತಪ್ಪಿ ಹೋಗಿದೆ. ನರ ಹುಳುವಿನ ದರ್ಶನವಿಲ್ಲ. ಆದರೂ ಧೈರ್ಯದಿಂದ ಮುಂದೆ ಸಾಗಿದೆ. ಎದುರು ಒಂದು ಗೊಂಡಾರಣ್ಯ ನನ್ನನ್ನು ಸ್ವಾಗತಿಸಿತು. ನನಗೆ ರಾತ್ರಿಯ ಸಂಚಾರ ಹೊಸದಲ್ಲದಿದ್ದರೂ ಇಂಥಾ ಹೊಸ ಜಾಗೆಯಲ್ಲಿ, ಅದೂ ಏಕಾಂಗಿಯಾಗಿ– ಕಾಡಿನ ಮಧ್ಯದಲ್ಲಿ ಅಸಹಾಯನಾಗಿ ಸಿಕ್ಕಿ ಬಿದ್ದುದು ಇದೇ ಮೊದಲು. ಎದೆ ಡವ ಡವ ಎಂದು ಬಡಿದು ಕೊಳ್ಳುತ್ತಿದ್ದಿತು. ಸ್ವಲ್ಪ ಅಧೈರ್ಯವೂ ತನುವನ್ನು ಸ್ವಲ್ಪ ಮಟ್ಟಿಗೆ ನಡುಗಿಸುತ್ತಿದ್ದಿತು. ಆದರೂ ಅದೇ ಕಾಡಲ್ಲಿ ಅಲ್ಲಿ ಇಲ್ಲಿ ಹತ್ತು ಗಂಟೆಗಳ ತನಕವೂ ಸುತ್ತಾಡಿದೆ. ನಿಷ್ಪ್ರಯೋಜನ. ಅಣ್ಣನ ಮನೆಯೂ ಸಿಕ್ಕಲಿಲ್ಲ. ಇನ್ನಾರ ಮನೆಯೂ ಕಣ್ಣಿಗೆ ಕಾಣಸಲಿಲ್ಲ. ಸುತ್ತಿ ಸುತ್ತಿ ಮೈ–ಮನ ಸೋತು ಹೋದವು, ಕಡೆಗೆ ಅರಣ್ಯವಾಸವೇ ಗತಿ ಎಂತ ಬಗೆದೆ.

ಅಲ್ಲೇ ಒಂದು ದೊಡ್ಡ ಹಲಸಿನ ಮರ. ಅದರ ಸನಿಹದಲ್ಲಿ, ನಾಲ್ಕು ಮಾರು ಮುಂದೆ ಆಗ ತಾನೇ ಆರಹೊರಟಿದ್ದ ಅಗ್ನಿಯ ಕುಂಡದಿಂದ ಹೊಗೆ ಏಳುತ್ತಿದ್ದಿತು. ನನಗೆ ಇದಾವುದರ ಗೊಡವೆಯೂ ಇರಲಿಲ್ಲ. ಅಂತಲೇ ಮುಂದೆ ಹೆಜ್ಜೆ ಇಡಲಾಗದೆ ಆ ಮರದ ಬುಡದಲ್ಲಿ ಉಟ್ಟಿದ್ದ ಪಂಚೆಯನ್ನು ಹಾಸಿ, ಇನ್ನೊಂದು ಪಂಚೆಯನ್ನು ಚೀಲದಿಂದ ತೆಗೆದು ಹೊದೆದುಕೊಂಡು ಮಲಗಿದೆ. ತುಂಬ ದಣಿದಿದ್ದೆನಾಗಿ ಹಾಗೆ ನಿದ್ರೆ ಹತ್ತಿತು.

ಮಧ್ಯ ರಾತ್ರಿಯ ನಂತರ ಒಂದು ವಿಕಾರವಾದ ಕೂಗು ಕೇಳಿಸಿತು. ಸುತ್ತಲೂ ಗಾಢಾಂಧಕಾರ. ರಾಮ, ಓ, ಪರಮಾತ್ಮಾ ರಕ್ಷಿಸು ಎನ್ನುತ್ತಾ ಹೀಗೆ ನೋಡುವಾಗ, ಒಂದು ಸ್ತ್ರೀ ವ್ಯಕ್ತಿ

ಸ್ವಪ್ನವೋ ಸತ್ಯವೋ?

ಲೇ : ನರಸಿಂಹ

ನನ್ನಿಂದ ಹತ್ತು ಮಾರು ದೂರದಲ್ಲಿ ಆ ಬೆಂಕಿಯ ಕುಂಡದ ಹಿಂದೆ– ಕೂತಿದ್ದಂತೆ ನನಗೆ ಭಾಸವಾಯಿತು. ನನಗೆ ಸ್ತ್ರೀಯನ್ನು ಕಾಣುತ್ತಲೇ ಆಶೋದಯವಾಯಿತು. ಇಲ್ಲೀ ಎಲ್ಲಾದರೂ ಒಬ್ಬ ಪುರುಷನಿದ್ದರೂ ಇರಬಹುದೆಂಬ ಆಶೆ ತಲೆದೋರಿತು. ಆದರೆ ಆಗಲೇ ಆ ಭಯಂಕರ ಧ್ವನಿಯು ಜ್ಞಾಪಕ ಮನದಲ್ಲಿ ಮೂಡಿತು. ದೇಹ ಹೆದರಿ ನಡುಗಿದರೂ, ಧೈರ್ಯ ತಂದುಕೊಂಡೆ. ಇದರಿಂದ ಕಾಲುಗಳು ತಾನೇ ತಾನಾಗಿ ಆ ಸ್ತ್ರೀಯತ್ತ ಸರಿದುವು. ಕೂಡಲೇ ಆವಳು ವಿಕಾರದ ಸ್ವರದಲ್ಲಿ "ಯಾರದು?" ಕೇಳಿದಳು.

ನಾನು ನಡುಕದ ಧ್ವನಿಯಲ್ಲಿ—"ಒಬ್ಬ ಪ್ರಯಾಣಿಕ." ಎಂದೆ.

"ಇಲ್ಲೇಕೆ ಬಂದೆ? ಇದು ಸ್ಮಶಾನ."

"ಹಾದಿ ತಪ್ಪಿತು. ಬಂದೆ."

"ಹಾಹಾಹಾಹಾ... ವಿಕಾರವಾಗಿ ನಕ್ಕಳವಳು.

ಇವಳು ಹುಚ್ಚಿಯಿರಬಹುದೇನೊ ಎಂತ ಯೋಚಿಸಿದೆ. ಕೇಳಿದೆ– "ನೀವಾರು? ನೀವೊಬ್ಬರೇ ಈ ಮಧ್ಯರಾತ್ರಿ ಇಲ್ಲಿ ಏಕೆ?"

ಉತ್ತರವಾಗಿ ಪುನಃ ಅದೆ ಮೇಲಿನ ನಗೆ. ನಗೆ ನಿಂತ ನಂತರ ಅವಳು– "ಹುಚ್ಚಾ! ನಾನು ಭೂತ. ನೀನು ಭೂತದೊಡನೆ ಮಾತಾಡುತ್ತಾ ಇದ್ದಿ." ಎಂದಳು.

ನನ್ನ ಮೈ ಜುಂ ಎಂದಿತು, ರೋಮಾಂಚನವಾಯಿತು; ಬೆದರಿದೆ. ಆದರೂ ಧೈರ್ಯ ನನ್ನನ್ನು ಬಿಟ್ಟಲುಗಲಿಲ್ಲ. ಅಂತಲೇ– "ಏನು, ನೀನು ನಿಜವಾಗಲೂ ಭೂತವೇ?" ಎಂಬ ಆಶ್ಚರ್ಯದ ಮಾತುಗಳನ್ನು ನಾನು ಧೈರ್ಯದಲ್ಲೇ ಕೇಳಿದೆ.

"ಹಾಹಾಹಾಹಾಹಾ... ನೋಡು! ನನ್ನ ಪಾದಗಳನ್ನು!" ವಿಕಾರ ನಗೆಯೊಡನಂದಳವಳು.

ನಾನವಳ ಪಾದಗಳನ್ನು ನೋಡಿದೆ. ಕಾಲಿನ ಪಾದಗಳು ಬೆನ್ನಿನ ಕಡೆಗಿದ್ದುವು. ನನ್ನ ಕುತೂಹಲ ಏರಿತು. ಅವಳನ್ನು ಸರಿಯಾಗಿ ಪರೀಕ್ಷಿಸಿದೆ. ಲಕ್ಷಣಗಳ ಪ್ರತಿಯೊಂದು ಅಂಶವೂ ಶುದ್ಧ ಭೂತದ್ದೆ. ಇಷ್ಟರಲ್ಲೇ ನನ್ನ ಧೈರ್ಯ, ಇನ್ನಷ್ಟು ದೃಢವಾಗಿ ಬಲಗೊಂಡಿತು. ಮತ್ತೇಕೆ ಹೆದರಬೇಕು? ಕೇಳಿದೆ–

"ನಿನಗೆ ಪಿಶಾಚಿ ಜೀವನ ಒಗ್ಗುವುದೇ?"

"ನಿನಗೆ ಮಾನವ ಜೀವನ ಒಗ್ಗುವುದೇ?" ಇದು ಅವಳ ಒರಟಾದ ಧ್ವನಿಯಲ್ಲಿ ಹೊರಬಂದ ಪ್ರಶ್ನೆ. ಇದಕ್ಕೇನು ಉತ್ತರ ಕೊಡಬೇಕು? ಆದರೂ– "ಮಾನವ ಜೀವನದಲ್ಲಿದ್ದರೆ, ಗುಣನಡತೆಗಳು ಚೆನ್ನಾಗಿದ್ದರೆ, ಸತ್ಪುರುಷನಾಗಿ, ಕೀರ್ತಿವಂತನಾಗಿ ಬಾಳಬಹುದು. ಆತ್ಮಗಳಿಗೆ ಮುಕ್ತಿಯೂ ದೊರಕಬಹುದು." ಎಂದೆ.

"ಹುಚ್ಚಾ! ಮಾನವರಷ್ಟು ನೀಚರು ಈ ಬ್ರಹ್ಮಸೃಷ್ಟಿಯಲ್ಲಿ ಇನ್ನಾರೂ ಇಲ್ಲ" ಎಂದು ಆರ್ಭಟಿಸಿತು, ಆ ಪಿಶಾಚಿ.

"ಮಾನವರ ಮೇಲೆ ನಿನಗೇಕೆ ಇಷ್ಟು ಜಿಗುಪ್ಸೆ?"

"ನಾನು ಪಿಶಾಚಿಯಾದಂದಿನಿಂದ ಆ ಮಾನವ ಜೀವನಕ್ಕಿಂತಲೂ, ಈ ಜೀವನವೇ ಉತ್ತಮವೆಂದು ಕಂಡುಕೊಂಡಿದ್ದೇನೆ." ಒರಟಾದ ಧ್ವನಿಯಲ್ಲಿ ಶಾಂತವಾದ ಮಾತುಗಳು ಹೊರ ಬಂದವು.

"ಮಾನವ ಜಾತಿ ನಿನಗೇನನ್ಯಾಯ ಮಾಡಿತು?" ನಾನು ಸಹಜವಾಗಿ, ಕುತೂಹಲದಿಂದ, ಧೈರ್ಯದಲ್ಲೇ ಕೇಳಿದೆ.

"ಹಾಹಾಹಾಹಾಹಾ.....!" ವಿಕಾರವಾದ ನಗೆ "ಕೂಕ್ಕೂಕ್ಕೂಕೂ.." ಭಯಂಕರ ಆರ್ಭಟಿ. "ನನ್ನ ಮಾನವ ಜೀವನದಲ್ಲಿಯ ಕಥೆಯನ್ನು ಕೇಳಲಪೇಕ್ಷಿಸುವೆಯಾ?" ಮತ್ತೆ ವಿಚಿತ್ರ ಪ್ರಶ್ನೆ.

ಅವಳ ನಗೆ, ಅದನ್ನೇ ಅನುಸರಿಸಿ ಬಂದ ಭಯಂಕರ ಆರ್ಭಟ. ನನ್ನ ಧೈರ್ಯವನ್ನೇನೋ ಸ್ವಲ್ಪ ಮಟ್ಟಿಗೆ ಕಲಕಿತು. ಆದರೆ ಆತ್ಮಶಕ್ತಿ ಈ ಕಿಲ್ಬಿಷವನ್ನು ಕಿತ್ತೆಸೆಯುವುದರಲ್ಲಿ ತಡಮಾಡಲಿಲ್ಲ. ಅಂತಲ್ಲೇ ಸ್ವಸ್ಥಾನದಲ್ಲೇ ಸುಧಾರಿಸಿ ಅವಳ ಪ್ರಶ್ನೆಗೆ– "ಖಂಡಿತವಾಗಿ ಹೇಳು ಹೇಳು ನೋಡೋಣ. ನಾನೇನು ನೀನು ತಿಳಿಕೊಂಡಂತೆ ಅಲ್ಪ ಮಾನವನು ಅಲ್ಲ." ಎಂಬ ಕಟ್ಟುನಿಟ್ಟಾದ ಉತ್ತರವನ್ನೆ ಕೊಟ್ಟೆ.

ಆಗವಳು ತನ್ನ ಮಾನವ ಜೀವನದಲ್ಲಿಯ ಕಥೆಯನ್ನು ಹೀಗೆ ಹೇಳತೊಡಗಿದಳು–

"ನಾನು ಮಾನವಳಾಗಿದ್ದಾಗ ಇದೇ ಹಳ್ಳಿಯ 'ಭೋಲೀ ಭಾಲೆ' ಬಾಲಕಿಯಾಗಿದ್ದೆ. ದಿನಗಳು ಕಳೆದಂತೆ, ಹೃದಯವರಳಿದ– ಆದರೆ ಜ್ಞಾನ ವಿಕಾಸವಾಗದ– ಇದೇ ಹಳ್ಳಿಯ ನವ ಯುವತಿಯಾದೆ. ಊರ ತರುಣರ ಕಣ್ಣೋಟಗಳನ್ನು ನನ್ನ ಸೌಂದರ್ಯ ಆಕರ್ಷಿಸುತ್ತಿತ್ತು. ಮುದುಕರೂ ಸಹ ನಿಂತು ನನ್ನನ್ನು ದೃಷ್ಟಿಸದೆ, ಹೆಜ್ಜೆ ಮುಂದಿಡುತ್ತಿರಲಿಲ್ಲ. ಅಂದರೆ ನಾನೊಬ್ಬ ಚಲುವೆಯಾದ ತರುಣಿಯಾಗಿದ್ದೆ. ಇದೇ ಸಮಯದಲ್ಲಿ ನಮ್ಮ ನೆರೆ ಮನೆಯ–ಆದರೆ ಬಹು ಬಡವನಾದ– ರಾಮಣ್ಣ ಎಂಬೊಬ್ಬ ಸರ್ವಗುಣ ಸಂಪನ್ನ ತರುಣನು ನನ್ನ ಹೃನ್ಮಂದಿರವನ್ನು ಹೊಕ್ಕು ಪ್ರೇಮಭಿಕ್ಷೆಯನ್ನು ಬೇಡಿದ. ನಾನೂ ಅವನ ಪ್ರೇಮಕ್ಕಾಗಿ ಚಾತಕ ಪಕ್ಷಿಯಂತೆ ಹಾತೊರೆದು ನಿಂತೆ. ಅಂದಿನಿಂದ ಕೆಲವು ದಿನಗಳನ್ನು ಮಾತ್ರ ನಾವು ಆನಂದದಿಂದ ಕಳೆದೆವು.

"ನನ್ನ ತಾಯಿ ಈಗಲೂ ಅದೇ ಮನೆಯ ಒಡತಿ. ಧನರಾಕ್ಷಸಿಯ ನಚ್ಚಿನ ಭಕ್ತಳು. ಇಂಥಾ ಧನಮದಾಂಧೆಗೆ ನನ್ನ ಜೀವನ–ರಾಮಣ್ಣನೊಡನೆ ಬಡತನದಲ್ಲೇ ಬದುಕಿ ಸೊಗಸಾಗಿ ಬಾಳುವದು ಬೇಕಾಗಿರಲಿಲ್ಲ. ಅಂತಲೇ ನಮ್ಮ ಪ್ರೇಮಪ್ರವಾಹದ ಮಧ್ಯ ಬಲವಾದ ತಡೆಯ ಕಟ್ಟೆಯನ್ನು ಕಟ್ಟಿದಳವಳು. ಇದಕ್ಕೆ ಓರ್ವ ಸ್ತ್ರೀಲಂಪಟ, ಮೂರ್ಖ ಧನವಂತ. ನಿರ್ಬಲ ವ್ಯಕ್ತಿ ಆಧಾರ ಸ್ಥಂಭವಾಗಿ ನಿಂತ.

"ನಾನು ಸ್ಕೂಲು ಕಂಡವಳಲ್ಲ; ಓದು ಬರಹಗಳನ್ನು ತಿಳಿದವಳೂ ಅಲ್ಲ. ಆದರೂ–ನಾನು ಈ ಜನ್ಮ ತಾಳುವುದಕ್ಕೆ ಮೊದಲು ಸ್ವರ್ಗವಾಸಿಗಳಾದ– ನನ್ನ ದೇವಪ್ರಿಯ ಪಿತರು ನನಗಾಗಾಗ, ಸಾವಿತ್ರಿ, ಸೀತೆ, ಮುಂತಾದ ಸಾಧ್ವೀಮಣಿಗಳ ಪುಣ್ಯ ಚರಿತ್ರೆಗಳನ್ನು ಬೋಧಿಸುತ್ತಿದ್ದರು ನಾನು ಮಂತ್ರಮುಗ್ಧೆಯಾಗಿ ಅವುಗಳನ್ನು ಕೇಳುತ್ತಿದ್ದೆ; ಅಂತೆ ಆಗಲು ಪ್ರಯತ್ನಿಸುತ್ತಿದ್ದೆ. ಮಾನವರು ಪುರಾಣಗಳಲ್ಲಿಯ ಅಂಥ ಚರಿತ್ರೆಗಳನ್ನು ಬೋಧಿಸಲು ಮಾತ್ರ ಉಪಯೋಗಿಸಿ, ಪುಸ್ತಕದ ಗಂಟಾಗಿಯೇ ಇರಿಸುವರು. ಮತ್ತೆ ಅದರಿಂದ ಸ್ವಾರ್ಥವನ್ನು ಸಾಧಿಸಿಕೊಳ್ಳುವರು. ಇಲ್ಲದಿದ್ದರೆ ನನ್ನ ಇನಿಯನ ದರ್ಶನಕ್ಕಾಗಿ ನಾನೇಕೆ ಇಲ್ಲಿ ಇಷ್ಟು ತವಕ ಪಡಬೇಕಾಗಿತ್ತು? ಈ ಕಥೆಗಳನ್ನು ಕೇಳಿದ ಮೇಲಂತೂ ನಾನು ರಾಮಣ್ಣನನ್ನು ಹೃದಯೇಶ್ವರನನ್ನಾಗಿ ಪ್ರತಿಷ್ಠಿಸಿ, ಆರಾಧಿಸಿದೆ. ಅವನೂ ನನ್ನನ್ನು ತನ್ನ ಎದೆದಾವರೆಯಲ್ಲಿ ಲಕ್ಷ್ಮಿಯಂತೆ ನಿಲ್ಲಿಸಿಕೊಂಡು ಪೂಜಿಸಿದ. ಇದು ತಾಯಿಗೆ ಸರಿ ಬರಲಿಲ್ಲ. ಅವಳಿಗೆ ಕೈ ತುಂಬ ರೂಪಾಯಿ ಬೇಕಿದ್ದಿತು. ನಿರ್ಮಲಪ್ರೇಮಿಗಳ ಮಿಲನದ ಅವಶ್ಯಕತೆ ಅವಳಿಗಿರಲಿಲ್ಲ. ಅಂತಲೇ ಮೇಲೆ ಹೇಳಿದ ನಿರ್ಬಲ ಮೂರ್ಖ ಧನವಂತನನ್ನು. ನನ್ನ ಕುತ್ತಿಗೆಗೆ ಕಟ್ಟಲು ಹೆಣಗಿದಳು."

ಪಿಶಾಚಿ ಜೀವನದಿಂದಲೇನೊ ಸ್ವಲ್ಪ ಸಮಯ ಸುಮ್ಮನಾಯಿತು.

ನಾನು ಕುತೂಹಲನಾಗಿ "ಮುಂದೆ ಮುಂದೆ? ಏನಾಯಿತು?" ಕೇಳಿದೆ.

"ದಿನಗಳು ಉರುಳಿದವು. ಆಗ ದೇಶದಲ್ಲೆಲ್ಲ ಮಿಲಟರಿಯ ಕರೆ. ರಾಮಣ್ಣನೂ ಈ ಕರೆಗೆ ತಲೆಬಾಗಿದ. ಅವನೊಂದು ದಿನ, ಆ ಮುದ್ದು ಮನದ ರಾಜ, ನನ್ನ ಮನೆಯ ಅಡಿಗೆ ಕೋಣೆಗೆ ಬಂದು ನಿಂತು "ಚಿನ್ನಾ! ಚಿನ್ನಾ!" ಎಂತ ತನ್ನ ಇಂಪು ಕಂಠದಿಂದ ಕರೆದ. ನಾನು ಅನ್ನ ಬಾಗಿಸುತ್ತಿದ್ದೆ. ಅಂದು ತಾಯಿ ಇರಲಿಲ್ಲ. ನೆರೆಮನೆಗೆ ಹೋಗಿದ್ದಳು. ಅದು ತಿಳಿದೇ ಅವನು ಬಂದಿದ್ದ.

"ಅವನು ಇನ್ನೊಮ್ಮೆ ಅದೇ ಇಂಪು ಕಂಠದಲ್ಲಿ ಕರೆಯಲೆಂದು ನಾನು ನಗುತ್ತಾ, ತಿರುಗಿ ನೋಡದೆ ನನ್ನ ಕೆಲಸದಲ್ಲಿ ಮಗ್ನಳಾಗಿದ್ದೆ. "ಚಿನ್ನಾ! ಚಿನ್ನಾ!" ನನ್ನ ಮೇಲೆ ಸಿಟ್ಟೇ?" ಅವನು ಕೇಳಿದ.

"ನನಗಿನ್ನೂ [illegible]" ಬಾಗಿಸುವ ಕೆಲಸವನ್ನು ಅರ್ಧದಲ್ಲಿಯೇ ನಿಲ್ಲಿಸಿ, ಮುಗುಳು ನಗೆಯನ್ನು ತಂದುಕೊಂಡು ಅವನತ್ತ ನೋಡಿದೆ. ಅವನ ಮುಖ ಮಲಿನವಾಗಿದ್ದಿತು. ನನ್ನ ಮುಖದ ನಗೆಯೂ ಮಾಯವಾಯಿತು. "ಇಂದು ನಿಮಗೇನಾಯಿತು?" ಎಂತ ನಾನು ಬೇಸರದಲ್ಲಿ ಕೇಳಿದೆ.

"ನಾನು ಮಿಲಿಟರಿಗೆ ಸೇರಿದೆ. ನಾಳೆಯೇ ಹೊರಡಬೇಕು. ಬೀಳ್ಕೊಳ್ಳಲು ಬಂದಿರುವೆನು" ನನ್ನನ್ನೆ ದೃಷ್ಟಿಸುತ್ತಾ ಅವನಂದ.

"ನನಗೆ ಆಕಾಶವೇ ಕಳಚಿಬಿದ್ದಂತಾಯಿತು; ಕಣ್ಣು ಕತ್ತಲು ಬಂದಿತು. ಬಾಯಿಂದ ಮಾತುಗಳೇ ಹೊರಡಲಿಲ್ಲ.

"ಅವನು ಬಂದು ನನ್ನನ್ನು ತಬ್ಬಿದ, ಚುಂಬಿಸಿದ, ಆಗ ನನಗೆ ಅವನ ಬಾಹುಪಾಶದಿಂದ ಬಿಡಿಸಿಕೊಳ್ಳುವುದೇ ಬೇಕಾಗಿರಲಿಲ್ಲ. ಅವನೂ ಬಿಡಿಸಿಕೊಳ್ಳಲು ಪೇಚಾಡಲಿಲ್ಲ. ಬದಲು ಅವನ ಮನಮೋಹಕ ಕಂಗಳಲ್ಲಿ ಬಿಸಿ ಕಣ್ಣೀರ ಹನಿಗಳು ಮೊಳೆತುವು; ಅವುಗಳು ನನ್ನ ತಲೆಯ ಮೇಲೆ ಬಹಳ ಪ್ರೇಮಬಿಂದುಗಳಾಗಿ ಆಶ್ರಯವನ್ನು ಪಡೆಯುತ್ತಿದ್ದುವು. ನನ್ನ ಕಣ್ಣುಗಳಲ್ಲೂ ನೀರು ಉಕ್ಕಿತು. ಅವುಗಳು ಅವನ ಚರಣಗಳಲ್ಲೆರಗಿ, ನನ್ನ ಮನದ ಇಂಗಿತವನ್ನು ತಿಳಿಸುತ್ತಿದ್ದುವು. ಈ ಸುಖದಲ್ಲಿ ನಾವು ಎಷ್ಟು ಸಮಯವನ್ನು ಕಳೆದೆವೊ?

"ತೊಲಗಿಲ್ಲಿಂದ ಶನಿ. ಯಾರ ಮನೆ ಹಾಳು ಮಾಡಲು ಬಂದೆ" ಎಂಬ ಕರ್ಕಶದ ಆರ್ಭಟ ಅಡಿಗೆಕೋಣೆಯ ಹೊಸ್ತಿಲ ಸಮೀಪದಿಂದ ಬಂದಾಗಲೇ ನಮ್ಮ ತಪಸ್ಸು ಭಂಗವಾಯಿತು. ಇಬ್ಬರೂ ಬಾಗಿಲತ್ತ ನೋಡಿದೆವು. ಎದುರು ತಾಯಿ ನಿಂತಿದ್ದಾಳೆ. ಇಬ್ಬರೂ ಬೆದರಿದೆವು. ಬೆವರಿದೆವು; ನಡುಗಿದೆವು. ರಾಮಣ್ಣ ಮುಖ ತಗ್ಗಿಸಿ ಹೊರಟು ಹೋದ. ನನ್ನನ್ನು ಸಂಬಾಳಿಸುವವರು ಯಾರು? ಅಕ್ಕರೆಯಿಂದ ನನ್ನನ್ನು ಮುದ್ದಿಸುತ್ತಿದ್ದ ನನ್ನ ತಂದೆಯವರು ದೇವಲೋಕವಾಸಿಗಳಾಗಿ ಆರು ತಿಂಗಳಾಗಿ ಹೋಗಿತ್ತು. ಪಾಪ! ಅವನಿಗೆ ಹೋಗುವಾಗ ಒಂದು ಮಾತನ್ನೂ ಆಡುವುದಾಗಲಿಲ್ಲ. ಏನೇನು ಮಾತುಗಳ ಕಂತೆಗಳನ್ನು ಮನದಲ್ಲಿ ತುಂಬಿ, ಹೃದಯ ಬಿಚ್ಚಿ ಹೇಳಲು ಬಂದಿದ್ದನೋ? ನನ್ನ ನಾಲಿಗೆಯಂತೂ ಕಿತ್ತಂತಾಗಿ ಹೋಗಿತ್ತು. ಮತ್ತೆರಡು ದಿನಗಳಲ್ಲೇ ಅವನ ಕಾಗದವೊಂದು ನನಗೆ ಬಂದಿತು. ನನ್ನ ಆತ್ಮೀಯರಾಗಿ ಅದನ್ನು ನನಗೆ ಓದುವವರು ಯಾರು? ಆದರೂ ಅದನ್ನಾಗ ರತ್ನದಂತೆ ನನ್ನ ಸೊಂಟದಲ್ಲಿ ಮಡಗಿರುತ್ತಿದ್ದೆ. ಏಕಾಂತದಲ್ಲಿದ್ದಾಗ, ಅವನ ಮುದ್ದು ಮುದ್ದಾದ ಅಕ್ಷರಗಳನ್ನು ಮನದಣಿಯೆ ನೋಡುತ್ತಿದ್ದೆ; ನಮಸ್ಕರಿಸುತ್ತಿದ್ದೆ; ಭಕ್ತಿಯನ್ನರ್ಪಿಸುತ್ತಿದ್ದೆ.

"ರಂಪಾಟದ ಮರುದಿನ ತಾಯಿ ನನ್ನ ಎದುರು ನಿಂತು– "ನೋಡು! ಗೌರಿ, ಅವನಂತೂ ಇಂದು ಮಿಲಿಟರಿಗೆ ಹೊರಟುಹೋದ. ಅವನು ಬದುಕಿ ಮರಳುತ್ತಾನೋ, ಅಲ್ಲಿ ಸತ್ತೇಹೋಗುತ್ತಾನೋ? ಈಶ್ವರನ ಲೀಲೆ ಅದಾರಿಗೆ ಗೊತ್ತು? ಈಗ ನೋಡು! ಹಟ ಮಾಡಬೇಡ. ಭಾಗ್ಯ ತಾನೇ ತಾನಾಗಿ ನಮ್ಮತ್ತ ಬರುತ್ತಿದೆ. ಕಳಕೊಳ್ಳಬೇಡ. ಸುಖಪುರುಷನನ್ನು ವರಿಸು; ಭಾಗ್ಯಶಾಲಿಯಾಗಿ ಬಾಳು. ಅಲ್ಲದೆ ಇಂದೋ ನಾಳೆಯೋ ನಾನು ಕಣ್ಣುಮುಚ್ಚಿಕೊಂಡರೆ ನಿನ್ನ ಗತಿಯೇನು? ಮರ್ಯಾದೆಯಿಂದ ಕಾಲ ಕಳೆದ ನಾವು, ನಾಳೆಯೂ ಮರ್ಯಾದೆಯಿಂದ ಇರಬೇಡವೆ? ನೀನು ಬೀದಿಯ ಭಿಕಾರಿಯಾದರೆ ನಮ್ಮ ಮನೆತನಕ್ಕೆಷ್ಟು ಅವಮಾನ. . . ಇನ್ನು ಮುಂತು ಮುಂತಾಗಿ ತುಂಬಾ ಬೋಧಿಸಿದಳು. ನಾನು ಯಾವ ತರ್ಕಕ್ಕೂ ಸೊಪ್ಪು ಹಾಕಲಿಲ್ಲ.

"ರಾಮಣ್ಣ ಊರು ಬಿಟ್ಟಂದಿನಿಂದ ನಾನು ಅನ್ನ ನೀರು ಸರಿಯಾಗಿ ತೆಗೆದು ಕೊಳ್ಳಲಿಲ್ಲ. ಇದರಿಂದ ಬರೇ ನಾಲ್ಕೇ ತಿಂಗಳಲ್ಲಿ ಬಹು ಕೃಶಳಾಗಿ ಹೋದೆ. ಆಗಲೇ ನನ್ನ ತಾಯಿಯು ಮತ್ತು ಆ ಧನಿಕನೆಂದೆನಿಸಿ ಕೊಂಡಿದ್ದ ಮಾನವ ಪಿಶಾಚಿಯ ನೇತೃತ್ವದಲ್ಲಿ ಕಪಟನಾಟಕವೊಂದು ನಡೆಯಿತು. ನಾನು ಓದು ಬರಹ ಬಾರದ ಹೆಣ್ಣೆಂದು ನಿನಗೆ ಮೊದಲೇ ಹೇಳಿದ್ದೆ ತಾನೆ. ಇದೇ ಈ ಶಕುನಿಗಳಿಗೆ ಪಗಡೆಯ ದಾಳವಾಯಿತು. ಅವರೊಂದು ಕಾಗದವನ್ನು ನನಗೆ ತೋರಿಸಿದರು. ಅದು ಮಿಲಿಟರಿ ಅಧಿಕಾರಿ ಬರೆದ ಕಾಗದವಂತೆ. ಆ ಪತ್ರದ ಪ್ರಕಾರ ರಾಮಣ್ಣ ಯುದ್ಧದಲ್ಲಿ ಮಡಿದಿದ್ದ. ನನಗಾಗ ಏನು ಎಂಥ ಬರಸಿಡಿಲಾಗಿತ್ತು. ನಾನು ತಾಳ್ಮೆಗೆಟ್ಟೆ; ಅವರ ಮಾತನ್ನು ನಂಬಿದೆ ಎಂಥ. ಕಡು ಪಾಪಿಗಳು ಅವರು! ಈ ಪಿಶಾಚಿ ಪ್ರಸಂಗಕ್ಕೆ ಬಂದ ಮೇಲೆ

[೧೩ನೆಯ ಪುಟಕ್ಕೆ]

ನೆಹರು ಸರಕಾರದಲ್ಲಿ ಸಂಪೂರ್ಣ ವಿಶ್ವಾಸ

ಭಾಷಾನುಗುಣ ಪ್ರಾಂತರಚನೆಯ ಪುನರ್ವಿಮರ್ಶೆಗೆ ಸಮಿತಿ

ರಾಷ್ಟ್ರಕ್ಕೆ ಶುದ್ಧವರ್ತನೆಯ ಕರೆ

ಜಯಪುರ ಕಾಂಗ್ರೆಸ್ಸಿನ ಕಾರ್ಯಕಲಾಪಗಳು

ಜಯಪುರದ ೫೫ ನೆಯ ರಾಷ್ಟ್ರೀಯ ಮಹಾಸಭೆಗೆ ನಿಯೋಜಿತ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಕುಟುಂಬದ ಪರಿವಾರದೊಂದಿಗೆ ತಾ. ೧೫ ಬುಧವಾರ ಮಧ್ಯಾಹ್ನ ೩ ಕ್ಕೆ ವಿಶೇಷ ಗಾಡಿಯಿಂದ ಗಾಂಧೀ ನಗರಕ್ಕೆ ಆಗಮಿಸಿದರು. ಈ ಅಧಿವೇಶನಕ್ಕೆ ರಚಿತವಾದ ಮಹಾನಗರಿಗೆ ಗಾಂಧೀ ನಗರವೆಂಬ ನಾಮಕರಣ. ಸ್ವಾಗತ ಸಮಿತಿಯ ಅಧ್ಯಕ್ಷರೇ ಮೊದಲಾದವರು ಡಾ. ಪಟ್ಟಾಭಿಯವರನ್ನು ಬಹಳ ಸಂಭ್ರಮದಿಂದ ಸ್ವಾಗತಿಸಿದರು. ಮೂರು ಮೈಲುದ್ದದ ಮೆರವಣಿಗೆಯು ೪ ಮೈಲಿನ ದಾರಿಯಲ್ಲಿ ಸರಿಸರಿಸು ಗಾಂಧೀ ನಗರಕ್ಕೆ ಬಂದು ತಲುಪಲು ೪ ತಾಸುಗಳು ಬೇಕಾದವು. ಡಾ. ಪಟ್ಟಾಭಿಯವರು ಶುಭ್ರವಾದ ಬೆಳ್ಳಿಯ ರಥದಲ್ಲಿ ಆಸೀನರಾಗಿದ್ದರು. ರಥಕ್ಕೆ ಧವಲವರ್ಣದ ಪರಿಪುಷ್ಟ ಗೋಪುರಗಳ ಶಿಖರ ಎಲ್ಲಿ ನೋಡಿದಲ್ಲಿ ಜನರೇ ಜನರು. ಮೆರವಣಿಗೆಯಲ್ಲಿ ನಡುನಡುವೆ ಗಾಂಧೀಕಿಜಯ, ರಾಷ್ಟ್ರಪತೀಕಿಜಯ ಎಂದು ಜಯಘೋಷನಾಗುತ್ತಿತ್ತು. ರಾಷ್ಟ್ರಪತಿಗಳು ನಡುನಡುವೆ ಕೈಜೋಡಿಸಿ ಜನಸಾಗರಕ್ಕೆ ತಲೆ ಬಾಗುತ್ತಿದ್ದರು.

ಧ್ವಜಾರೋಹಣ

ಗುರುವಾರ ತಾ ೧೬ ರಂದು ಮುಂಜಾನೆ ರಾಷ್ಟ್ರಪತಿ ಡಾ. ಪಟ್ಟಾಭಿಯವರು ಗಾಂಧಿ ನಗರದ ಝೇಂಡಾ ಚೌಕಿನ ವಿಶಾಲ ಪಟಾಂಗಣದಲ್ಲಿ ೫೫ ಅಡಿ ಎತ್ತರದ ಧ್ವಜಾರೋಹಣವನ್ನು ನೆರವೇರಿಸಿ ಈ ದಿನದ ಕಾರ್ಯಾರಂಭ ಮಾಡಿದರು. ಎತ್ತರವಾದ ವೇದಿಕೆಯಲ್ಲಿ ನಿಂತ ಧ್ವಜವನ್ನು ತಳಿರು ತೋರಣ ಹೂಗಳಿಂದ ಸಿಂಗರಿಸಲಾಗಿತ್ತು. ಧ್ವಜಾರೋಹಣದ ನಂತರ "ಜನಗಣಮನ" ಹಾಡಲಾಯಿತು. ರಾಷ್ಟ್ರಪತಿಗಳ ಸಮಯೋಚಿತ ಭಾಷಣದ



ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ



ಧ್ವಜವಂದನೆಯ ನಂತರ ಅಧ್ಯಕ್ಷ ಪಟ್ಟಾಭಿಯವರು ಭಾಷಣ ಮಾಡುತಿರುವರು

ರಜಪೂತಾನದ ನಾಲ್ಕು ಸಿಂಗರಿಸಿದ ಹೋರಿಗಳನ್ನು ಹೂಡಲಾಗಿತ್ತು. ರಥದ ಮುಂದೆ ೩೫೦ ಮೈಲು ದೂರದ ಮೀರತದಿಂದ ತಂದ ಅಖಂಡ ಜ್ಯೋತಿಯು ಸಾಗಿತ್ತು. ಅಧ್ಯಕ್ಷರ ರಥದ ಹಿಂದೆ ಮುಂದೆ ಅಶ್ವಾರೋಹಿಗಳಾದ ಸ್ವಯಂ ಸೇವಕರೂ ಕಾಲುಗಾಡಿಯವರೂ ಇದ್ದರು. ತಾಳ ಪಾಕಿ ಬೇಂಡಿನವರು ಸಾಗಿದ್ದರು. ಎರಡು ಬೃಹದಾಕಾರದ ಆನೆಗಳು ಎಂದು ತ್ರಿವರ್ಣ ಧ್ವಜವನ್ನು ಉನ್ನತವಾಗಿ ಎತ್ತಿ ಹಿಡಿದು ಸಾಗಿದ್ದವು. ದಾರಿಯುದ್ದಕ್ಕೂ ಉಪ್ಪರಿಗೆಗಳಿಂದ ಪುರನಾರಿಯರೇ ಮೊದಲಾದವರು ಪುಷ್ಪ ವೃಷ್ಟಿ ಸುರಿಸಿದರು.

ಬೀದಿಗಳಲ್ಲಿ ಹರಿವ ಜನಪ್ರವಾಹವಲ್ಲದೆ ಉಪ್ಪರಿಗೆ ಮಾಳಿಗೆ ಮರದಕೊಂಬೆ ಗುಡಿ

ನಂತರ ೮ ಸಾವಿರ ಸ್ವಯಂ ಸೇವಕರೂ ೨ ಸಾವಿರ ಸ್ವಯಂ ಸೇವಿಕೆಯರೂ ಅವರಿಗೆ ಗೌರವರಕ್ಷೆ ಸಲ್ಲಿಸುವಾಗ ಸೂರ್ಯದೇವನ ಮುಂಜಾವಿನ ಸುಖೋಷ್ಣ ರಶ್ಮಿಗಳು ಮುತ್ತಿ ಎಲ್ಲರ ಮುಖಗಳೂ ಅಭೂತಪೂರ್ವ ಆನಂದೋತ್ಸಾಹಗಳ ಹೊಳಪನ್ನು ತಂದವು. ಡಾ. ಪಟ್ಟಾಭಿಯವರು ಹಿಂದುಸ್ತಾನಿಯಲ್ಲಿ ಮಾತನಾಡಿ ನಮ್ಮ ಈ ತ್ರಿವರ್ಣ ಧ್ವಜಕ್ಕೆ ಕಾಕದೃಷ್ಟಿ ತಾಕದಂತೆ ದೃಷ್ಟಿಯಾಗದಂತೆ ಅದನ್ನು ಜೋಪಾನವಾಗಿ ಕಾಪಾಡಿಕೊಳ್ಳಿರೆಂದು ಬೇಡಿದರು.

ಸಮುದುಃಖಿಗಳೇ ?

ಗುರುವಾರ ಮುಂಜಾನೆ ವಿಶೇಷ ವಿಮಾನದಿಂದ ಪಂ. ನೆಹರು ಮತ್ತು ಸರದಾರ ಪಟೇಲರು ಬಂದು ಜಯಪುರ ಮಹಾರಾಜರ ಅತಿಥಿಗಳಾಗಿ ಉಳಿದರು. ಇಂತು ಸಾಮಾನ್ಯವಾಗಿ ಎಲ್ಲ] ಮುಂದಾಳುಗಳೂ ಕೇಂದ್ರದ ಮತ್ತು ಪ್ರಾಂತಗಳ ಮಂತ್ರಿಗಳೂ ಬಂದರೆಂದು ಹೇಳಬಹುದು. ಜನಸಮ್ಮರ್ದವು ನಿರೀಕ್ಷೆ ಮೀರಿ ನೆರೆದಿದ್ದರಿಂದ ಎಲ್ಲೆಲ್ಲಿಯೂ ಗೊಂದಲವೇ ಗೊಂದಲ. ಕಾರುಗಳು, ಬಸ್ಸುಗಳು ಜೀಪುಗಳು, ಸಾಮಾನುಗಳ ಟ್ರಕ್ಕುಗಳು ಇತರ ವಾಹನಗಳು ಇವೇ ಮೊದಲಾದವುಗಳಿಂದ ಮತ್ತು ಜನರ ಕಾಲ್ತುಳಿತದಿಂದ ಎದ್ದ ಧೂಳಿಯಲ್ಲಿ ಹಗಲು ಕೂಡ ಒಬ್ಬರ ಮುಖ ಒಬ್ಬರಿಗೆ ಕಾಣದಂತಾಯಿತು. ಶುಕ್ರವಾರವಂತೂ ಪಾಪ, ಓರ್ವ ಮಹಿಳೆಯು ತನ್ನ ಗಂಡನನ್ನು ಕಳೆದುಕೊಂಡು ಅಸಹಾಯಳಾಗಿ ಡಾ. ಪಟ್ಟಾಭಿಯವರಿಗೆ ಮೊರೆಹೊಕ್ಕು ಮೈಕ್ರೋಫೋನಿನ ಘೋಷಣೆಯ ಸಹಾಯ ಕೋರಿದಳು. ಪುನರ್ಮಿಲನ ಘಟಿಸಿರಲು ಸಾಕು. ಜನರಿಗೆ ಸೌಕರ್ಯ ಒದಗಿಸುವದು ಅನ್ನ ವಾಸ ಪೂರೈಸುವದು ನಗರದ ವ್ಯವಸ್ಥಾಪಕರ ಅಳವು ಮೀರಿ ಹೋಯಿತು. ಬೇಕಾದುದೆಲ್ಲ ದುರ್ಮಿಳವೇ. ಒಂದು ಬಟ್ಟಲು ಚಹ ಕಾಫಿ ೬ ಆಣೆ ಕೊಟ್ಟರೂ ಸಿಗುವದು ಕಷ್ಟವಾಯಿತು ೧೧ ರೂಪಾಯಿ ಕೊಟ್ಟರೂ ಒಂದು ಊಟ ದೊರಕುವ ಭರವಸೆ ಇರಲಿಲ್ಲ. ಪ್ರತಿನಿಧಿಗಳು ತಮ್ಮ ನಿವಾಸವನ್ನು ಹುಡುಕಿಕೊಂಡು ಮಾರ್ಗದರ್ಶಕರಿಲ್ಲದೆ ದಿಕ್ಕು ತಪ್ಪಿ ಸುತ್ತಾಡಲು. ಉಳಿದುಕೊಳ್ಳುವ ಸ್ಥಳಕ್ಕಾಗಿ ಪ್ರಾಂತಿಕ ಮಂತ್ರಿಗಳು ಕೂಡ ಸಾಲಾಗಿ ನಿಲ್ಲಲೂ ಬೇಕಾಯಿತು. ಅಜ್ಞಾತ ಶ್ರೇಷ್ಠರಂತೆ ಅವರೂ ಸ್ಥಳ ಹುಡುಕಿಕೊಂಡು ಸುತ್ತಾಡಲೂ ಬೇಕಾಯಿತು. ನೇತಾರರ ಶಿಬಿರವು ಮಾತ್ರ ಪ್ರಶಸ್ತವಾಗಿತ್ತು, ಎಲ್ಲ ಸುಖ ಸೌಕರ್ಯಗಳಿಂದಲೂ ಸಜ್ಜಿತವಾಗಿತ್ತು. ಈ ಗೊಂದಲ ಗದ್ದಲಗಳು ಕಿಸೆ ಕತ್ತರಿಸುವವರಿಗೆ ಮಾತ್ರ ಹಬ್ಬವನ್ನುಂಟು ಮಾಡಿತೆನ್ನಬೇಕು. ಯಾಕೆಂದರೆ ಸಹಸ್ರಾರು ಜನರು ತಮ್ಮ ಹತ್ತಿರದ ಹಣ ಕಳೆದುಕೊಂಡು ಅನ್ನ ನೀರಿಗೆ ಎರವಾಗಬೇಕಾಯಿತು.

ಗಾಂಧೀನಗರ ರಚನೆಗೆ ೫೦ ಲಕ್ಷ ರೂ.

ಗಾಂಧಿನಗರದಲ್ಲಿ ೬೦ ಸಾವಿರ ಜನ ಪ್ರತಿನಿಧಿ ಮತ್ತು ಪ್ರೇಕ್ಷಕರಿಗೆ ಮಾತ್ರ ವಾಸಸೌಕರ್ಯ ಮಾಡಲಾಗಿತ್ತು. ಇಲ್ಲಿಯ ಒಂದು ವೈಶಿಷ್ಟ್ಯವೆಂದರೆ ೧೫ ಸಾವಿರ ಹಳ್ಳಿಗರಿಗೆ ಮುಕ್ತ ನಿವಾಸಕ್ಕೆ ಅನುಕೂಲತೆ ಒದಗಿಸಿದ್ದು. ಗಾಂಧೀ ನಗರ ರಚನೆಗೆ ೫೦ ಲಕ್ಷಕ್ಕೆ ಮಿಕ್ಕಿ ವೆಚ್ಚವಾಗಿದೆಯೆಂದು ತಿಳಿಯುತ್ತದೆ. ಅಲ್ಲಿ ೧ ಸಾವಿರ ಪತ್ರಿಕಾಕರ್ತರಿಗೆ ಉಳಿದುಕೊಳ್ಳಲು ವ್ಯವಸ್ಥೆಯಾಗಿತ್ತು.

ಅ. ಭಾ. ಕಾಂಗ್ರೆಸಿನ ವಿಷಯ ನಿಯಾಮಕ ಸಮಿತಿಯು ತಾ. ೧೬ ರಂದು ಮಧ್ಯಾಹ್ನ ೨-೧೫ ಕ್ಕೆ ಅಲಂಕೃತ ವಿಶಾಲ ಮಂಟಪದಲ್ಲಿ ಸೇರಿತು. ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಅಧಿವೇಶನಕ್ಕೆ ಅನಾರೋಗ್ಯ ಮೂಲಕ ಬಾರದ್ದರಿಂದ ಸರದಾರ ಪಟೇಲರು ತಾತ್ಕಾಲಿಕ ಅಧ್ಯಕ್ಷರಾಗಿದ್ದರು. ವಂದೇಮಾತರಂ ಗೀತದಿಂದ ಕಾರ್ಯಾರಂಭವಾಯಿತು. ಪ್ರಧಾನ ಕಾರ್ಯದರ್ಶಿ ಶ್ರೀ. ಶಂಕರರಾವ ದೇವರು ಹಿಂದಿನ ಸಭೆಯ ವರದಿಯನ್ನೂ ಕಾಂಗ್ರೆಸ್ಸಿನ ವಾರ್ಷಿಕ ವರದಿಯನ್ನೂ ಓದಿದರು. ಅನುಮೃತರ ಪಟ್ಟಿಯನ್ನು ಸಭೆ ಸ್ವೀಕರಿಸಿತು. ಆ ಮೇಲೆ ಸರದಾರ ಪಟೇಲರು ಡಾ. ಪಟ್ಟಾಭಿಯವರನ್ನು ಅಧ್ಯಕ್ಷ ಪೀಠಕ್ಕೆ ಬರಹೇಳಿ ಅವರ ತ್ಯಾಗವನ್ನು ಪ್ರತಿಭೆಯನ್ನು ಬಣ್ಣಿಸಿ ಡಾ. ಪಟ್ಟಾಭಿಯವರು ಸಂಸ್ಥಾನಿಕ ಪ್ರಜೆಗಳ ಚಳವಳದ ಅಧ್ವರ್ಯುಗಳೆಂದು ಹೇಳಿದರು. ಪ್ರಚಂಡ ಕರತಾಡನ ಜಯಘೋಷಗಳ ಮಧ್ಯದಲ್ಲಿ ಪಟ್ಟಾಭಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

[೬ನೆಯ ಪುಟಕ್ಕೆ]



ಅಧ್ಯಕ್ಷರ ಮೆರವಣಿಗೆಯ ಮುಂಭಾಗದಲ್ಲಿ ಸ್ವಯಂ ಸೇವಕ-ಸೇವಿಕೆಯರು



ಸರ್ವೋದಯ ಪ್ರದರ್ಶನಿಯ ಮಹಾದ್ವಾರ – ಚಿತ್ರ ಶ್ರೀ ನಾರಾಯಣರಾವ ಕುಲಕರ್ಣಿ

ಜನಮತ

ಮಹಿಷಾಹುತಿ

ಮೈಸೂರು ಸಂಸ್ಥಾನದ ಹಾಸನ ಡಿಸ್ಟ್ರಿಕ್ಟ್ ಹುಂಜರಾಬಾದು ತಾಲೋಕು ಎಸ್ಳೂರು ಹೋಬಳಿ ಗ್ರಾಮಸ್ಥರು ಸೇರಿ ಒಂದು ಭದ್ರಕಾಳಿ ದೇವರ ಹಬ್ಬವನ್ನು ಪ್ರತಿವರ್ಷವೂ ಆಚರಿಸುತ್ತಾರೆ. ಈ ಹಬ್ಬದ ಮಹಿಷಾಹುತಿಗಾಗಿ ಸರಕಾರದವರು ೧೨-೮-೦ ಯನ್ನು ಪ್ರತಿ ವರುಷವೂ ಕೊಡುವ ರೂಢಿ ಇದೆ. ಎರಡು ವರ್ಷಕ್ಕೊಂದಾವರ್ತಿ ಆ ದೇವಿಗೆ ಮಹಿಷಾಹುತಿಯನ್ನು ಕೊಡುತ್ತಾರೆ. ಈ ಬಾರಿ ಹಬ್ಬವನ್ನು ಆಚರಿಸುವ ದಿನ ೧೩-೩-೪೯ ಮೇಲ್ಜಾತಿ ಹಿರುವ ಗ್ರಾಮಸ್ಥರು ಸೇರಿ ದೇವಿಯ ಕಾರ್ಯವಾದ ನಂತರ ಆ ಮಹಿಷವನ್ನು ಕಡಿಯುತ್ತಾರೆ. ಮಾರನೆದಿವಸ ಮಹಿಷದ ಕೆಳಭಾಗವನ್ನು ಅಂದರೆ ಅರ್ಧ ಭಾಗವನ್ನು ಹೆಸ್ತೂರು ಮುಂದೆ ಹರಿಜನರೂ ಮೇಲ್ಭಾಗದ ಅರ್ಧ ಮಾಂಸವನ್ನು ಒಜಗೂರು ಮುಂದೆ ಹರಿಜನರೂ ಔತಣ ಮಾಡುವರು. ಘನ ಸರಕಾರವು ಇಂಥ ಹೀನ ಪಾಶಕರವಾದ ಕಾರ್ಯಗಳಿಗೆ ಹಣವನ್ನು ಸಹಾಯ ಕೊಡುವದಾದರೆ ಮಾದರಿ ಸಂಸ್ಥಾನವೆಂಬುದು ಹೆಚ್ಚು ದಿನ ಉಳಿಯಲಾರದು. ಇದು ಯಾರ ಅಜ್ಞಾನವೆಂದು ಹೇಳಲಾಗುವದಿಲ್ಲ. ಅವಿದ್ಯೆ ಮತ್ತು ಅಜ್ಞಾನದಿಂದ ಮಲೆನಾಡಿನವರು ಮಾಡುತಿರಬಹುದು. ಇದನ್ನು ಕಾಂಗ್ರೆಸು ಸರಕಾರವು ಮತ್ತು ಪ್ರಾಣಿ ಸಂರಕ್ಷಕ ಸಂಘದವರು ವಿಚಾರಿಸಿ ನಿಲ್ಲಿಸುವಂತೆ ಮಾಡಬೇಕು.

— ಪ್ರಾಣಿ ದಯೆಯುಳ್ಳವ

ಭಾಷಣಪಾಂಡಿತ್ಯ

ಹೆಂಡತಿ — ನಮ್ಮ ಮಗು ಮುಂದೆ ಬಹು ದೊಡ್ಡ ಭಾಷಣಕಾರ್ತಿಯಾಗಿ ವಿಜಯಲಕ್ಷ್ಮಿ ಪಂಡಿತರನ್ನೂ ಮೀರಿಸಿ ಬಿಡುತ್ತದೆ ಅಂತೀಯಲ್ಲಾ, ಅದು ಹೇಗೆ?

ಗಂಡ — ನಾನು ನೋಡಿದ ಮಕ್ಕಳಲ್ಲಿ ಯಾವುದೂ ಇದರಂತೆ ಕೇಳಲಿಕ್ಕೆ ಬಹಳ ಇಂಪಾಗಿದ್ದು ಅರ್ಥವೇನೂ ಇಲ್ಲದ ಇಷ್ಟು ಮಾತುಗಳನ್ನು ಆಡುತ್ತಿದ್ದಿಲ್ಲ.

ಮಾನ್ಯ ದಿವಾಕರರ ಪ್ರವಾಸ ಕಾರ್ಯಕ್ರಮ:

ಹಿಂದುಸ್ಥಾನ ಸರಕಾರದ ಸುದ್ದಿ ಹಾಗು ಆಕಾಶವಾಣಿ ಮಂತ್ರಿಗಳಾದ ಮಾನ್ಯ ದಿವಾಕರರ ಪ್ರವಾಸ ಕಾರ್ಯಕ್ರಮವು ಕೊನೆಯದಾಗಿ ನಿಶ್ಚಿತವಾದ ಮೇರೆಗೆ ಈ ರೀತಿ ಇರುವದು. ಅವರು ತಾ। ೨೪ ಮುಂಜಾನೆ ವಿಮಾನದಿಂದ ಮದ್ರಾಸಕ್ಕೆ ಹೊರಟು ಸಂಜೆಗೆ ಮದ್ರಾಸ ಮುಟ್ಟಿ ತಾ ೨೫ ರಾತ್ರಿ ವರೆಗೆ ಮದ್ರಾಸದಲ್ಲಿದ್ದು ಉಗಿಬಂಡಿಯಿಂದ ಬೆಂಗಳೂರಿಗೆ ಹೊರಡುವರು. ತಾ ೨೬ ಮುಂಜಾನೆ ಬೆಂಗಳೂರ ತಲುಪುವರು ನೆಹರೂರವರ ಮೈಸೂರ ಕಾರ್ಯಕ್ರಮದಲ್ಲಿ ಅವರೊಡನಿದ್ದು ತಾ ೩೦ ರಾತ್ರಿ ಬೆಂಗಳೂರ ಬಿಟ್ಟು ತಾ ೩೧ ಮಧ್ಯಾಹ್ನ ಮುಬ್ಬೈಗೆ ತಲುಪುವರು. ಅಲ್ಲಿಂದ ಜಾನೇವರಿ ೩ ಮಧ್ಯಾಹ್ನ ಮೇಲಿನಿಂದ ಮುಂಬಯಿಗೆ ಹೊರಟು ಮುಂಬಯಿಯಲ್ಲಿ ತಾ ೪ ರಿಂದ ೩ ದಿವಸ ಇದ್ದು ೭ ನೇ ತಾರೀಖು ಮುಂಜಾನೆ ವಿಮಾನದಿಂದ ದಿಲ್ಲಿಗೆ ತಿರುಗಿ ಹೋಗುವರು.

ಕನ್ನಾಡ ಮೊರೆ

ಉದಯವಾಗಲಿ ನಮ್ಮ ಹರಿದ ಕನ್ನಡ ನಾಡು.
ಬದುಕು ಬಲುಹುಗಳಳಿದ ಕಡು ಬಡತನದ
ಬೀಡು.
ಟಿಪ್ಪುವಿನ ದರ್ಬಾರಿಗೊಳಗಾದ ಕರುನಾಡು
ತಪ್ಪದೇ ಸ್ವಾರ್ಥಿಗಳು ಸುಲಿದು
ಮೆರೆದಿಹ ನಾಡು.
ಇಪ್ಪಲ್ಲಿಗೈನೂರು ಮತಗಳಾ ನೆಲೆವೀಡು
ಸಪ್ಪೆಯಾಗಿಹುದಿಂದು ಭಾರತದಿ ಕನ್ನಾಡು
ಇಪ್ಪ ಮನೆಯೊಳಗೆಯೂ ಒಮ್ಮತವು
ನಲಸಿಹುದೆ,
ಸಿದ್ಧರಾಗಿಹರೆ ಮೈಸೂರಿನವರು,
ಬದ್ಧವಾಗಲು ಕನ್ನಡದ ನಾಡು ಒಂದಾಗಿ
ಶುದ್ಧ ಮನೆಯಾಳ್ತನವ ಸಾಗಿಸುವರೆ?
ಎತ್ತ ನೋಡಲು ಬಿಕ್ಕೆ ಬೇಡುವರೆ ಹೆಚ್ಚಾಗಿ
ಎತ್ತ ನೋಡಲು ಬಟ್ಟೆ ಬರೆಯಿಲ್ಲದವರೆ,
ಎತ್ತ ನೋಡಲು ವೃಥಾಲಾಪಿಗಳೆ
ಕಾಣುವರು
ಬಿತ್ತರಿಸುತಿಹರೆಮ್ಮ ದಾರಿದ್ರ್ಯಮತಿಯ
ಹಿಂದಿನದ ನೆನೆಸುತ್ತ ಇಂದಿನದ ಮರೆಯುತ್ತ
ಮುಂದಿಯದು ಮುಂದಾಗುವದ ನೋಡದೆ,
ಮುಂದೆಯಂದದಿ ಮುಂದು ಮುಂದಾಗಿ
ನಡೆಯುವದು
ಎಂದೆಲ್ಲಿಗೇಕೆಂದು ತಾ ತಿಳಿಯದೆ
ಕ್ಷಮಿಸಮ್ಮ ನೀ ಎನ್ನ ಕಡುನುಡಿದ ತಪ್ಪಿಂಗೆ
ಅಮರವಾಗಿಹ ನಿನ್ನ ಮೈಸಿರಿಯ ಬೈದೆ,
ಅಮರ ಗಂಗಾ ನದಿಯ ಕಳಕೆಸರ ಗಳನೆಲ್ಲ
ನಮಿಸು, ಜೀವನರಿಗೆಚ್ಚರಿಕೆ ಗೈದೆ

— ನೆ. ಸು. ಭಟ್ಟ

ಕರ್ನಾಟಕ

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ ಮುಂಬಯಿ ಸರಕಾರದವರು ಧಾರವಾಡದಲ್ಲಿಯ ಛೋಟಾ ಮಹಾಬಳೇಶ್ವರದ ವಿಶಾಲ ಪ್ರದೇಶವನ್ನು ಆರಿಸಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಬರುವ ಅಧಿವೇಶನದಲ್ಲಿ ಮಂಡಿಸಲಿರುವ ಕರ್ನಾಟಕ ವಿಶ್ವವಿದ್ಯಾಲಯ ಮಸೂದೆಯ ಬಗ್ಗೆ ಮಂತ್ರಿ ಮಂಡಳದವರು ಜಯಪುರದಿಂದ ಮರಳಿ ಬಂದ ನಂತರ ಚರ್ಚಿಸುವರೆಂದೂ ತಿಳಿಯುತ್ತದೆ.

ವತನಿ ಹಳ್ಳಿಗಳ ಕುಲಕರ್ಣಿಯರ ಕರ್ತವ್ಯಗಳನ್ನು ನಿರ್ದಿಷ್ಟ ಪಡಿಸುವ ಬಗ್ಗೆ ಮತ್ತು ಮಾಡತಕ್ಕ ಕೆಲಸಗಳ ಬಗ್ಗೆ ಸಾಕಷ್ಟು ಪ್ರತಿಫಲ ದೊರೆಯಬೇಕೆಂದು ಸಭೆ ಸಮ್ಮೇಲನ ಮೂಲಕ ಶಿಷ್ಟ ಮಂಡಳಗಳ ಮೂಲಕ ಬಿನ್ನವಿಸಿಕೊಂಡರೂ ಪ್ರಯೋಜನವಾಗದ್ದರಿಂದ ಕುಲಕರ್ಣಿಯರ ಉಪಜೀವನದ ಬಗ್ಗೆ ಬೇರೆ ಉದ್ಯೋಗಮಾಡಲು ಅನುಕೂಲವಾಗುವಂತೆ ಬರುವ ಜನೆವರಿ ೫ ರೊಳಗಾಗಿ ಎಲ್ಲ ಕುಲಕರ್ಣಿಯರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಬೇಕೆಂದು ಎಲ್ಲ ವತನಿ ಹಳ್ಳಿಗಳ ಕೆಲಸ ಮಾಡುವ ಕುಲಕರ್ಣಿಯರಿಗೆ ವಿನಂತಿ ಮಾಡಿಕೊಳ್ಳುವ ಗೊತ್ತುವಳಿ ಮುಂಬಯಿ ಕರ್ನಾಟಕ ವತನದಾರ ಕುಲಕರ್ಣಿ ಸಂಘದ ಸಭೆಯಲ್ಲಿ ಸ್ವೀಕೃತವಾಯಿತು. ಕುಲಕರ್ಣಿಯರು ರಾಜೀನಾಮೆ ಕೊಡಲಿಕ್ಕೆ ಪ್ರಾರಂಭಿಸಿದ್ದಾರೆ.

ಬೆಳಗಾವಿ

ಬೆಳಗಾವಿಯಲ್ಲಿ ಆಚೆವಾರ ೨೩ ಸಾವಿರ ರೂಪಾಯಿಗಳಷ್ಟು ಬಂಗಾರದ ಗಟ್ಟಿಯನ್ನು ಶ್ರೀ ಪೋತದಾರರ ಅಂಗಡಿಯಲ್ಲಿ ಕದಿಯಲಾಗಿತ್ತಷ್ಟೆ. ಅದೇ ಅಂಗಡಿಯಲ್ಲಿ ಕಳೆದವಾರ ಸಾಯಕಲ್ ಮೇಲೆ ಬಂದ ಒಬ್ಬ ತರುಣನು ಚೋರಮಾಲವನ್ನು ತೆಗೆದುಕೊಂಡು ಇದೀಗ ಹಣ ಕೊಡುವೆನು. ಸಾಯಕಲ್ ಇಟ್ಟು ಹೋಗುತ್ತೇನೆ ಎಂದು ಹೇಳಿ ಹೋದನಂತೆ. ಮುಂದೆ ಸ್ವಲ್ಪಹೊತ್ತಿನಲ್ಲಿ ಮತ್ತೊಬ್ಬ ತರುಣ ಬಂದು ಸುವರ್ಣಮಂದಿರದಲ್ಲಿ ಚಹಾ ಕುಡಿಯುತ್ತ ಕುಳಿತಾಗ ಯಾವನೋ ನನ್ನ ಈ ಸಾಯಕಲ್ಲು ತೆಗೆದುಕೊಂಡು ಬಂದಿರುವನೆಂದು ಹೇಳಿ ಅದನ್ನು ಒಯ್ದುಬಿಟ್ಟನಂತೆ.

ಬೆಳಗಾವಿಯ ಖಡೇಬಜಾರದಲ್ಲಿ ಘಾಟಕ ಎಂಬ ಗಡಿಯಾಳ ವ್ಯಾಪಾರಿಗಳಲ್ಲಿ ಒಬ್ಬನು ನಾಲ್ಕು ಗಡಿಯಾಳ ಆರಿಸಿ ಅವುಗಳ ಬೆಲೆ ೪೫೦ ರೂ ಎಂದು ಗೊತ್ತುಪಡಿಸಿ ಒಂದು ಕರವಸ್ತ್ರದಲ್ಲಿ ಕೇಸ ಡಬ್ಬಿ ಸಹಿತ ಅವನ್ನು ಕಟ್ಟಿ ಹಣಪಡೆಸಲುವಾಗಿ ಸ್ವಲ್ಪ ವಾಗ್ವಾದ ಆದ ನಂತರ ರೊಚ್ಚಿನಿಂದ ಆ ಕೇಸನ್ನು ಮತ್ತು ತನ್ನ ಚಾಳೀಸ ಕೇಸನ್ನು ಒಗೆದು ಇಲ್ಲಿಯೇ ಪೋರವಾಲದವರ ಅಂಗಡಿಯಲ್ಲಿ ಹಣ ಕೊಡಿಸುವೆನೆಂದೂ ಒಬ್ಬ ಆಳನ್ನು ಕಳಿಸಿರೆಂದೂ ಹೇಳಿದ. ಮುಂದೆ ಆ ಆಳನು ಯುಕ್ತಿಯಿಂದ ತಿರುಗಿ ಕಳಿಸದನಂತೆ. ಹಿಂದಿನಿಂದ ಆ ಕೇಸು ತೆಗೆದು ನೋಡಲಾಗಿ ಅಷ್ಟೇ ಆಕಾರದ ನಾಲ್ಕು ಕರೇ ಕಲ್ಲುಗಳು ಅದರಲ್ಲಿದ್ದವಂತೆ.

ದಕ್ಷಿಣ ಕನ್ನಡ

ಮಂಗಳೂರಲ್ಲಿ ತಾ ೧೦ ರಂದು ಪ್ರಾರಂಭವಾದ ಆರ್ ಎಸ್ ಎಸ್ ಸತ್ಯಾಗ್ರಹವು ೧೫ ರ ವರೆಗೆ ಒಟ್ಟು ೨೫೦ ಕ್ಕಿಂತ ಹೆಚ್ಚು ಮಂದಿಯ ಬಂಧನವಾಗಿದೆ. ಇವರಲ್ಲಿ ಹಲವರು ಕ್ಷಮೆ ಕೇಳಿ ಮನೆಗೆ ಹೋದರು. ಇನ್ನುಳಿದವರಿಗೆ ಒಂದರಿಂದ ಮೂರು ತಿಂಗಳ ವರೆಗೆ ಶಿಕ್ಷೆಯಾಗಿದೆ. ಜಿಲ್ಹೆಯ ಎಲ್ಲ ಕಡೆಗಳಲ್ಲಿಯೂ ಈಗ ಸತ್ಯಾಗ್ರಹವು ತಣ್ಣಗಾದಂತಾಗಿದೆ.

ಕೇಂದ್ರ ಸುಪಾರಿ ಸಮಿತಿಯೊಂದನ್ನು ರಚಿಸುವ ತತ್ವವನ್ನು ಒಪ್ಪಿದ ಕೇಂದ್ರ ಸರಕಾರವು ಅದರ ಘಟನೆಯನ್ನು ಇದೀಗ ಪ್ರಾಂತಿಕ ಸರಕಾರಗಳಿಗೆ ಕಳುಹಿಸಿದ್ದಾರೆ. ಮದ್ರಾಸು ಸರಕಾರದ ಪರವಾಗಿ ಜಿಲ್ಹಾ ಕೃಷಿ ಅಧಿಕಾರಿಗಳಾದ ಶ್ರೀ ಕೆ. ಎಸ್. ಭಂಡಾರಿಗಳು ಈ ವಿಷಯವಾಗಿ ಶ್ರೀ ಜಿ. ಕೆ. ಗೋವಿಂದ ಭಟ್ಟರೊಡನೆ ವಿಚಾರ ವಿನಿಮಯ ಮಾಡಿರುವರು. ೧೯೪೯ ರಲ್ಲಿ ಸ್ಥಾಪಿತವಾಗಲಿರುವ ಈ ಸಮಿತಿಯಲ್ಲಿ ಅಖಿಲ ಭಾರತ ಸುಪಾರಿ ಮಹಾಮಂಡಳಕ್ಕೂ ಪ್ರಾತಿನಿಧ್ಯವಿದೆ.

ಮಂಗಳೂರಿನ ಬೆಸೆಂಟ ಬಾಲಿಕಾ ಪಾಠಶಾಲೆಯ ಹಳೆ ವಿದ್ಯಾರ್ಥಿ ಸಂಘವಾದ ವಸಂತಪ್ರೇಮಿ ಮಂಡಲದ ಆಶ್ರಯದಲ್ಲಿ ದಿನಾಂಕ ೧೯ ರಂದು ಸಾಹಿತ್ಯಗೋಷ್ಠಿಯು ಶ್ರೀ ಪಿ ಕೆ ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಗದ್ಯ ಪದ್ಯ ಕೃತಿಗಳ ಪಠನವಾದ ನಂತರ ಅಧ್ಯಕ್ಷರು "ದಕ್ಷಿಣ ಕನ್ನಡದಲ್ಲಿ ಕನ್ನಡದ ಬೆಳವಣಿಗೆ" ಎಂಬ ವಿಚಾರವಾಗಿ ೧೫ ನೇ ಶತಮಾನದಿಂದ ೨೦ ನೇ ಶತಮಾನದ ವರೆಗಿನ ಬೆಳವಣಿಗೆಯ ಕುರಿತಾದ ಲೇಖನವನ್ನು ಓದಿದರು.

ಉಡುಪಿಯ ಶ್ರೀಕೃಷ್ಣಮಠವು ಸಾರ್ವಜನಿಕ ದೇವಾಲಯವೆಂದು ಮದ್ರಾಸು ಸರಕಾರವು ಸಾರಿದ್ದರ ವಿರುದ್ಧ ಉಡುಪಿಯ ಏಳು ಮಠದ ಸ್ವಾಮಿಗಳು ಕೋರ್ಟಿನಲ್ಲಿ ದಾವೆ ಹೂಡಿರುವರು. ಕೃಷ್ಣಾಪೂರ ಮಠದವರು ಮಾತ್ರ ಈ ದಾವೆಯಲ್ಲಿ ಸೇರಿಲ್ಲ. ಶ್ರೀಮನ್ಮಧ್ವಾಚಾರ್ಯರು ತಮ್ಮ ಇಷ್ಟದೇವತೆಯಾದ ಶ್ರೀಕೃಷ್ಣವಿಗ್ರಹವನ್ನು ರಜತಪೀಠದಲ್ಲಿ ಸಂಸ್ಥಾಪಿಸಿ ಅದರ ಪೂಜೆ ವಿನಿಯೋಗಾದಿಗಳ ಬಗ್ಗೆ ಅಷ್ಟಮಠಗಳನ್ನು ಸ್ಥಾಪಿಸಿ ಸನ್ಯಾಸಿಮಠವೆಂದು ಹೆಸರಿಟ್ಟರೆಂದೂ ಅದು ಸಾರ್ವಜನಿಕ ದೇವಾಲಯವಲ್ಲೆಂದೂ ವಾದಿಗಳ ಅಭಿಪ್ರಾಯವಾಗಿದೆ.

ಕನ್ನಡ ಸಂಸ್ಥಾನ

ಹಿಂದುಸ್ತಾನೀ ಸೇವಾದಲದ ಸಂಸ್ಥಾಪಕರಾದ ಡಾ. ಎನ್. ಎಸ್. ಹರ್ಡೀಕರರ ಮೇಲೆ ೧೯೩೨ ರಲ್ಲಿ ಸಂಸ್ಥಾನ ಪ್ರವೇಶ ನಿರ್ಬಂಧಕಾಜ್ಞೆ ಹೇರಲಾಗಿದ್ದಿತಷ್ಟೆ. ಅದರೀಗ ಆ ಆಜ್ಞೆಯನ್ನು ಹಿಂತೆಗೆದುಕೊಂಡಿದು ಸೇವಾದಲದ ಪ್ರಾರಂಭೋತ್ಸವಕ್ಕಾಗಿ ಅವರನ್ನು ಆಮಂತ್ರಿಸಲಾಗುವದೆಂದು ತಿಳಿಯುತ್ತದೆ. ಸಂಸ್ಥಾನದಲ್ಲಿ ಸಾರ್ವಜನಿಕ ಸಭೆಗಳ ಮೇಲೆ ಇದ್ದ ನಿರ್ಬಂಧವನ್ನೂ ತೆಗೆದು ಹಾಕಿರುವರು.



ಅ. ಭಾ. ಕಾ. ಸಮಿತಿ ಸಭೆಗೆ ಮುಂದಾಳುಗಳು ಮೋಟಾರಿನಲ್ಲಿ ಬರುತಿರುವರು.
ಇದರಲ್ಲಿ ಸರದಾರ ಪಟೇಲ, ಪಂಡಿತ ಜವಾಹರಲಾಲ, ಜಯಪುರ ಮುಖ್ಯ ಮಂತ್ರಿ ಪಂ. ಹೀರಾಲಾಲ ಶಾಸ್ತ್ರಿ ಮೊದಲಾದವರು ಕಾಣುವರು.

ಶ್ರೀ ಮಾರುತಿ ಕಾಂಪಿಟಿಷನ್

ನಂ. ೪೫ ರ ಉತ್ತರ

(ಮ. ಬಲಕ್ಕೆ) ೧) ಗಳಿಸಿ. ೨) ಒಡೆಯ. ೪) ಜಾತಿ. ೫) ನ್ಯಾಯ. ೬) ಕನಿಷ್ಟ. ೯) ಸ್ಪರ್ಧೆ. ೧೨) ಮಮತೆ. (ಮೇ. ಕೆಳಕ್ಕೆ) ೩) ದ್ವೇಷ. ೬) ನಷ್ಟ. ೭) ಭ್ರಷ್ಟ. ೧೧) ಶ್ರಮ.

ಸರಕಾರದ ಮುಂದಿರುವ ಪ್ರಕಾಂಡ ಸಮಸ್ಯೆಗಳೇ ಮುಂದ ಪ್ರಗತಿಗೆ ಕಾರಣ:

ಮಂತ್ರಿಗಳ ಬಗ್ಗೆ ಡಾ. ಪಟ್ಟಾಭಿಯವರ ಪ್ರಶಂಸೆ : ಭಾಷಾನ್ವಯ ಪ್ರಾಂತರಚನೆ ಅವಶ್ಯ: ಜಯಪುರ ಕಾಂಗ್ರೆಸ್ ಅಧ್ಯಕ್ಷರ ಭಾಷಣದ ಸಾರ

ಎರಡು ವರ್ಷಗಳ ನಂತರ ನಾವು ಈ ಇತಿಹಾಸ ಪ್ರಸಿದ್ಧ ನಗರದಲ್ಲಿ ಸಮ್ಮಿಲಿತರಾಗಿದ್ದೇವೆ. ಮೀರತದಲ್ಲಿ ನಾವು ಈ ಮೊದಲು ಸೇರಿದಾಗ ನಮ್ಮ ಮೇಲೆ ಪ್ರಭುತ್ವ ನಡೆಸುತ್ತಿದ್ದ ವಿದೇಶಿ ಪ್ರಭುತ್ವದ ವಿರುದ್ಧ ಹೋರಾಟ ನಡೆಸುವ ಬಗ್ಗೆ ಆಲೋಚನೆ ಮಾಡಲು ಸೇರಿದ್ದೆವು. ಜಗತ್ತಿನ ಇತರ ದೇಶಗಳಿಗೆ ಗೊತ್ತಿಲ್ಲದ, ಆದರೆ ನಮ್ಮ ಭರತಖಂಡದ ಪ್ರಾಚೀನ ಕಾಲದ ಋಷಿಗಳಿಗೆ ಹಾಗೂ ಸಾಧು ಸಂತರಿಗೆ ಮಾತ್ರ ಗೊತ್ತಿದ್ದ ಮಾರ್ಗದಿಂದ ನಾವು ಸ್ವಾತಂತ್ರ್ಯ ಸಂಪಾದಿಸಿ ಅದರ ಸಂವರ್ಧನೆಗಾಗಿ ಇಲ್ಲಿ ಈಗ ಕೂಡಿದ್ದೇವೆ. ನಮಗೆ ಮಾರ್ಗದರ್ಶನ ಮಾಡಿ ವಿಜಯ ಸಂಪಾದಿಸಿದ ನಮ್ಮ ರಾಷ್ಟ್ರಪಿತನು ಇಂದು ಸಾಕಾರವಾಗಿ ನಮ್ಮ ಮುಂದೆ ಇಲ್ಲ. ಇದು ನಮ್ಮ ದುರ್ದೈವ. ಆದರೆ ರಾಷ್ಟ್ರಪಿತನ ಆತ್ಮವು ಈ ಸಭೆಯಲ್ಲಿ ಅದೇಕೆ ಇಡೀ ದೇಶದಲ್ಲಿ ಇರುವದು. ದುಷ್ಟ ಶಕ್ತಿಗಳನ್ನು ಸತ್ಯ ಅಹಿಂಸೆಗಳಿಂದ ಎದುರಿಸಿದ ಆ ರಾಷ್ಟ್ರಪಿತನ ಆತ್ಮವು ಇಂದು ಅದೇ ಮಾರ್ಗದಿಂದ ಸಾಗಲು ಸ್ಫೂರ್ತಿ ನೀಡಿ ಅದೇ ಮಾರ್ಗದಿಂದ ದೇಶದ ಪುನರ್ಘಟನೆಯ ಚಟುವಟಿಕೆಗಳನ್ನು ಕೈಕೊಳ್ಳಲು ನಮಗೆ ಮಾರ್ಗದರ್ಶನ ಮಾಡುತ್ತಿದೆ.

ನಮ್ಮನ್ನಗಲಿದ ಅವತಾರಿ ಪುರುಷ

ನಮ್ಮ ಪ್ರೀತಿಯ ಮಹಾತ್ಮರ ನಿಧನದಿಂದ ರಾಷ್ಟ್ರ ಪರದೇಶಿಯಾಗಿದೆ. ತನ್ನ ಪ್ರೇಮಜ್ಯೋತಿಯಿಂದ ಸ್ವಾತಂತ್ರ್ಯದಜ್ಯೋತಿಯನ್ನು ಹೊತ್ತಿಸಿದ ಸ್ವಯಂಪ್ರಕಾಶಿತವಾದ ಆ ಮಹಾ ಆತ್ಮವು ನಮ್ಮನ್ನು ಅಗಲಿ ಹೋದುದರಿಂದ ಆದ ಹಾನಿಯು ತುಂಬಿ ಬಾರದಂಥದು. ತನ್ನನ್ನು ತಾನೇ ದಹಿಸುವ ಆದರೆ ಹೆರವರನ್ನು ಸುಡದ ಪ್ರೇಮಜ್ಯೋತಿಯಿಂದ ಮಹಾತ್ಮನು ಅಂತರಿಕ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಗೆದ್ದುದಲ್ಲದೆ ಅಚಲನಾದ ಆತ್ಮಶಕ್ತಿಯಿಂದ, ಎದುರಿಸಿದ ಬಲಾಢ್ಯವಾದ ಪಾಶವೀ ಶಕ್ತಿಯನ್ನು ಜಯಿಸಿದನು. ಅವನು ಮಾನವರಲ್ಲಿ ಮಾನವನಾಗಿದ್ದನು ಮುತ್ಸದ್ದಿ, ರಣಧೀರನಾಗಿದ್ದನು ವಿಚಾರ ಹಾಗೂ ಕೃತಿಗಳಲ್ಲಿ ಅವನೊಬ್ಬ ಕಲಾವಿದನು. ಇಷ್ಟೇ ಅಲ್ಲ, ಶ್ರೇಷ್ಠ ಅರ್ಥಶಾಸ್ತ್ರಜ್ಞನೂ ಆಗಿದ್ದನು. ರಾಜಕಾರಣಕ್ಕೆ ಒಂದು ಧಾರ್ಮಿಕ ಸ್ವರೂಪವನ್ನಿತ್ತ ಧರ್ಮಸಂಸ್ಥಾಪಕನು. ಸ್ವಲ್ಪದರಲ್ಲಿ ಹೇಳಬೇಕಾದರೆ ಅವನೊಬ್ಬ ಅವತಾರಿ ಪುರುಷ. ವಚನ ಪರಿಪಾಲನೆ ಸಚ್ಚಾರಿತ್ರ್ಯ ಗುಣಗಳಿಂದ ಅವನು ಶ್ರೀರಾಮನಾಗಿದ್ದ, ತ್ಯಾಗ ಗುಣದಲ್ಲಿ ಬುದ್ಧನಾಗಿದ್ದ, ತ್ಯಾಗ ಹಾಗೂ ಸೇವೆಗಳಲ್ಲಿ ಕ್ರಿಸ್ತನಾಗಿದ್ದ. ನಾವು ನಗುತಿದ್ದಾಗ ಅವನು ಅಳುತ್ತ ಬಂದನು. ನಾವು ಅಳುತ್ತಿದ್ದಾಗ ನಗುತ್ತ ಅಗಲಿ ಹೋದನು.

ವಿದೇಶ ವ್ಯವಹಾರ

ಈ ಮೊದಲು ನಾವು ನಮ್ಮ ಸ್ವಾತಂತ್ರ್ಯ ಸಮರದಲ್ಲಿ ತೊಡಗಿದಾಗ ವಿದೇಶೀ ಪ್ರಭುತ್ವದಿಂದ ಹತ್ತಿಕ್ಕಲ್ಪಟ್ಟ ಜನಾಂಗದವರು ತಮ್ಮ ವಿಮೋಚನೆಗಾಗಿ ನಡೆಸಿದ ಹೋರಾಟವೆಂದು ಭಾವಿಸಿದ್ದೆವು. ಈ ಕಾರಣದಿಂದ ಜಗತ್ತಿನ ಯಾವದೇ ಭಾಗದಲ್ಲಿ ವಿದೇಶೀ ಪ್ರಭುತ್ವದ ವಿರುದ್ಧ ಹೋರಾಟ ನಡೆದರೆ ಅದರ ಬಗ್ಗೆ ನಮ್ಮ ಸಹಾನುಭೂತಿ ಇರುವದು ಸ್ವಾಭಾವಿಕ. ಹಿಂದುಸ್ತಾನದಲ್ಲಿ ಸಾಮ್ರಾಜ್ಯವಾದೀ ವಿರೋಧಿಗಳಾದ ನಾವು ಜಗತ್ತಿನಲ್ಲಿ ಎಲ್ಲೆಲ್ಲಿ ಸಾಮ್ರಾಜ್ಯವಾದವಿದೆಯೋ ಅಥವಾ ಸರ್ವಾಧಿಕಾರಿತ್ವವಿದೆಯೋ ಅದನ್ನು ವಿರೋಧಿಸುತ್ತಿದ್ದೆವು ಈಗ ಹಿಂದುಸ್ತಾನವು ಸ್ವತಂತ್ರ ರಾಷ್ಟ್ರವಾಗಿದೆ. ಆದುದರಿಂದ ಹಿಂದುಸ್ತಾನವು ವಿದೇಶ ಧೋರಣೆಯ ತತ್ವಗಳನ್ನು ಪ್ರತಿಪಾದಿಸುವದಲ್ಲದೆ ಅವುಗಳನ್ನು ಸೂಕ್ಷ್ಮ ಪರಿಸ್ಥಿತಿಯಲ್ಲಿ ಬಳಕೆಯಲ್ಲಿ ತರುವ ಹೊಣೆಯನ್ನು ಹೊರಬೇಕಾಗಿದೆ. ಹಿಂದುಸ್ತಾನ ತನ್ನ ದೇಶದ ಅಂತರಿಕ ವ್ಯವಹಾರದಲ್ಲಿ ಹೊರಗಿನವರು ಕೈ ಹಾಕಿದರೆ ಸಹಿಸದು. ಅದರಂತೆ ಅದು ಬೇರೆ ದೇಶದ ಅಂತರಿಕ ವ್ಯವಹಾರದಲ್ಲಿ ತಾನು ಕೈ ಹಾಕುವದೂ ಯೋಗ್ಯವಲ್ಲೆಂದು ನಂಬುತ್ತದೆ. ಆದರೆ ಇಂದು ಜಗತ್ತಿನಲ್ಲಿ ರಾಷ್ಟ್ರರಾಷ್ಟ್ರಗಳಲ್ಲಿ ಎಷ್ಟೇ ತಿಕ್ಕಾಟಗಳಿದ್ದರೂ ಪರಸ್ಪರಾವಲಂಬನವಿಲ್ಲದೆ ಏಕಾಕಿಯಾಗಿ ಯಾವ ರಾಷ್ಟ್ರವೂ ಉಳಿಯುವಂಥ ಪರಿಸ್ಥಿತಿ ಇಲ್ಲ.

ನಮ್ಮ ವಿದೇಶ ಧೋರಣವು ಹಿಂದೆ ಕಾಂಗ್ರೆಸು ಹಾಕಿಕೊಟ್ಟ ತತ್ವಗಳಂತೆ ಇನ್ನು ಮುಂದೆಯೂ ಇರಬೇಕು. ಅಂದರೆ ಜಗತ್ತಿನಲ್ಲಿ ಎಲ್ಲ ಬಗೆಯ ಸಾಮ್ರಾಜ್ಯವಾದದ ಸಮಾಪ್ತಿ, ದಾಸ ರಾಷ್ಟ್ರಗಳ ವಿಮೋಚನೆ, ಜಾಗತಿಕ ಶಾಂತಿ, ವರ್ಣದ್ವೇಷದ ಉಚ್ಚಾಟನೆ, ಜಗತ್ತಿನಲ್ಲಿ ದ್ವೇಷಭಾವನೆ ಅಳಿದು ಸ್ನೇಹ ಸೌಹಾರ್ದ ಬೆಳೆದು ಒಂದೇ ಜಾಗತಿಕ ವ್ಯವಸ್ಥೆಯ ಕೆಳಗೆ ಎಲ್ಲ ರಾಷ್ಟ್ರಗಳು ಬರುವಂತೆ ಮಾಡುವದು ಇದೇ ನಮ್ಮ ಧೋರಣೆಯಾಗಿರಬೇಕು. ಇಂದು ಜಗತ್ತಿನಲ್ಲಿ ಎರಡು ಪಂಗಡಗಳಾಗಿವೆ. ಹಿಂದುಸ್ತಾನವು ಈ ಎರಡು ಪಂಗಡಗಳಲ್ಲಿ ಯಾವ ಪಂಗಡಕ್ಕೂ ಸೇರಿಕೊಳ್ಳದೆ, ತಟಸ್ಥವಾಗಿ ಉಳಿಯುವ ಧೋರಣವನ್ನು ಇಟ್ಟುಕೊಂಡಿದೆ. ಹೀಗೆ ತಟಸ್ಥ ಉಳಿಯುವದರಲ್ಲಿ ಅನೇಕ ತೊಂದರೆಗಳಿದ್ದರೂ ಈ ಮಾರ್ಗವೇ ಹೆಚ್ಚು ಅನುಕೂಲವೆಂದು ನಿರ್ಧರಿಸಲಾಗಿದೆ. ಇಂದು ಜಗತ್ತಿನಲ್ಲಿ ಯಾವ ರಾಷ್ಟ್ರವೂ ಏಕಾಕಿಯಾಗಿ ಬಾಳದು. ಅದು ತನ್ನ ನೆರೆಹೊರೆಯ ಅದರಂತೆ ಇತರ ರಾಷ್ಟ್ರಗಳೊಡನೆ ಮಿತ್ರತ್ವದ ಸಂಬಂಧವನ್ನಿಟ್ಟುಕೊಳ್ಳಬೇಕಾಗುವದು. ಹಿಂದುಸ್ತಾನವು ತನ್ನ ಪ್ರಭಾವದಿಂದ ಮೂರನೇ ಮಹಾಯುದ್ಧದತ್ತ ಸಾಗಿದ ಜಗತ್ತನ್ನು ಶಾಂತಿಯತ್ತ ಸಾಗುವಂತೆ ಶಕ್ಯವಿದ್ದ ಪ್ರಯತ್ನ ಮಾಡುವದು.

ಕಾಮನವೆಲ್ಥದೊಡನೆ ಸಂಬಂಧ

ಮೊನ್ನೆಮೊನ್ನೆಯ ವರೆಗೆ ಬ್ರಿಟಿಶ ಕಾಮನವೆಲ್ಥವೆಂದು ಪ್ರಸಿದ್ಧವಾದ ರಾಷ್ಟ್ರಗಳೊಡನೆ ನಮ್ಮ ಸಂಬಂಧವೆಂತು ಇರಬೇಕೆಂಬುದು ಮಹತ್ವದ ಪ್ರಶ್ನೆ. ವಸಾಹತು ಸ್ವರಾಜ್ಯ ದರ್ಜೆಯಲ್ಲಿ ಇಂದು ಹಿಂದುಸ್ತಾನವಿದೆ. ಇದರಿಂದ ತನ್ನ ಅಂತರಿಕ ಹಾಗೂ ವಿದೇಶ ವ್ಯವಹಾರಗಳಲ್ಲಿ ಅದು ಸಂಪೂರ್ಣ ಸ್ವತಂತ್ರವಾಗಿಯೇ ಇದೆ ಎಂಬುದು ಸ್ಪಷ್ಟವಿದೆ. ಆದರೂ ಸ್ವತಂತ್ರ ಪ್ರಜಾರಾಜ್ಯವಾಗುವ ಹಿಂದುಸ್ತಾನವು ವಸಾಹತು ಸ್ವರಾಜ್ಯದಲ್ಲಿರುವದು ವಿಸಂಗತವಾದುದು. ಆದುದರಿಂದ ಈ ವಸಾಹತು ಸ್ವರಾಜ್ಯ ಸ್ಥಿತಿ ಹೋಗಲೇಬೇಕು. ಸ್ವತಂತ್ರ ಪ್ರಜಾರಾಜ್ಯವಾದ ಹಿಂದುಸ್ತಾನವು ಕಾಮನವೆಲ್ಥದೊಡನೆ ಯಾವದೇ ಬಗೆಯ ಸಂಬಂಧವನ್ನು ಇಟ್ಟುಕೊಳ್ಳುವದು ಇಷ್ಟವಾದುದೋ ಎಂಬ ಪ್ರಶ್ನೆ ಉದ್ಭವಿಸುವದು. ಸ್ವತಂತ್ರವಾದ ರಾಷ್ಟ್ರಗಳ ಪರಸ್ಪರ ಅನುಕೂಲತೆಗಳಿಗಾಗಿ ಒಂದು ಬಗೆಯ ಸಂಬಂಧವನ್ನಿಟ್ಟುಕೊಳ್ಳಲು ಅಭ್ಯಂತರವಿಲ್ಲ.

ಇಂದು ಜಗತ್ತು ಬದಲಾಗಿದೆ. ನಾವು ಹಿಂದಿನ ವಿಚಾರಸರಣಿ ತ್ಯಜಿಸಬೇಕು. ಹಿಂದಿನದನ್ನು ಮರೆಯಬೇಕು. ಬದಲಾಗುವ ಈ ಜಗತ್ತಿನಲ್ಲಿ ನಾವು ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲದ ರೀತಿಯಲ್ಲಿ ಪರರಾಷ್ಟ್ರಗಳ ಸಹಕಾರವನ್ನು ಕೋರುವೆವು. ಜಗತ್ತಿನಲ್ಲಿ ವಿಧ್ವಂಸಕ ಶಕ್ತಿಗಳು ಪ್ರಬಲವಾಗಿವೆ. ನಾವು ವಿಧಾಯಕ ಶಕ್ತಿಗಳೊಡನೆ ನಮ್ಮ ಸಂಬಂಧ ಬೆಳೆಸಿಕೊಳ್ಳುವೆವೇ ಹೊರತು ವಿಧ್ವಂಸಕರ ಗೊಡವೆಗೆ ಹೋಗುವದಿಲ್ಲ.

ಅಂತರಿಕ ಸಮಸ್ಯೆಗಳು

ನಾವು ನಮ್ಮ ರಾಷ್ಟ್ರದ ಅಂತರಿಕ ಸಮಸ್ಯೆಗಳನ್ನು ನೋಡುವಾ. ಹುತಾತ್ಮರ ಯುಗವು ಮುಗಿಯಿತು. ಈಗ ನಾವು ವೀರರ, ಮುತ್ಸದ್ದಿಗಳ, ಕವಿಗಳ, ತತ್ವಜ್ಞಾನಿಗಳ, ವಿಜ್ಞಾನಿಗಳ ಯುಗದಲ್ಲಿ ಕಾಲಿಟ್ಟಿದ್ದೇವೆ ದೇಶದ ಪುನರ್ಘಟನೆ ಮಾಡುವ ಹಾಗೂ ರಾಷ್ಟ್ರೀಯ ದೃಷ್ಟಿ ಕೊಡಬಲ್ಲ ಜನರ, ಕಾರ್ಯದ ಅವಶ್ಯಕತೆಯಿದೆ ನಾವು ಸಾವಿರ ವರ್ಷಗಳ ಹಿಂದೆ ಹರಿದು ಹೋದ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಎಳೆಗಳನ್ನು ಈಗ ಪುನಃ ಒಂದುಗೂಡಿಸಿ ಅದರಲ್ಲಿ ಆಧುನಿಕ ಪ್ರಗತಿಯ ಎಳೆಗಳನ್ನು ಕೂಡಿಸಿ ಹೊಸ ರಾಷ್ಟ್ರವನ್ನು ಕಟ್ಟುವ ಸಂಸ್ಕೃತಿಯ ರಜ್ಜುವನ್ನು ಹೆಣೆಯಬೇಕಾಗಿದೆ

ನಮ್ಮ ಪ್ರಾಂತಿಕ ಸರಕಾರಗಳಿಗೆ ಹಾಗೂ ಕೇಂದ್ರ ಸರಕಾರಕ್ಕೆ ಚುನಾವಣೆ ಘೋಷಣೆ

ಗಾಂಧೀನಗರದಲ್ಲಿ (ಜಯಪುರ) ಅಧ್ಯಕ್ಷ ಪಟ್ಟಾಭಿಯವರಿಂದ ಕಾಂಗ್ರೆಸ್ ಧ್ವಜಾರೋಹಣ.

ಪತ್ರದಲ್ಲಿ ಹೇಳಿದ ತತ್ವಗಳನ್ನು ಕಾರ್ಯರೂಪಕ್ಕಿಳಿಸಲು ಒತ್ತಾಯಮಾಡಲಾಗುತ್ತಿದೆ. ಚುನಾವಣೆ ಘೋಷಣೆಯಲ್ಲಿ ಹೇಳಿದ ತತ್ವಗಳನ್ನು ಎರಡು ವರುಷಗಳ ನಂತರ ಈಗ ಕಾರ್ಯರೂಪಕ್ಕಿಳಿಸಬೇಕೆಂದರೆ ಪರಿಸ್ಥಿತಿ ಬದಲಾದ ಕಾರಣ ಅನೇಕ ಜಟಿಲ ತೊಂದರೆಗಳು ಉದ್ಭವಿಸಿರುವವು. ಅನುಕೂಲ ಪರಿಸ್ಥಿತಿ ಇಲ್ಲ. ಮುಖ್ಯ ಉದ್ಯೋಗಗಳ ರಾಷ್ಟ್ರೀಕರಣವು ಒಮ್ಮೆಲೆ ಆಗುವಂಥದಲ್ಲ. ದೇಶದಲ್ಲಿ ಔದ್ಯೋಗೀಕರಣ ಬೆಳೆಸುವದು ಸುಲಭವಿಲ್ಲ. ಅದರ ಮಾರ್ಗದಲ್ಲಿ ಅನೇಕ ತೊಂದರೆಗಳಿವೆ. ಹಣದ ಅಭಾವದಿಂದ ಯಾಂತ್ರಿಕ ಸಾಮಗ್ರಿ ದೊರೆಯುವದಿಲ್ಲ. ದಿನದಿನಕ್ಕೂ ಪರಿಸ್ಥಿತಿ ವೇಗದಿಂದ ಬದಲಾಗುತ್ತಿದೆ. ಆದರಿಂದ ಇಂದು ಮಾಡಿದ ಯೋಜನೆ ನಾಳಿಗೆ ನಿರುಪಯುಕ್ತವಾಗುತ್ತಿದೆ. ಇದಲ್ಲದೆ ದೈನಂದಿನ ಆಡಳಿತದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಬಿಡಿಸುವಲ್ಲಿ ಸರಕಾರಗಳಿಗೆ ಲಕ್ಷ್ಯ ಪೂರೈಸುವದೇ ಸಾಕಾಗಿ ಹೋಗುತ್ತಿದೆ.

ಲಂಚಗುಳಿತನ

ಲಂಚಗುಳಿತನವು ಅವ್ಯಾಹತವಾಗಿ ಸಾಗಿದ್ದರಿಂದ ಸರಕಾರವು ಸಾರ್ವಜನಿಕರ ಅಪ್ರೀತಿಗೆ ಕಾರಣವಾಗಿರುವದಲ್ಲದೆ ಕೆಲವು ಟೀಕೆಗಳ ಕಾರಣದಿಂದ ಅವರ ಜನಾದರಣೆಗೂ ಧಕ್ಕೆ ತಟ್ಟಿದೆ. ನಿಜವಾಗಿ ನೋಡಿದರೆ ಲಂಚ ತೆಗೆದುಕೊಳ್ಳುವವ ಅಥವಾ ಕಳ್ಳಪೇಟೆಯಲ್ಲಿ ತೊಡಗಿದವನಿಗಿಂತ ಲಂಚ ಕೊಡುವವ ಅಥವಾ ಕಳ್ಳಪೇಟೆಯಲ್ಲಿ ಸಾಮಾನು ಕೊಳ್ಳುವವರೇ ಅಪರಾಧಿಗಳು. ಯಾಕೆಂದರೆ ಒಬ್ಬ ಕಳ್ಳಪೇಟೆಗ ಅಥವಾ ಲಂಚಗುಳಿಯು ಅಪರಾಧ ಮಾಡಬೇಕಾದರೆ ಅವನಿಗೆ ಸಹಾಯವಾಗುವವರು ಯಾರಾದರು ಇರುವರು. [illegible] ಯಲ್ಲಿ ಸರಕಾರವು ಕೂಡ ಕ್ರಮಕೈಕೊಂಡು ಧೋರಣ ಅನುಸರಿಸಿ ಪರಿಸ್ಥಿತಿ [illegible] ತ್ತಿದೆ ಆದರೆ ಕೂಲಿಕಾರರ ಹಿತಸಂವರ್ಧನೆ, ನಿರಾಶ್ರಿತರ ಪುನರ್ನಿವೇಶನ ಅಸ್ಪೃಶ್ಯತೆಯ ಶೋಧ, ಸಾರಿಗೆ ಸಂಪರ್ಕಗಳ ಸೌಲಭ್ಯ ಹೆಚ್ಚಿಸುವದು, ನೀರಾವರಿ ಯೋಜನೆ, ಜನರ ಆರೋಗ್ಯ, ಶಿಕ್ಷಣ, ಸೈನ್ಯಬಲ ಹೆಚ್ಚಿಸುವದು, ಸಂಸ್ಥಾನಗಳ ಸಮೀಕರಣ ಈ ದಿಶೆಯಲ್ಲಿ ಕಾಂಗ್ರೆಸ ಸರಕಾರಗಳು ಕಾರ್ಯಸಾಧಿಸಿದ್ದು ಪ್ರಶಂಸನೀಯವಾಗಿದೆ.

ಸಂಸ್ಥಾನಗಳು

ಬ್ರಿಟಿಶರು ಹಿಂದುಸ್ತಾನವನ್ನು ಬಿಟ್ಟು ಹೋಗುವಾಗ ಹಿಂದೀ ಸಂಸ್ಥಾನಗಳು ಸ್ವಾತಂತ್ರ್ಯ ಪಡೆದಿವೆ ಎಂದು ಸಾರಿ ಒಂದು ಹೊಸ ಸಮಸ್ಯೆಯನ್ನು ಹುಟ್ಟಿಸಿ ಹೋದರು. ಕಾಶ್ಮೀರ ಹಾಗೂ ಹೈದರಾಬಾದಗಳ ಸಮಸ್ಯೆಗಳು ಬ್ರಿಟಿಶರ ಈ ಘೋಷಣೆಯ ಪರಿಣಾಮವಾಗಿಯೇ ಹುಟ್ಟಿದಂಥವು. ಸಂಸ್ಥಾನಗಳ ಸಮಸ್ಯೆಗಳನ್ನು ಒಂದೊಂದನ್ನಾಗಿಯೇ ಬಿಡಿಸಿದ ಶ್ರೇಯಸ್ಸು ಮಾನನೀಯ ಸರದಾರ ಪಟೇಲರಿಗೂ ಅವರ ನೇತೃತ್ವದಲ್ಲಿ ಕಾರ್ಯ ಸಾಗಿಸುವ ಸಂಸ್ಥಾನ ಖಾತೆಗೂ ಇದೆ. ಸರದಾರ ಪಟೇಲರು ದೂರದರ್ಶಿತ್ವ, ಮುತ್ಸದ್ದಿತನ, ದೃಢನಿರ್ಧಾರಗಳಿಂದ ಈ ಸಂಸ್ಥಾನಗಳ ಸಮಸ್ಯೆ ಬಿಡಿಸಲಿಕ್ಕೆ ಪ್ರವೃತ್ತರಾಗಲು ಸಂಸ್ಥಾನಗಳ ಪ್ರಶ್ನೆಗಳು ಚಂಡಮಾರುತನ ಮುಂದೆ ನಿಂತ ಇಸ್ಪೀಟಿನ ಮನೆಯಂತೆ ಉರುಳಿ ಹೋದವು.

ಹೈದರಾಬಾದ ಕಾಶ್ಮೀರ ಸಮಸ್ಯೆಗಳು ಬಿಡುವ ಲಕ್ಷಣಗಳಿವೆ. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಮಗುವಿಗೆ ಬಂದ ಈ ಸಂಸ್ಥಾನ ಸಮಸ್ಯೆಯು ಬಾಲಗ್ರಹ ರೋಗ ಈಗ ಕಳೆದಿದೆ ಇನ್ನು ಹಿಂದುಸ್ತಾನವು ಒಂದೇ ರಾಷ್ಟ್ರವಾಗಿ ಕಾರ್ಯ ಮುಂದುವರಿಸಲು ಶಕ್ಯವಾಗಿದೆ. ಹೈದರಾಬಾದ ಕಾಶ್ಮೀರದಲ್ಲಿ ನಮ್ಮ ಸೈನಿಕರು ತೋರಿಸಿದ ಪರಾಕ್ರಮ, ಸಾಹಸ [illegible] ಗಳಿಂದ ಅವರು ನಮಗೆ ಅಭಿನಂದ್ಯರಾಗಿರುವರು ಇಷ್ಟೇ ಅಲ್ಲ, ಹಿಂದುಸ್ತಾನದ ಶಾಶ್ವತ ಕೀರ್ತಿಯನ್ನು ಬೆಳಗಿಸಿದ ನಮ್ಮ ಸೈನಿಕರಿಗೆ ಸೈನ್ಯಾಧಿಕಾರಿಗಳಿಗೆ ನಮ್ಮ ಗೌರವಾರ್ಪಣೆಗಳಿವೆ.

ಭಾಷಾನ್ವಯ ಪ್ರಾಂತಗಳು

ಬ್ರಿಟಿಶರಿಗೆ ರಾಷ್ಟ್ರೀಯ ಭಾವನೆ ಜೋಡಕವಾಗುವ ರೀತಿಯಲ್ಲಿ ಪ್ರಾಂತಗಳನ್ನು ರಚ

[ಒಳಿಯ ಪುಟಕ್ಕೆ]

ಸರಕಾರದ ಮುಂದಿರುವ ಪ್ರಕಾಂಡ ಸಮಸ್ಯೆಗಳೇ ಮಂದ ಪ್ರಗತಿಗೆ ಕಾರಣ

(೫ನೆಯ ಪುಟದಿಂದ ಮುಂದುವರಿದುದು)

ಘೋಷಿಸುವ ಅಗತ್ಯವಿರಲಿಲ್ಲ. ಮುಖ್ಯವಾಗಿ ಉತ್ತರ ಹಿಂದುಸ್ಥಾನದಲ್ಲಿ ಪ್ರಾಂತರಚನೆಯು ಭಾಷಾನುಗುಣವಾಗಿ ಆಗಿದೆ. ಆದರೆ ದಕ್ಷಿಣ ಹಿಂದುಸ್ಥಾನದ ಪರಿಸ್ಥಿತಿ ಹಾಗಿಲ್ಲ. ವಿಂಧ್ಯಾಚಲದ ಉತ್ತರಭಾಗ, ದಕ್ಷಿಣ ಭಾಗಗಳ ಸಮಸ್ಯೆಗಳು ಆಯಾ ಪ್ರದೇಶದವರಿಗೆ ಬೇರೆ ಬೇರೆಯಾಗಿವೆ. ದಕ್ಷಿಣದಲ್ಲಿ ಪ್ರಾಂತರಚನೆ ಯಾವ ತತ್ವವನ್ನೂ ಅನುಸರಿಸಿಲ್ಲ. ಮದ್ರಾಸ ಪ್ರಾಂತದಲ್ಲಿ ತಮಿಳರು, ಆಂಧ್ರರು, ಕನ್ನಡಿಗರು, ಮಲೆಯಾಳರು ಹೀಗೆ ನಾಲ್ಕು ಭಾಷೆಯ ಜನರಿದ್ದಾರೆ. ಮೊದಲು ಐದು ಭಾಷೆಯ ಪ್ರಾಂತವಿತ್ತು. ಮುಂಬಯಿ ಪ್ರಾಂತವು ಮೊದಲು ನಾಲ್ಕು ಭಾಷೆಯ ಪ್ರಾಂತವಿತ್ತು, ಸಿಂಧ ಬೇರೆ ಆದ ನಂತರ ಗುಜರಾತಿ, ಮರಾಠಿ, ಕನ್ನಡ ಹೀಗೆ ಮೂರು ಭಾಷೆಯ ಜನರುಳ್ಳ ಪ್ರಾಂತವಾಗಿದೆ. ಮಧ್ಯಪ್ರಾಂತದಲ್ಲಿ ೨ ಭಾಷೆಯ ಜನರಿದ್ದಾರೆ. ಕನ್ನಡಿಗರು ನಾಲ್ಕು ಆಡಳಿತ ವಿಭಾಗದಲ್ಲಿ ಹಂಚಿ ಹೋಗಿದ್ದಾರೆ. ಮರಾಠಿಗರು ಮೂರು ಆಡಳಿತ ವಿಭಾಗದಲ್ಲಿ ಸೇರಿ ಹೋಗಿದ್ದಾರೆ. ಶಾಲೆ ಕಾಲೇಜುಗಳ ವಿದ್ಯಾರ್ಥಿ ಹಾಗೂ ಅಧ್ಯಾಪಕರು ಒಬ್ಬರ ಭಾಷೆಯನ್ನು ಒಬ್ಬರು ತಿಳಿದುಕೊಳ್ಳಲಾರರು. ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಿಗೆ ವಕೀಲರ ಭಾಷೆ ತಿಳಿಯದು. ವಕೀಲರಿಗೆ ಪಕ್ಷಕಾರರ ಭಾಷೆ ತಿಳಿಯದು. ಶಾಸನ ಸಭೆಯಲ್ಲಂತೂ ಒಬ್ಬರು ಮಾತಾಡಿದ ಭಾಷೆ ಬೇರೆ ಸದಸ್ಯರಿಗೂ ಅರ್ಥವಾಗದು. ಇಂಗ್ಲೀಷ ಭಾಷೆ ಜನಸಾಮಾನ್ಯರಲ್ಲಿ ತೀರ ಅಲ್ಪಸಂಖ್ಯಾಕರಿಗೆ ತಿಳಿಯುವದು. ಅದು ಜನಸಾಮಾನ್ಯರ ಭಾಷೆಯಲ್ಲ. ಶಾಸನ ಸಭೆಯಲ್ಲಿ ಪಕ್ಷದ ಪ್ರತೋದನು ಹೇಳಿದಂತೆ ಸದಸ್ಯರು ಕೈ ಎತ್ತುವರು. ಅವರಿಗೆ ತಾವು ಯಾವದಕ್ಕೆ ಸಮ್ಮತಿಸಿ ಕೈ ಎತ್ತುವೆವೆಂಬುದು ತಿಳಿಯದು. ಇದನ್ನು ನೋಡಿ ಬೋಡಿಲ ಚ್ಯೂಕನು ರಶಿಯನ್ನ ಮಹಿಳೆಯನ್ನು ಲಗ್ನವಾದ ಕತೆ ನೆನಪಾಗುತ್ತದೆ. ಗಂಡ ಹೆಂಡರಲ್ಲಿ ಒಬ್ಬರ ಭಾಷೆ ಇನ್ನೊಬ್ಬರಿಗೆ ತಿಳಿಯದು. ಹೀಗಾಗಿ ಅವರು ಯಾವ ಬಡಿದಾಟವಿಲ್ಲದೆ ಸಂಸಾರ ಸಾಗಿಸಿದರಂತೆ. ಬಡಿದಾಡಬೇಕಾದರೂ ಹೆಂಡತಿ ಹೇಳಿದ್ದು ಗಂಡನಿಗೆ ತಿಳಿಯಬೇಕಲ್ಲವೆ? ಬೋರ್ಡಾರ ಪ್ರಾಯವರನು ಗುಂಡಿ ಒತ್ತಲು ದಿಕ್ಕು ತೋರಿಸುವ ಕಟ್ಟಿಗೆಯ ತುಂಡಿನಂತೆ ಶಾಸನ ಸಭೆಯ ಸದಸ್ಯರು ಪ್ರತೋದನು ಹೇಳಿದಾಗ ಕೈ ಎತ್ತುವ ವ್ಯವಸ್ಥೆ ನಿರಂತರ ಉಳಿಯಬೇಕೆಂದು ಯಾರೂ ಇಚ್ಛಿಸಲಾರರು. ಅಂತೆಯೇ ಈ ಪರಿಸ್ಥಿತಿ ತಪ್ಪಲು ಭಾಷಾವಾರ ಪ್ರಾಂತರಚನೆಯ ಬೇಡಿಕೆ ಬಂದಿದೆ.

ಘಟನಾ ಸಮಿತಿಯು ಭಾಷಾವಾರ ಪ್ರಾಂತರಚನೆಯ ಪ್ರಶ್ನೆಯನ್ನು ಕೂಲಂಕಷವಾಗಿ ವಿಚಾರಿಸಿ ವರದಿಮಾಡಲು ದರ್‌ಸಮಿತಿ ನೇಮಿಸಿದೆ. ಆದರ ವರದಿ ಹೊರಬೀಳಲಿದೆ. [ಹೊರಬಿದ್ದಿದೆ] ಘಟನಾ ಸಮಿತಿ ಹಾಗೂ ಹಿಂದುಸ್ಥಾನ ಸರಕಾರದ ಮುಂದೆ ಅನಂತ ತೊಡಕಿನ ಸಮಸ್ಯೆಗಳಿವೆ. ಆದರೆ ಮನುಷ್ಯನಿಗೆ ದೇವರು ಬುದ್ಧಿಶಕ್ತಿಯನ್ನು ಸಮಸ್ಯೆಗಳನ್ನು ಬಿಡಿಸಲೆಂದೇ ಕೊಟ್ಟಿರುವನೇ ಹೊರತು ಅವುಗಳನ್ನು ಹಿಂದೂಡಲಲ್ಲ. ಇದೇನು ಹಿಂದುಳಿದ ವರ್ಗದವರ ಉದ್ಧಾರಕ್ಕಾಗಿ ಮುಂದಿಸಲಾಗುವ ಬೇಡಿಕೆಯಂತಹ ಜಾತೀಯ ಭಾವನೆಯ ಬೇಡಿಕೆಯಲ್ಲ. ಇದು ಸಂಪೂರ್ಣವಾಗಿ ರಾಷ್ಟ್ರೀಯ ದೃಷ್ಟಿಯುಳ್ಳದ್ದೂ ವಿಧಾಯಕ ಸ್ವರೂಪದ್ದೂ ಪ್ರಜಾ ಪ್ರಭುತ್ವ ತತ್ವದ ಆಧಾರದಿಂದ ಮಂಡಿಸಲ್ಪಟ್ಟಂತಹದೂ ಆದ ಬೇಡಿಕೆ.

ದಕ್ಷಿಣ ಹಿಂದುಸ್ಥಾನಕ್ಕೆ ಸಂಬಂಧಿಸಿದ ಈ ಮಹತ್ವದ ಸಮಸ್ಯೆಯನ್ನು ಹೊಸ ಘಟನೆಯಲ್ಲಿ ಭಾಷಾವಾರ ಪ್ರಾಂತಗಳ ನಾಮನಿರ್ದೇಶ ಮಾಡಿ ತೀವ್ರದ ಮುಟ್ಟಿಗೆ ಸರಕಾರವು ಬಿಡಿಸಬಹುದೆಂದು ನಾನು ಆಶಿಸುವೆ. ಇಷ್ಟಕ್ಕೆ ಸಮಸ್ಯೆ ಪೂರ್ತಿಯಾಗಿ ಬಿಟ್ಟಂತಾಗದು. ಅಧಿಕಾರದಲ್ಲಿರುವ ಸರಕಾರವು ಪ್ರಾಂತಗಳ ಗಡಿಗಳನ್ನು ನಿರ್ಧರಿಸುವ ಮಹತ್ವದ ಕಾರ್ಯ ಕೈಕೊಳ್ಳಲು ಯೋಗ್ಯ ವ್ಯವಸ್ಥೆ ಮಾಡಬೇಕಾಗುವದು. ಗಡಿ ನಿರ್ಣಯದಲ್ಲಿ ಹೆಚ್ಚಾಗಿ ಒಂದೇ ಭಾಷೆಯ ಜನರು ಅದೇ ಭಾಷೆಯ ಪ್ರಾಂತದಲ್ಲಿ ಸೇರುವ ವ್ಯವಸ್ಥೆ ಅವಶ್ಯಕ. ಆದರೂ ಅಪರಿಹಾರ್ಯವಾಗಿ ಗಡಿ ಪ್ರದೇಶದ ದ್ವಿಭಾಷಾ ಪ್ರದೇಶದಲ್ಲಿದ್ದ ಬೇರೆ ಭಾಷೆಯ ಜನರೂ ತಮ್ಮ ಭಾಷೆಯಲ್ಲದ ಪ್ರಾಂತದಲ್ಲಿ ಸೇರಬೇಕಾಗುವದು. ಆದರೆ ಇದು ನೆರೆ ಪ್ರಾಂತಗಳ ಸ್ನೇಹ ಸಂಬಂಧ ವೃದ್ಧಿಪಡಿಸುವ ಸಾಧನವಾಗಬೇಕೇ ಹೊರತು ಅವರಲ್ಲಿ ಪರಸ್ಪರ ಭೇದವನ್ನೆಬ್ಬಿಸುವ ಕಾರಣವಾಗಬಾರದು.

ಗಡಿ ಪ್ರದೇಶಗಳು ದ್ವಿಭಾಷೆಯ ಪ್ರದೇಶಗಳಾಗಿರುವವು. ಪ್ರಾಂತಕ್ಕೆ ಆ ಪ್ರದೇಶ ಸೇರಿದರೆ ಅಲ್ಲಿಯ ಜನರು ಬೇರೆ ಭಾಷಾ ಅಲ್ಪಸಂಖ್ಯಾಕರಾಗಿ ಉಳಿಯಬೇಕಾದುದು ಅನಿವಾರ್ಯ. ನಾವು ಭಾಷಾವಾರ ಪ್ರಾಂತರಚನೆ ಮಾಡಿದ ನಂತರ ಅದರಲ್ಲಿಯ ಭಾಷಾ ಅಲ್ಪಸಂಖ್ಯಾಕರಿಗೆ ಆತ್ಮವಿಶ್ವಾಸ ಬೆಳೆಯುವಂತೆ ನೋಡಿಕೊಂಡು ಒಂದೇ ರಕ್ತದ ಅನೇಕ ಮುಖಗಳಿಂದ ಒಂದೇ ಬಗೆಯ ದಿವ್ಯ ಜ್ಯೋತಿ ಬೆಳಗುವಂತೆ ಎಲ್ಲ ಭಾಷೆಯ ಜನರ ಮೊಗದಲ್ಲಿಯೂ ಸಮಾಧಾನದ ಕಳೆ ಹೊರಹೊಮ್ಮುವಂತೆ ಮಾಡಬೇಕಾದುದು ಕರ್ತವ್ಯ. ಅಲ್ಪಸಂಖ್ಯಾಕರಿರಲಿ ಬಹುಸಂಖ್ಯಾಕರಿರಲಿ ಅವರಿಗೆ ಅವರವರ ಸಂಸ್ಕೃತಿ ಕಾಪಾಡಿಕೊಳ್ಳಲು ಸಂಪೂರ್ಣ ಅವಕಾಶವಿರಬೇಕು. ಐಕ್ಯ ಎಂದರೆ ಏಕರೂಪತೆ ಅಲ್ಲ. ವಿವಿಧತೆಯಲ್ಲಿ ಸುಸಂಬದ್ಧತೆಯನ್ನು ಪ್ರಸ್ಥಾಪಿಸುವದೇ ಐಕ್ಯವಾಗಿದೆ.

ಪ್ರಜಾಪ್ರಭುತ್ವ ತತ್ವದ ಪ್ರತಿಷ್ಠಾಪನೆ ಮಾಡುವದಾದರೆ ಭಾಷಾವಾರ ಪ್ರಾಂತರಚನೆಯ ಸಮಸ್ಯೆಯಲ್ಲದೆ ಚೀಫ ಕಮೀಶನರ ಪ್ರಾಂತಗಳ ಸಮಸ್ಯೆಯನ್ನೂ ನಾವು ಬಿಡಿಸಬೇಕಾಗಿದೆ.

ವಿಲಂಬದಿಂದ ಲಾಭವಿಲ್ಲ

ಈ ಎಲ್ಲ ಸಮಸ್ಯೆಗಳನ್ನು ಬಿಡಿಸಲು ಪ್ರಯತ್ನಿಸಿ ಯಾವದೇ ಸೂಚನೆ ಮಾಡಿದರೂ ಭಿನ್ನಾಭಿಪ್ರಾಯಕ್ಕೆ ಎಡೆ ಇರುವದರಿಂದ ಈಗ ರಾಷ್ಟ್ರದ ಮುಂದಿರುವ ಮಹತ್ವದ ಇತರ ಸಮಸ್ಯೆ ಬಿಡಿಸುವವರೆಗೆ ಇವುಗಳನ್ನು ಹಿಂದೂಡಬೇಕೆಂದು ಕೆಲವರು ಅಭಿಪ್ರಾಯ ವ್ಯಕ್ತ ಮಾಡುತ್ತಿರುವರು. ಸ್ವಾತಂತ್ರ್ಯ ಪಡೆದ ನಂತರ ರಾಷ್ಟ್ರದ ಪುನರ್ಘಟನೆಯ ಯಾವ ಸಮಸ್ಯೆಯನ್ನು ಕೈಕೊಂಡರೂ ಅದರಲ್ಲಿ ಅನಂತ ತೊಡಕುಗಳು ಇದ್ದೇ ಇವೆ. ದೇಶದ ಮುಂದಿನ ಸಮಸ್ಯೆಗಳನ್ನೆಲ್ಲ ಸಾಲಾಗಿ ಇಟ್ಟು ಒಂದರ ಹಿಂದೊಂದು ಬಿಡಿಸುತ್ತ ಹೋಗುವಾ ಎಂದು ಹೇಳುವದು ಅವ್ಯವಹಾರ್ಯವೆನಿಸದಿರದು. ಫ್ರೆಂಚ ಹಾಗು ಪೋರ್ತುಗೀಜ ವಸಾಹತುಗಳನ್ನು ಪಡೆಯಬೇಕಾಗಿವೆ. ಸಂಸ್ಥಾನಗಳ ವಿಲೀನೀಕರಣ ಸಾಧಿಸಬೇಕಾಗಿದೆ. ಇದರಲ್ಲಿ ಮೊದಲಿನ ಸಮಸ್ಯೆ ಬಿಟ್ಟ ನಂತರ ನಾವು ಸಂಸ್ಥಾನಗಳ ವಿಲೀನೀಕರಣ ಸಮಸ್ಯೆಯಬಗ್ಗೆ ವಿಚಾರಿಸುವೆವು ಎಂದು ಹೇಳಲಿಕ್ಕಾದೀತೇ? ಅನಿಷ್ಟವಾದುದನ್ನು ಕಾಲ ವಿಲಂಬನದಿಂದ ಇಷ್ಟವಾದುದನ್ನಾಗಿ ಮಾಡಲು ಬರಲಾರದು. ನಿಜವಾಗಿಯೂ ಒಳ್ಳೇ ಕಾರ್ಯವಿದ್ದರೆ ಅದನ್ನು ಮುಂದೂಡಲು ಕಾರಣವೇ ಇಲ್ಲ. ಸರಕಾರದವರು ಧೈರ್ಯದಿಂದ ಯೋಗ್ಯ ಕ್ರಮ ಕೈಕೊಂಡು ಜನರಿಗೆ ಜನತಾ ಸರಕಾರ ಸ್ಥಾಪಿಸಿಕೊಳ್ಳುವ ಮಾರ್ಗದಲ್ಲಿರುವ ತೊಂದರೆಗಳನ್ನು ನಿವಾರಿಸಲಿ.

ಗ್ರಾಮೋದ್ಯೋಗಗಳು

ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಉಂಟಾದ ಆಘಾತ ಪ್ರತ್ಯಾಘಾತಗಳ ಮಧ್ಯೆ, ಗ್ರಾಮೋದ್ಯೋಗಗಳ ಪುನರ್ಘಟನೆಗೆ ಸಾಕಷ್ಟು ಲಕ್ಷ ಕೊಡಲಾಗಿಲ್ಲ. ಯಾಂತ್ರಿಕ ಉದ್ಯೋಗಗಳು ದೊಡ್ಡವಾಗಿ ಕಂಡರೂ ಅಂಥವು ಮಾತ್ರ ಜನರಿಗೆ ಉದ್ಯೋಗವನ್ನು ಕಲ್ಪಿಸಿರುತ್ತಾರೆ. ಉಳಿದವರು ನಿರುದ್ಯೋಗಿಗಳು ಅಥವಾ ಅರೆ ಉದ್ಯೋಗಿಗಳಾಗಿರುತ್ತಾರೆ. ಈ ಜನರ ಉದ್ಧಾರವಾಗಬೇಕಾದರೆ ಒಕ್ಕಲತನದ ಮೇಲಿನ ಒತ್ತಡವನ್ನು ತಪ್ಪಿಸಬೇಕು. ಒತ್ತಡ ತಪ್ಪಬೇಕಾದರೆ ಗ್ರಾಮೋದ್ಯೋಗಗಳು ಬೆಳೆಯಬೇಕು.

ಜಪಾನದ ಉದಾಹರಣೆ

ಈ ವಿಷಯದಲ್ಲಿ ನಾವು ಜಪಾನದಿಂದ ಪಾಠ ಕಲಿಯುವಂತಿದೆ. ಅಲ್ಲಿ ಪ್ರತಿ ಮನೆ ಕಾರಖಾನೆಯಾಗಿದೆ. ಟೋಕಿಯೋ ನಗರವೊಂದರಲ್ಲಿಯೇ ೫೦೦೦೦ ಕೈಗಾರಿಕೆ ಕಾರಖಾನೆಗಳಿರುತ್ತವೆ. ಒಂದೊಂದು ಕಾರಖಾನೆ ಒಂದು ಅಥವಾ ಎರಡು ಕೋಣೆಯದು. ಬಿದಿರಿನಿಂದ ೧೨೦ ವಿವಿಧ ಕಲಾಪೂರ್ಣ ವಸ್ತುಗಳು ತಯಾರಿಸಲ್ಪಡುತ್ತವೆ. ಒಕ್ಕಲಿಗರು ಗ್ರಾಮೋದ್ಯೋಗಗಳಲ್ಲಿ ಉಪ ಉದ್ಯೋಗಗಳನ್ನು ಕೈಕೊಳ್ಳುತ್ತ ಸರಕಾರವು ಪ್ರೋತ್ಸಾಹಿಸುತ್ತದೆ. ಯುದ್ಧದಿಂದ ತಿರುಗಿ ಬಂದ ಸೈನಿಕರು ಹಳ್ಳಿಗಳಲ್ಲಿ ನೆಲಸುತ್ತಾರೆ.

(೧) ಈ ಯೋಜನೆಯಲ್ಲಿ ಸೂಚಿಸಲಾದ ಉದ್ಯೋಗಗಳನ್ನು ಕಚ್ಚಾ ಮಾಲು ವಿಪುಲವಾಗಿ ದೊರೆಯುವ ಹಳ್ಳಿಗಳಲ್ಲಿ, ಸಮುದ್ರತೀರದಲ್ಲಿ, ಬೆಟ್ಟದಡಿ ಹಾಗೂ ಕಂದರಗಳಲ್ಲಿ ಸ್ಥಾಪಿಸಬೇಕು.

(೨) ಬಂಡವಲವನ್ನು ಹಳ್ಳಿಗರೇ ಸಹಕಾರದಿಂದ ಎತ್ತಬೇಕು.

(೩) ನೆರೆಹೊರೆಯ ಹಳ್ಳಿಗರನ್ನು ಮಾತ್ರ ಸಾಧ್ಯವಿದ್ದಷ್ಟು ಕೆಲಸಕ್ಕೆ ತೆಗೆದುಕೊಳ್ಳಬೇಕು.

(೪) ಉತ್ಪಾದಿತ ವಸ್ತುಗಳು ಉತ್ತಮ ತರಗತಿಯವೂ ಭಿನ್ನ ರುಚಿಯವೂ ಇರಬೇಕು.

(೫) ಹಳ್ಳಿಯ ಔದ್ಯೋಗಿಕ ಸಂಘವು ಮೇಲ್ವಿಚಾರಣೆ ಮಾಡಬೇಕು ಮತ್ತು ಬಂಡವಲು ಕೂಡಿಸಲು ಸಹಾಯ ಮಾಡಬೇಕು. ಹಾಗೂ ವಸ್ತುಗಳ ಮಾರಾಟದ ಬೆಲೆ ನಿರ್ಣಯಿಸಬೇಕು.

(೬) ಹಳ್ಳಿಯ ಸಂಘಗಳು ಯೋಜನೆ ತಿಳಿಸಿದ ನಂತರ ಮಧ್ಯವರ್ತಿ ಬ್ಯಾಂಕು ಸಹಾಯ ನೀಡುವದು.

ಯುದ್ಧದಲ್ಲಿ ಸೋತು ಸುಣ್ಣಾದ ಜಪಾನದ ಈ ಉತ್ಸಾಹವು ಹಿಂದುಸ್ಥಾನಕ್ಕೆ ಮಾದರಿಯದಾಗಿದೆ.

ರಾಷ್ಟ್ರಭಾಷೆ

ವಿದೇಶೀಯರ ರಾಜ್ಯವಿದ್ದಾಗ ನಾವು ಎಂದೂ ವಿಶೇಷವಾಗಿ ವಿಚಾರಿಸದ ಅನೇಕ ಮಹತ್ವದ ಸಮಸ್ಯೆಗಳು ಸ್ವಾತಂತ್ರ್ಯ ಪ್ರಾಪ್ತಿಯಿಂದ ಉದ್ಭೂತವಾಗಿರುತ್ತವೆ. ಸರಕಾರದ ಭಾಷೆ ಯಾವುದು, ರಾಷ್ಟ್ರಭಾಷೆಯಾವುದು ಎಂಬುದು ಅವುಗಳಲ್ಲಿ ಮುಖ್ಯವಾದ ಪ್ರಶ್ನೆ. ಬಹುಶಃ ಎರಡೂ ಒಂದೇ ಆಗಬಹುದು. ಒಂದೇ ಆಗಲಿ ಆಗದಿರಲಿ, ಪ್ರಶ್ನೆಗೆ ಉತ್ತರ ಕೊಡುವದು ಅವಶ್ಯವಿರುತ್ತದೆ. ರಾಷ್ಟ್ರೀಯ ಉತ್ಕ್ರಾಂತಿಯಿಂದ ಉದ್ಭವಿಸುವದೇ ರಾಷ್ಟ್ರಭಾಷೆ ಹಿಂದುಸ್ಥಾನಿ ನಮ್ಮ ರಾಷ್ಟ್ರ ಭಾಷೆಯೆಂದು ಕಾಂಗ್ರೆಸು ಮಹಾತ್ಮರ ಮಾರ್ಗದರ್ಶನದಿಂದ ಒಪ್ಪಿಕೊಂಡಿರುವದು. ಆದರೆ ಇದರಲ್ಲಿ ಎರಡು ತೊಂದರೆಗಳಿವೆ. ಜನ ಸಾಮಾನ್ಯರು ತಂತಮ್ಮ ಮಾತಾಡುವ ಭಾಷೆಗಳನ್ನೇ ಬಳಸುತ್ತಾರೆ. ಅಂಥ ಭಾಷೆಗಳು ಈ ದೇಶದಲ್ಲಿ ಬಹಳ. ಆದರೂ ಉತ್ತರ ಹಿಂದುಸ್ಥಾನದಲ್ಲಿ ಬಳಕೆಯಲ್ಲಿರುವ ಭಾಷೆಯ ಅಲ್ಪ ಪರಿಚಯ ನಮಗೆಲ್ಲ ಇದೆ. ಅದೇ ರಾಷ್ಟ್ರಭಾಷೆಯಾಗುವದೆಂಬಲ್ಲಿ ಸಂಶಯವಿಲ್ಲ ಮತ್ತು ಹಿಂದುಸ್ಥಾನಿಯೇ ಅದು. ಸಂಸ್ಕೃತಮಯವಾದ ಶುದ್ಧ ಹಿಂದಿ ಹಾಗು ಅರಬಿಕ್ ಮತ್ತು ಪರ್ಶಿಯನ್ ಶಬ್ದಗಳಿಂದ ತುಂಬಿದ ಉರ್ದು— ಇವುಗಳಿಗೆ ಮಧ್ಯಾಂತರವಾದ ಭಾಷೆಯನ್ನು ನಾವು ಬೆಳೆಸಬೇಕಾಗಿದೆ. ನಾವೀಗ ಬಳಸುತ್ತಿರುವದು ಅಂತಹ ಭಾಷೆಯೇ. ಇದನ್ನು ಮರೆತು ಅನೇಕರು ವಾದಭೂಮಿಗೆ ಇಳಿದಿರುತ್ತಾರೆ. ಶುದ್ಧ ಹಿಂದಿಯನ್ನು ರಾಷ್ಟ್ರ ಭಾಷೆಯೆಂದು ಒತ್ತಾಯದಿಂದ ಹೇರುವದು ಶಕ್ಯವಿಲ್ಲ.

ವಿದೇಶಗಳಲ್ಲಿಯ ಹಿಂದೀಯರು

ವಿದೇಶಗಳಲ್ಲಿಯ ಹಿಂದೀಯರ ಸಮಸ್ಯೆಗಳಿನ್ನೂ ಬಗೆಹರಿದಿಲ್ಲ. ಬ್ರಹ್ಮದೇಶದಲ್ಲಿ ಭೂಮಿಯನ್ನು ಕಳೆದುಕೊಂಡ ಹಿಂದೀಯನಿಗೆ ಪರಿಹಾರ ಕೊಡಿಸಬೇಕು. ಸಿಂಹಳದಲ್ಲಿಯ ಹಿಂದೀಯನಿಗೆ ನಾಗರಿಕ ಹಕ್ಕುಗಳನ್ನು ಕೊಡಿಸಬೇಕು. ಪಾಕಿಸ್ತಾನದಲ್ಲಿಯ ಹಿಂದೀಯನಿಗೆ ಆರ್ಥಿಕ ಭದ್ರತೆ ಒದಗಿಸಬೇಕು. ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯ ಪ್ರಶ್ನೆಯಂತೂ ಯುಕ್ತರಾಷ್ಟ್ರ ಸಂಘವನ್ನು ಮುಟ್ಟಿದೆ. ಯು. ರಾ. ಸಂಘವು ತನ್ನ ಮೂಲ ಗೊತ್ತುವಳಿಯನ್ನೆ ಪುನಃ ಮೂರರಲ್ಲೊಂದು ಪಾಲು ಬಹುಮತದಿಂದ ಅಂಗೀಕರಿಸುವದೆಂದು ಆಶಿಸಲಾಗಿದೆ.

ಕಾಂಗ್ರೆಸು, ಸರಕಾರ ಮತ್ತು ಘಟನಾಸಮಿತಿ

ಕಾಂಗ್ರೆಸು, ಘಟನಾ ಸಮಿತಿ ಮತ್ತು ಒಕ್ಕೂಟ ಸರಕಾರ ಈ ಮೂರು ಮಹಾಸಂಸ್ಥೆಗಳು ನಮ್ಮ ದೇಶದ ಹಣೆಬರೆಹವನ್ನು ಬರೆಯುತ್ತಿವೆ. ಈ ಮೂರು ಸಂಸ್ಥೆಗಳಲ್ಲಿ ಪರಸ್ಪರ ಸಂಬಂಧವೆಂಥದಿರಬೇಕೆಂಬುದು ನಮ್ಮ ಸ್ವಾಗತ ಪ್ರಶ್ನೆ. ಕಾಂಗ್ರೆಸು ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಿತು ಅದನ್ನು ಪ್ರಮುಖವಾಗಿಸುವ ಹೊಣೆಯನ್ನು ಘಟನಾ ಸಮಿತಿಯು ಹೊತ್ತಿದೆ. ಇದು ತಾತ್ಪೂರ್ತಿಕ ಸಂಸ್ಥೆ. ಇನ್ನು ಆಡಳಿತವನ್ನು ನಡೆಸಿಕೊಂಡು ಹೋಗುತ್ತಿರುವ ಸರಕಾರ. ಮಾನವ ದೇಹಕ್ಕೆ ಹೃದಯವು ಶುದ್ಧ ರಕ್ತವನ್ನು ಒದಗಿಸುವಂತೆ ರಾಷ್ಟ್ರದ ಜೀವನ ಶಕ್ತಿಯ ಸ್ಫೂರ್ತಿ ಕೇಂದ್ರವು ಕಾಂಗ್ರೆಸ್ಸಾಗಿದೆ. ಕಾಂಗ್ರೆಸ್ಸೆಂಬ ಹೃದಯವು ಸರಕಾರವೆಂಬ ಶುದ್ಧ ರಕ್ತ ನಾಡಿಗಳ ಮುಖಾಂತರ ಜನತೆಗೆ ಜೀವನ ಶಕ್ತಿಯನ್ನು ನೀಡುತ್ತಿದೆ. ಜನತೆಯನ್ನು ಮುಟ್ಟಿದಾಗ ಸ್ವಲ್ಪ ಮಲಿನವಾದ ಕಾಂಗ್ರೆಸ ತತ್ವಗಳು ಪುನಃ ಶುದ್ಧೀಕರಣಕ್ಕಾಗಿ ಕಾಂಗ್ರೆಸ್ಸಿನ ಕಡೆಗೆ ಬರಲಿತ್ತವೆ. ಕಾಂಗ್ರೆಸು-ಸರಕಾರಗಳ ಸಂಬಂಧವಿಂತಾಯಿತು.

ಕಾಂಗ್ರೆಸು ಅಜ್ಞ ಜನತೆ ಮತ್ತು ಮುಳ್ಳಿನ ಕಿರೀಟವನ್ನು ಧರಿಸಿದ ಮಂತ್ರಿಗಳ ನಡುವಿನ ಕೊಂಡಿಯಂತಿರುತ್ತದೆ. ಜನತೆಗೆ ತಮ್ಮ ಬೇಡಿಕೆಗಳ ಜ್ಞಾನವಿರುತ್ತದೆ. ತೊಂದರೆಗಳ ಗುರುತಿರುವದಿಲ್ಲ. ಆದರೆ ಸರಕಾರವು ಅನೇಕಾನೇಕ ತೊಂದರೆಗಳಿಗೀಡಾಗಿರುತ್ತದೆ. ಜನತೆಯು ಗುಡ್ಡದ ನೆತ್ತಿಗೆ ನೇರವಾಗಿ ಹಾರಬೇಕೆನ್ನುತ್ತದೆ. ಆದರೆ ಸರಕಾರವು ಕಾಲುದಾರಿಯಿಂದ ಗುಡ್ಡವನ್ನು ಏರಿಹೋಗಲು ತಿಳಿಸುತ್ತದೆ. ಅದ್ದರಿಂದ ಈ ಉಭಯತರಲ್ಲಿ ಸಾಮರಸ್ಯವನ್ನುಂಟುಮಾಡುವದು ಕಾಂಗ್ರೆಸಿನ ಕೆಲಸ.

ಮುಂದೇನು ?

ಇನ್ನು ಹತ್ತು ವರ್ಷಗಳ ನಂತರ ಹಿಂದುಸ್ಥಾನದ ಸ್ಥಿತಿಗತಿ ಎಂತಾದೀತೆಂಬುದನ್ನು ಕ್ಷಣಹೊತ್ತು ಆಲೋಚಿಸೋಣ. ಇಂದಿನ ಇಂಗ್ಲೀಷಿನ ಪ್ರಭಾವ, ನಮ್ಮ ಪರಾವಲಂಬನದ ಅನೇಕ ಕಾರಣಗಳು ಎಲ್ಲವೂ ಆಗ ಕನಸಿನಂತೆ ಕಂಡಾವು. ಯಾಕಂದರೆ ಆಗ ನಾವೇ ನಮ್ಮ ಒಡೆಯರಾಗಿ ನಮ್ಮ ಹಿತಶತ್ರುಗಳ ದಿಕ್ಕು ತಪ್ಪುವಂತೆ ಪ್ರಗತಿಯನ್ನು ಸಾಧಿಸಿರುತ್ತೇವೆ. ನಮ್ಮಲ್ಲಿಯ ಅನೇಕ ಸಚ್ಛಕ್ತಿಗಳನ್ನು ಉಪಯೋಗಿಸಿಕೊಳ್ಳಲು ಕಲಿಯಬೇಕು. ಇಂಗ್ಲಂಡದಲ್ಲಿ ಸ್ತ್ರೀಯರಿಗೆ ಮತಾಧಿಕಾರ ದೊರೆಯಬೇಕಾದರೆ ಎಷ್ಟು ತೊಂದರೆ ಆಯಿತೆಂಬುದನ್ನು ಬಲ್ಲಿರಾ? ಇಲ್ಲಿ ಅನಾಯಾಸವಾಗಿ ಸಿಕ್ಕುಬಿಟ್ಟಿತು.

ನಮ್ಮ ಮಹಿಳೆಯರಲ್ಲಿ ಒಬ್ಬರು ರಾಯಭಾರಿಯಾಗಿದ್ದಾರೆ, ಇನ್ನೊಬ್ಬರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆ. ಮತ್ತೊಬ್ಬರು ಗವರ್ನರರಾಗಿದ್ದಾರೆ, ಇನ್ನೂ ಅನೇಕರು ಉನ್ನತ ಸ್ಥಾನದಲ್ಲಿದ್ದಾರೆ. ಇಂಥ ಸೌಭಾಗ್ಯ ಯಾವ ರಾಷ್ಟ್ರಕ್ಕಿದೆ. ಜಮೀನದಾರೀ ನಿರ್ಮೂಲನವನ್ನು ಯಾವ ಸರಕಾರ ಸಾಧಿಸಿದೆ, ಈ ರೀತಿಯಿಂದ ನಾವು ಮುನ್ನಡೆದರೆ ದೇಶದ ಭೂಮಿಯ, ಮುಖ್ಯ ಉದ್ಯೋಗಗಳ ರಾಷ್ಟ್ರೀಕರಣವು ಬೇಗನೆ ನಡೆದು ಸರ್ವರಿಗೂ ಅನ್ನ, ಬಟ್ಟೆ, ಶಿಕ್ಷಣಸೌಕರ್ಯಗಳು ದೊರೆಯುವಂತಾಗುವದೆಂದು ನಾವು ಭಾವಿಸುತ್ತೇವೆ. ಗಾಂಧೀಜಿಯವರ ರಾಮರಾಜ್ಯದ ಕಲ್ಪನೆಯೂ ಇದೇ ತೆರನಾಗಿತ್ತು.

ಸಿರಿ ಬಂದಾಗ ಹಿಗ್ಗದಿರೋಣ. ಆಧುನಿಕ ಸ್ವತಂತ್ರ ರಾಷ್ಟ್ರಗಳ ಸೌಕರ್ಯಗಳನ್ನು ಸಂಪಾದಿಸಲು ನಾವಿನ್ನೂ ಬಹು ದೂರ ಅಂತರ ಕ್ರಮಿಸಬೇಕಾಗಿದೆ. ಹೆಚ್ಚು ವ್ಯವಹಾರಿಕರಾಗಬೇಕಾಗಿದೆ, ನಿಃಸ್ವಾರ್ಥಿಗಳಾಗಬೇಕಾಗಿದೆ.

ಪ್ರಾಚೀನ ಅರ್ವಾಚೀನಗಳ ಸಾಮರಸ್ಯವನ್ನು ಸಾಧಿಸಿದ ಗಾಂಧೀಜಿಯವರ ಸಿದ್ಧಿಯಬಗ್ಗೆ ಯಾವ ಸಂದೇಹವೂ ಉಳಿದಿಲ್ಲ. ಯುಗಕ್ಕೊಬ್ಬರಂತೆ ಇವರಂಥ ವ್ಯಕ್ತಿ ಆಗುವರು. ಜಗತ್ತು ಯಾವಾಗಲೂ ಸಂಕ್ರಮಣಾವಸ್ಥೆಯಲ್ಲಿರುತ್ತದೆಂಬುದನ್ನು ಸಮನ್ವಯಿಯು ಮಾತ್ರ ಬಲ್ಲನು. ನಮ್ಮ ದೇಶಕ್ಕೆ ಇಂದಿನದು ಸಂಧಿಕಾಲ. ನಮ್ಮ ಕೈಯಲ್ಲಿಯ ಉಜ್ವಲ ಜ್ಯೋತಿಯನ್ನು ನಾವು ಕಿರಿಯರಿಗೆ ಕೊಟ್ಟು ಅವರನ್ನೇ ಹಿರಿಯರನ್ನಾಗಿಸಲು ಸಹಾಯ ಮಾಡೋಣ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೨೩

ಶೇರಪೇಟೆಯಲ್ಲಿ ಈ ವಾರ ಜವಳಿ ಗಿರಣಿ ಪಾಲುಗಳಲ್ಲಿ ಅಷ್ಟು ತ್ವರಿತ ಮುನ್ನಡೆಯಿಲ್ಲದಿದ್ದರೂ ಟಾಟಾ ಉಕ್ಕಿನ ಪಾಲುಗಳಿಗೆ ವಿಶೇಷ ಬೆಂಬಲವಿತ್ತು. ಇಂದಿನ ಕೊನೆಯ ದರಗಳು ಹೀಗಿವೆ:

ಮುಂಬಯಿ ಡಾಯಿಂಗ್	೧೦೦೮–೧೨–೬
ಸೆಂಟ್ರಲ್ ಇಂಡಿಯಾ	೨೫೪–೪–೦
ಸೆಂಚುರಿ	೨೪೦–೦–೦
ಗೋಕಾಕ	೨೬೬–೦–೦
ಕೋಹಿನೂರು	೨೯೧–೮–೦
ಸಿಂಪ್ಲೆಕ್ಸ್	೧೯೩–೮–೦
ಸ್ವದೇಶಿ	೨೯೧–೮–೦
ಬೇಲಾಪುರ ಸಕ್ಕರೆ	೨೪೩–೮–೦
ಮುಂಬಯಿ ಬರ್ಮಾ	೩೨೬–೪–೦
ಸಿಂಧ್ಯಾಸ್ಟೀಮ	೧೯–೧೪–೦
ಟಾಟಾ ಸ್ಟೀಲ ಡೆಫರ್ಡ್	೧೬೮೧–೪–೦
ಇಂಡಿಯನ್ ಅಯರ್ನ	೨೪–೧೦–೦
ಅಸೊ. ಸಿಮೆಂಟ್ಸ	೧೫೭–೮–೦
ಸೆಂಟ್ರಲ ಬ್ಯಾಂಕ	೮೬–೦–೦
ಇಂಪೀರಿಯಲ್ ಬೂರ್ಡ	೧೭೯೫–೦–೦
ಬ್ಯಾಂಕ ಅಫ್ ಇಂಡಿಯಾ	೧೯೦–೮–೦

ಚಿನ್ನ-ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಬೆಲೆಗಳು ತೀರ ಸ್ವಲ್ಪ ಅಂತರದ ಮೇಲೆ ಓಡಾಡುತಿವೆ. ಬೆಲೆಗಳ ಲಹರಿ ಕೆಳಮುಖವೇ. ವಾಯಿದೆ ವ್ಯಾಪಾರವನ್ನು ಪ್ರತಿಬಂಧಿಸುವ ಕಾಯಿದೆ ಬಂದಿದೆ.

ತಯಾರಿ ಚಿನ್ನ	೧೧೨–೮–೦
ತಯಾರಿ ಬೆಳ್ಳಿ	೧೭೯–೦–೦
ಸಾವರಿನ್	೭೩–೮–೦

ಅರಳೆ

ಅರಳೆ ಬೆಲೆ ಸ್ವಲ್ಪ ಸುಧಾರಿಸಿದೆ-

ಫೆಬ್ರುವರಿ	೬೧೯–೧೨–೦
ಮೇ	೬೨೪–೮–೦
ಜುಲೈ	೬೧೫–೮–೦
ಸಪ್ಟಂಬರ	೬೧೫–೮–೦

ಎಣ್ಣೆಕಾಳು

ಶೇಂಗಾ	೧೭೬–೪–೦
ಅಗಸಿ	೨೭–೧೦–೦
ಅಗಸಿ ಎಣ್ಣೆ	೧೬–೧೪–೦
ಔಡಲ	೨೯–೪–೦

ಶಿವಮೊಗ್ಗ

ದೇಶಾವರ ಅಡಿಕೆ ನಂ. ೧ ಮಣ ೧ಕ್ಕೆ	೨೯-೩೦
,, ,, ೨-೩	೨೫-೨೮
ತೊರಸಾಲು	೨೨-೨೫
ಅಣ್ಣಾವರ	೨೦-೨೪
ರಾಜಾಆಲವು	೨೬-೨೮
ಚಿಟ್ಟೆವಂತಿ	೧೬॥-೧೭॥
ಚಿಟ್ಟೆ	೧೪-೧೫॥

ಹುಬ್ಬಳ್ಳಿ

ತಾ. ೨೩

ಜ. ಹತ್ತಿ ನಗಕ್ಕೆ		೪೫೦-೪೮೦
ಮು. ಹತ್ತಿ		೬೪೦-೪೫೦
ಜ. ಅರಳೆ	,,	೨೭೫-೩೦೩
ಹತ್ತಿಕಾಳು	ರೂ. ಗೆ	೫೩ ಪೌಂಡ
ಕುಸುಬಿ	(ಚೀಲಕ್ಕೆ)	೩೩-೩೪
ಅಗಸಿ	,,	೩೮-೪೨
ಔಡಲ	,,	೪೧-೪॥
ಜ. ಹೆಸರು	,,	೫೨ ೫೪
ಕರಿ ಎಳ್ಳು	,,	೫೬-೫೮॥
ಬಿಳಿ ಎಳ್ಳು	,,	೬೮-೭೦
ಕಡಲೆ	,,	೬೦-೬೪
ಜ. ತೊಗರಿ	,,	೩೬-೩೮
ಹುರಳಿ	,,	೪೪-೪೬॥
ಕೆಂ. ಅಲಸಂದಿ	,,	೫೬-೫೭
ಬಿ. ಅಲಸಂದಿ	,,	೬೦-೬೨
ಶೇಂಗಾ (ಹೇರು)		೪೨-೪೫

ಜಪಾನದ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಜನರಲ್ ಟೋಜೋ ಮತ್ತು ಆರು ಜನರ ವಿರುದ್ಧ ಅಂತರ್ ರಾಷ್ಟ್ರೀಯ ನ್ಯಾಯ ಮಂಡಳದಲ್ಲಿ ವಿಚಾರಣೆ ನಡೆದು ಗಲ್ಲಿನ ಶಿಕ್ಷೆ ವಿಧಿಸಲ್ಪಟ್ಟಿದ್ದರಷ್ಟೆ. ಸುಪ್ರೀಮ ಕೋರ್ಟಿಗೆ ಮಾಡಿಕೊಂಡ ಅಪೀಲು ನಿರಾಕೃತವಾದ್ದರಿಂದ ಅವರೆಲ್ಲರನ್ನು ೨೩ ಕ್ಕೆ ಗಲ್ಲಿಗೇರಿಸಲಾಯಿತು.

ನೆಹರೂ ಸರಕಾರದಲ್ಲಿ ಸಂಪೂರ್ಣ ವಿಶ್ವಾಸ

[೩ನೆಯ ಪುಟದಿಂದ ಮುಂದರಿದುದು]

ಸ್ವಾತಂತ್ರ್ಯಾನಂತರ ಇದೇ ಮೊದಲ ಕಾಂಗ್ರೆಸ ಅಧಿವೇಶನವಾದ್ದರಿಂದ ಎಂದಿಗಿಂತ ಈ ಸಲ ಅ. ಭಾ. ಕಾಂ. ಸಮಿತಿಯ ಸದಸ್ಯರು ಹೆಚ್ಚು ಪ್ರಮಾಣದಲ್ಲಿ ಉಪಸ್ಥಿತರಿದ್ದರು. ಅವರನ್ನೊಳಗೊಂಡು ೧೦೦ ಕ್ಕೆ ೭೫ ರಷ್ಟು ಸದಸ್ಯರಾದರೂ ಸಭೆಗೆ ಬಂದಿದ್ದರೆಂದು ತಿಳಿಯುತ್ತದೆ.

ಈ ದಿನದ ಚರ್ಚೆ ಎಲ್ಲಿ ಒಂದು ಸ್ವಾರಸ್ಯವೆಂದರೆ ಭಾರತ ಮುಖ್ಯ ಮಂತ್ರಿ ಪಂ. ಜವಾಹರಲಾಲರು, ಭಾರತದ ಗವ್ಹರ್ನರ ಜನರಲರ ಸಂಬಳದ ಬಗ್ಗೆ ಮಾತನಾಡುವಾಗ ತಮ್ಮ ಸಂಬಳದ ಮಾತನ್ನೂ ಎತ್ತಿದರು. ಆದರೆ ಅವರಿಗೆ ತಮ್ಮ ಸಂಬಳ ಎಷ್ಟೆಂಬುದೇ ಗೊತ್ತಾಗದೆ ಸರದಾರ ಪಟೇಲರನ್ನೂ ಡಾ. ಪಟ್ಟಾಭಿಯವರನ್ನೂ-ನನ್ನ ಸಂಬಳ ಎಷ್ಟು ಎಂದು ಕೇಳಲು ಅವರೂ ಆಶ್ಚರ್ಯಚಕಿತರಾಗಿ ಸುಮ್ಮನೆ ಅವರ ಮುಖವನ್ನು ಮಿಕಿಮಿಕಿ ನೋಡಿದರು. ಆಗ ಸಭೆಯೆಲ್ಲ ನಗೆಗಡಲಲ್ಲಿ ತೇಲಿಹೋಯಿತು.

ಮೊದಲು ಸಭೆಯು ಮ. ಗಾಂಧಿಯವರ ನಿಧನದ ಬಗ್ಗೆ ಒಂದು ಗೊತ್ತುವಳಿ ಸ್ವೀಕರಿಸಿ ಅವರ ಕೊಲೆಯ ಬಗ್ಗೆ ನಾಚಿಕೆಯನ್ನೂ ದುಃಖವನ್ನೂ ವ್ಯಕ್ತಪಡಿಸಿ ಮಹಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಆ ಮೇಲೆ ಇನ್ನೊಂದು ಗೊತ್ತುವಳಿಯಲ್ಲಿ ಎಂ. ಎ. ಜಿನ್ನಾ, ಕೆ. ಎಫ್. ನರಿಮನ್, ಬಿ. ಜಿ. ಹಾರ್ನಿಮನ್ ಇವರ ನಿಧನದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಗೊಳಿಸಿತು.

ಮಂತ್ರಿಗಳ ವರ್ತನೆ

ತಾ ೧೬, ೧೭, ಮತ್ತು ೧೮ ರ ಮುಂಜಾವು ಈ ಮೂರು ದಿನ ವಿಷಯ ನಿಯಾಮಕ ಸಮಿತಿಯಲ್ಲಿ ದಿಲ್ಲಿಯ ಕಾಂಗ್ರೆಸ ಕಾರ್ಯ ಸಮಿತಿಯಲ್ಲಿ ಸ್ವೀಕರಿಸಲಾದ ಎಲ್ಲ ಗೊತ್ತುವಳಿಗಳೂ ಸ್ವೀಕರಿಸಲಾದವು. ಸಾರ್ವಜನಿಕ ನಡೆವಳಿಯ ಬಗ್ಗೆ ಇದ್ದ ಗೊತ್ತುವಳಿಯು ಮಾತ್ರ "ಮಂತ್ರಿಗಳು ಕೂಡ ಸಾರ್ವಜನಿಕ ನೀತಿಮತ್ತೆಯನ್ನು ಕಾಯ್ದುಕೊಳ್ಳುವಂತೆ ತಮ್ಮ ವರ್ತನವನ್ನು ಇಟ್ಟುಕೊಳ್ಳಬೇಕು". ಎಂಬುದಾಗಿ ತಿದ್ದಲ್ಪಟ್ಟು ಸ್ವೀಕೃತವಾಯ್ತು. ಕಾಂಗ್ರೆಸ ಕಾರ್ಯಸಮಿತಿಯ ಗೊತ್ತುವಳಿಯು ವಿಷಯ ನಿಯಾಮಕ ಸಮಿತಿಯಲ್ಲಿ ಬಹುಮತದಿಂದ ತಿದ್ದುಪಡಿ ಹೊಂದಿದ್ದು ಇದೇ ಮೊದಲ ಸಲ.

ನೆಹರು ಸರಕಾರದಲ್ಲಿ ವಿಶ್ವಾಸ

ಆದರೆ ಮರುದಿನದ ಅಧಿವೇಶನದಲ್ಲಿ ಪಂ. ಜವಾಹರಲಾಲರು ಮತ್ತು ಸರದಾರ ಪಟೇಲರು ಈ ಮಾರ್ಪಾಟಿನ ಬಗ್ಗೆ ಆಕ್ಷೇಪವೆತ್ತಿ ಸುದೀರ್ಘ ಭಾಷಣ ಮಾಡಿದರು. ಮಂತ್ರಿಗಳ ನಡೆವಳಿಯ ಮಾತು ಸೇರಿಸುವದೆಂದರೆ ಅವರ ಪ್ರತಿಷ್ಠೆಯನ್ನು ತಗ್ಗಿಸಿದಂತಾಗುವದಲ್ಲದೆ ಅವರಲ್ಲಿ ಒಂದು ಪ್ರಕಾರದ ಅಪ್ರತ್ಯಕ್ಷ ಅವಿಶ್ವಾಸವನ್ನೇ ವ್ಯಕ್ತಗೊಳಿಸಿದಂತಾಗುವದೆಂದು ಮುಖ್ಯಮಂತ್ರಿಗಳೂ ಉಪಮುಖ್ಯ ಮಂತ್ರಿಗಳೂ ಆವೇಶಯುಕ್ತವಾಗಿ ಪ್ರತಿಪಾದಿಸಿದರು. ಇವೆಲ್ಲದರ ಫಲವಾಗಿ ತಿದ್ದುಪಡಿಯ ಮಾತುಗಳಿಲ್ಲದೆ ಈ ಗೊತ್ತುವಳಿಯು ಮೂಲ ರೂಪದಲ್ಲಿಯೇ ಬಹುಮತದಿಂದ ಸ್ವೀಕೃತವಾಯಿತು ಹಾಗೂ ನೆಹರೂ ಸರಕಾರದಲ್ಲಿ ಸಂಪೂರ್ಣ ವಿಶ್ವಾಸವನ್ನೂ ವ್ಯಕ್ತಗೊಳಿಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸಿನ ಕಾರ್ಯದರ್ಶಿಗಳು ಮತ್ತು ಸರದಾರ ಪಟೇಲರು ಭಾರತವಾಸಿಗಳು ಅದರಲ್ಲಿಯ ಕಾಂಗ್ರೆಸಿಗರು ಶಿಸ್ತನ್ನೂ ಪರಿಶುದ್ಧ ವರ್ತನೆಯನ್ನೂ ಕಾಯ್ದುಕೊಳ್ಳದಿದ್ದರೆ ಗಂಭೀರ ಪರಿಸ್ಥಿತಿ ಬರಬಹುದೆಂದು ಎಚ್ಚರಿಸಿದರು.

ಭಾಷಾನುಗುಣ ಪ್ರಾಂತರಚನೆ

ತಾ. ೧೮ರ ಮುಂಜಾನೆ ನಡೆದ ವಿಷಯ ನಿಯಾಮಕ ಸಮಿತಿಯಲ್ಲಿ ಕೈಕೊಂಡ ಇನ್ನೊಂದು ಮಹತ್ವದ ನಿರ್ಣಯವೆಂದರೆ ಭಾಷಾನುಗುಣ ಪ್ರಾಂತರಚನೆಯ ಬಗ್ಗೆ. ಈ ವಿಷಯದ ಬಗ್ಗೆ ಡರ್ ಸಮಿತಿಯು ಪ್ರತಿಕೂಲ ತೀರ್ಮಾನ ಕೊಟ್ಟಿದ್ದು ಇದು ಕಾಂಗ್ರೆಸಿನ ಧ್ಯೇಯಕ್ಕೂ ಕೊಟ್ಟ ಆಶ್ವಾಸನಕ್ಕೂ ಕೊಡಲಿಯ ಪೆಟ್ಟಿನಂತಿದೆ. ಆದ್ದರಿಂದ ಇದನ್ನು ಪುನರ್ವಿಮರ್ಶಿಸಿ ಕಾಂಗ್ರೆಸ ಕಾರ್ಯಸಮಿತಿಗೆ ೩ ತಿಂಗಳ ಅವಧಿಯಲ್ಲಿ ವರದಿ ಮಾಡಲು, ಪಂ. ಜವಾಹರಲಾಲ, ಸರದಾರ ವಲ್ಲಭಭಾಯಿ ಪಟೇಲ ಮತ್ತು ಡಾ. ಪಟ್ಟಾಭಿ ಈ ಮೂವರ ಉಪಸಮಿತಿಯನ್ನು ನಿಯಮಿಸಬೇಕೆಂದು ಗೊತ್ತಾಯಿತು. ಈ ಸಮಿತಿಯು, ಈ ಬಗ್ಗೆ ಆದ ಕಾಂಗ್ರೆಸಿನ ಹಿಂದಿನ ಗೊತ್ತುವಳಿಗಳನ್ನು ಲಕ್ಷ್ಯದಲ್ಲಿಟ್ಟು ಈ ವಿಷಯವನ್ನು ಪುನರ್ವಿಚಾರ ಮಾಡಬೇಕೆಂದು ಸೂಚಿಸಲಾಗಿದೆ.

ಮನರಂಜಕ ಘಟನೆಗಳು

ಅಧಿವೇಶನದ ಗುರುಗಂಭೀರವಾದ ವಿಚಾರ ಮಾರ್ಗಗಳನ್ನು ಛೇದಿಸಿ ಆಗೊಮ್ಮೆ ಈಗೊಮ್ಮೆ ಅಲ್ಲಿ ಇಲ್ಲಿ ಕೆಲವು ಮನರಂಜಕ ಘಟನೆಗಳೂ ನಡೆಯದಿರಲಿಲ್ಲ. ವೇದಿಕೆಯ ಮೇಲೆ ಕುಳಿತ ಪ್ರತಿಷ್ಠಿತ ನೇತಾರರು ಯಾರು ಕಾಲು ಚಾಚಿದ್ದರು ಯಾರು ದಿಂಬಿಗೆ ಒರಗಿದ್ದರು. ಯಾರು ನಡುನಡುವೆ ಹುರಿಗಡಲೆಯನ್ನೋ ಶೇಂಗಾವನ್ನೋ ಮುಕ್ಕುತ್ತಿದ್ದರು. ಸ್ವತಃ ಡಾ. ಪಟ್ಟಾಭಿಯವರು ನಡುನಡುವೆ ಕಡಲೆಯ ಕಾಳುಗಳನ್ನು ಸರಿಯಾಗಿ ಗುರಿಯಿಟ್ಟು ತಮ್ಮ ಬಾಯಿಗೆ ಎಸೆಯುತ್ತಿದ್ದರು. ಅವರಿಗೆ ಈಗ ವರುಷ ೭೦ ಆಗಿದ್ದರೂ ಅವರಿಗೆ ತಮ್ಮವೇ ಆದ ಗಟ್ಟಿ ಹಲ್ಲುಗಳುಂಟು. ಡಾ. ಪಟ್ಟಾಭಿಯವರು ಈ ೨ ದಿನಗಳಲ್ಲಿ ತೆಲುಗು, ತಮಿಳ, ಹಿಂದೀ, ಇಂಗ್ಲೀಷ ಹೀಗೆ ೪ ಭಾಷೆಗಳಲ್ಲಿ ಮಾತನಾಡಿದರು. ೫ ನೆಯ ಭಾಷೆಯಾದ ಕನ್ನಡವೂ ಅವರಿಗೆ ಬರುತ್ತದೆ.

ಸಭೆಯ ಕಾಲಕ್ಕೆ ಕಡೆತನಕ ದೇವರಂತೆ ಶಾಂತವಾಗಿ ಕುಳಿತವರೆಂದರೆ ಸುಚೇತಾ ಕೃಪಲಾನಿಯವರೆನ್ನಬೇಕು. ತದ್ವಿರುದ್ಧವಾಗಿ, ಪ್ರೊ. ರಂಗಾ ಅವರು ಒಂದು ಮೆಟ್ಟಿನಲ್ಲಿಯೂ ಕೂಡದೆ, ಸುಮ್ಮನೆಯೂ ಇರದೆ, ಎಡಬಲಕ್ಕಿದ್ದವರ ಕಿವಿಯಲ್ಲಿ ಪಿಸುಗುಟ್ಟುವದು ಇಲ್ಲವೆ ಸ್ಥಳದಿಂದ ಸ್ಥಳಕ್ಕೆ ಓಡಾಡುವದು ಮಾಡುತ್ತಿದ್ದರು.

ವಿಷಯನಿಯಾಮಕ ಸಮಿತಿಯ ಸಭೆಯಲ್ಲಿ ಯಾರೋ ಒಬ್ಬರು ಚಿಂದಿಯ ಉಡುಪಿನಲ್ಲಿ ಒಮ್ಮೆಗೇ ಅಧ್ಯಕ್ಷ ವೇದಿಕೆ ಏರಿ ನಿಂತು ದೊಡ್ಡ ಭಾಷಣ ಮಾಡುವವರಂತೆ ಸಭಿಕರತ್ತ ಕೈಮುಗಿದು ಒಳ್ಳೆ ತೀವಿಯಲ್ಲಿ ನಿಂತುಕೊಂಡರು. ಆದರೆ ಕೂಡಲೇ ಅವರನ್ನು ಬದಿಗೆ ಸರಿಸಲಾಯ್ತು. ಅವರು ಹೊರಟುಹೋಗುವ ಮೊದಲು ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಸದಸ್ಯರ ಕಡೆಗೆ ಹೊರಳಿ ಸಿಕ್ಕಾಪಟ್ಟೆ ಕೂಗಾಡಿ ಒಳ್ಳೆ ಧೂಳಿಯನ್ನೇ ಎಬ್ಬಿಸಿ ಹೋದರು.

ಬಹಿರಂಗ ಅಧಿವೇಶನ

ಹಿಂದುಸ್ಥಾನ ರಾಷ್ಟ್ರೀಯ ಕಾಂಗ್ರೆಸಿನ ೫೫ ನೆಯ ಬಹಿರಂಗ ಅಧಿವೇಶನವು ಮಧ್ಯಾಹ್ನ ೩ ಕ್ಕೆ ಡಾ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯ್ತು. ಇದಕ್ಕೆ ರಚಿತವಾದ ಸಭಾಮಂಟಪವನ್ನು ಅತ್ಯಂತ ಕುಶಲತೆಯಿಂದಲೂ ವೈಭವದಿಂದಲೂ ಅಲಂಕರಿಸಲಾಗಿತ್ತು. ೨ ಲಕ್ಷಕ್ಕಿಂತ ಹೆಚ್ಚು ಜನರನ್ನು ಒಳಗೊಳ್ಳುವಷ್ಟು ಈ ಮಂಟಪವು ವಿಶಾಲವಾಗಿತ್ತು. ಮುಖ್ಯವೇದಿಕೆಯ ಮೇಲೆ ಅಧ್ಯಕ್ಷರು ವಿಷಯ ನಿಯಾಮಕ ಸಮಿತಿಯ ಸದಸ್ಯರು, ಪ್ರತಿಷ್ಠಿತ ಪ್ರೇಕ್ಷಕರು ಮೊದಲಾದ ೧ ಸಾವಿರ ಜನರು ವಿರಾಜಮಾನರಾಗಿದ್ದರು. ಅಧಿವೇಶನ ಪ್ರಾರಂಭವಾಗುವ ಸ್ವಲ್ಪ ಮುಂಚೆ ಜನದಟ್ಟಣೆಯು ಅತಿಶಯವಾಗಿ ಸಭೆಯ ವ್ಯವಸ್ಥೆ ಕುಸಿವ ಹೆದರಿಕೆಯುಂಟಾಗಿತ್ತು. ಆದರೆ ಕೂಡಲೆ ಎಲ್ಲವನ್ನು ಸರಿಪಡಿಸಲಾಯ್ತು. ವಂದೇಮಾತರಂ ಗೀತದಿಂದ ಕಾರ್ಯಕ್ರಮಗಳು ಪ್ರಾರಂಭವಾದವು.

ಸಭೆ ಪ್ರಾರಂಭವಾಗುವ ಮೊದಲು ಸುಮಾರು ೧ನೂ ೨ ಪತ್ರಿಕಾ ಕರ್ತರು ಸಿಡಿಮಿಡಿಗೊಂಡು ತಮಗೆ ತಕ್ಕ ಏರ್ಪಾಟು ಆಗಿಲ್ಲವೆಂದು ಸಭಾತ್ಯಾಗ ಮಾಡಲುದ್ಯುಕ್ತರಾದರು. ಆಗ ಹೆಚ್ಚಿನ ತಂಟೆಯುಂಟಾಗದಂತೆ ಸ್ವಾಗತಾಧ್ಯಕ್ಷರು ಅವರನ್ನು ರಮಿಸಿ ನಾಳೆ ಎಲ್ಲವನ್ನೂ ಸರಿಪಡಿಸಲಾಗುವದೆಂದು ಆಶ್ವಾಸನ ಕೊಟ್ಟು ಶಾಂತಿಗೊಳಿಸಿದರು. ಈ ಅಧಿವೇಶನಕ್ಕೆ ಒಟ್ಟು ೧ ಸಾವಿರ ಜನ ಪತ್ರಿಕಾ ಕರ್ತರು ಬಂದಿದ್ದರು.

ಅಧ್ಯಕ್ಷರು ಮೊದಲು ಹಿಂದಿಯಲ್ಲಿಯೂ ಆ ನಂತರ ಇಂಗ್ಲೀಷಿನಲ್ಲಿಯೂ ಒಳ್ಳೆ ಉದ್ಬೋಧಕ ಭಾಷಣ ಮಾಡಿದರು. (ಇದರ ಸಾರವನ್ನು ಬೇರೆ ಕಡೆಗೆ ಕೊಟ್ಟಿದೆ) ದಕ್ಷಿಣ ಹಿಂದುಸ್ಥಾನದ ನೇತಾರರು ಇಷ್ಟು ಅಸ್ಖಲಿತ ಹಿಂದಿಯನ್ನು ಈ ವರೆಗೆ ಯಾರೂ ಮಾತಾಡಿಲ್ಲವೆಂದು ಉತ್ತರ ಹಿಂದುಸ್ಥಾನದವರು ಪ್ರಶಂಶಿಸಿದರು.

ಬಹಿರಂಗ ಅಧಿವೇಶನದಲ್ಲಿ ಪಂ. ಜವಾಹರಲಾಲರು, ಸರದಾರ ಪಟೇಲರು, ಗೋವಿಂದವಲ್ಲಭ ಪಂತ, ಶ್ರೀ ಶಂಕರರಾವ ದೇವ, ಅಬುಲಕಲಂ ಅಝಾದ ಇವರೇ ಮೊದಲಾದವರು ಮಾತನಾಡಿದರು. ಕಾರ್ಯ ಸಮಿತಿಯಲ್ಲಿ ಸ್ವೀಕೃತವಾದ ಎಲ್ಲ ಗೊತ್ತುವಳಿಗಳೂ ಬಹಿರಂಗ ಅಧಿವೇಶನದಲ್ಲಿ ಅಂಗೀಕೃತವಾದವು.

ಅಧಿವೇಶನವು ತಾ. ೧೯ ರ ರಾತ್ರಿ ೯.೧೦ ಕ್ಕೆ ಮುಕ್ತಾಯವಾಯಿತು. ಪಂ. ನೆಹರು ಅವರು ಕೊನೆಗೆ ಸ್ವಾಗತ ಸಮಿತಿಯನ್ನು ಅಭಿನಂದಿಸುತ್ತ, ಇನ್ನು ಈ ಬಗೆಯ ಜಾತ್ರೆಯಂತಹ ಅಧಿವೇಶನಗಳು ನಿಲ್ಲಬೇಕೆಂದು ನುಡಿದರು. ರಾಷ್ಟ್ರಪತಿ ಡಾ. ಪಟ್ಟಾಭಿಯವರು ಸಮಾರೋಪದ ಭಾಷಣ ಮಾಡುತ್ತ "ಸರದಾರ ಪಟೇಲರ ಮಾರ್ಗದರ್ಶನ, ಸಹೋದ್ಯೋಗಿಗಳ ಸಹಕಾರ ಇಲ್ಲದಿದ್ದರೆ, ಸದಸ್ಯರು, ಸಮರ್ಪಕವಾಗಿ ನಡೆದುಕೊಂಡು ಮುಕ್ತ ಮನಸ್ಸಿನ ನಿರ್ಣಯಗಳಿಗೆ ಮನ್ನಣೆ ಕೊಡದಿದ್ದರೆ, ನನಗೆ ಈ ಮಹಾ ಅಧಿವೇಶನವನ್ನು ಜೇಟಾ ಪತ್ರಿಕೆಗನುಗುಣವಾಗಿ ನಡೆಸಲು ಸಾಧ್ಯವಾಗುತ್ತಿದ್ದಿಲ್ಲ" ಎಂದು ಮೊದಲಾಗಿ ಉದ್ಗರಿಸಿದರು. 'ಗಾಂಧೀಜಿಯವರ' ಮಾತ್ರ ಈ ಗದ್ದಲದೊಳಗೆ ಅಧಿವೇಶನದ ಕಾರ್ಯಕಲಾಪಗಳು ಕೊನೆಗೊಂಡವು. ಹೈದರಾಬಾದ, ಕರ್ನಾಟಕ, ತಮಿಳನಾಡುಗಳು ಮುಂದಿನ ಕಾಂಗ್ರೆಸ ಅಧಿವೇಶನಕ್ಕೆ ಆಮಂತ್ರಣ ಕೊಟ್ಟಿರುವರೆಂದು ತಿಳಿಯುತ್ತದೆ.

ಟ್ರ್ಯಾಕ್ಟರು ಮಣ್ಣಿಗೆ ಅಪಾಯಕರ

[ಒಕ್ಕಲಿಗರ ಮತ್ತು ಅಧಿಕ ಆಹಾರೋತ್ಪಾದನೆಗಳನ್ನು ಸುಧಾರಿಸುವದಕ್ಕೆ ಕೆಲ ಜಾಗ, ಕಡೆಗಳಲ್ಲಾಗುವ ಟ್ರ್ಯಾಕ್ಟರ ಉಪಯೋಗದ ಬಗ್ಗೆ ತಕ್ಕ ಉಪಾಯಗಳನ್ನು ಯೋಚಿಸಿಕೊಳ್ಳದೆ, ಪಾಶ್ಚಾತ್ಯರ ಪದ್ಧತಿಗಳನ್ನು ಅಂಧರಂತೆ ಅನುಕರಣ ಮಾಡುತ್ತಲಿದ್ದರೆ, ಈ ಸಂಬಂಧದಲ್ಲಿ ಪ್ರಕಟವಾದ ಸಪ್ಟಂಬರ ೨೫, ೧೯೪೮ "ಸೈನ್ಸ ನ್ಯೂಜ್ ಲೆಟರ" ಎಂಬ ಪತ್ರಿಕೆಯಲ್ಲಿ ಅಚ್ಚಾದ ಒಂದು ಚಿಕ್ಕ ಟಿಪ್ಪಣಿಯನ್ನು ನಾನು ಈ ಮೂಲಕ ಕಳಿಸುತ್ತೇನೆ.

ನಾನು ಕಾರ್ನೆಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮತ್ತು ಇದೇ ಈಗ ನಾನು ಇದಕ್ಕೆ ಸಂಬಂಧಿಸಿದ ಪರಿಶ್ರಮ ಪ್ರಯೋಗಗಳನ್ನು ಮಾಡುವ ಸ್ಥಳಕ್ಕೆ ಭೆಟ್ಟಿಕೊಟ್ಟು ಬಂದೆ. ಟಿಪ್ಪಣಿಯಲ್ಲಿ ಹೇಳಿದಂಥ ಎಲ್ಲ ಅಂಶಗಳನ್ನು ಗಮನಕ್ಕೆ ತಂದುಕೊಂಡು ಸಂತರವೇ ಆಹಾರದ ಅಧಿಕೋತ್ಪಾದನಕ್ಕೆ ಟ್ರ್ಯಾಕ್ಟರುಗಳನ್ನು ಹೆಚ್ಚು ಬುದ್ಧಿಮಾತಿಕೆಯಿಂದ ಬಳಸುವಂತೆ ಕೃಷಿ ಸುಧಾರಣೆಗೆ ಸಂಬಂಧಪಟ್ಟವರು ನೋಡಿಕೊಳ್ಳತಕ್ಕದ್ದು.

—ಎಂ. ಎಸ್. ಪಟೀಲ]

ಕುದುರೆಗಳನ್ನು ಬಿಟ್ಟು ಟ್ರ್ಯಾಕ್ಟರುಗಳನ್ನು ಬಳಸಿದುದರಿಂದ ಅಮೇರಿಕದ ಗದ್ದೆಗಳಲ್ಲಿ ಮಣ್ಣು ಕೆಡುವ ಭೀತಿ ಹುಟ್ಟಿದೆ. ನ್ಯೂಯಾರ್ಕ ಜಿಲ್ಲೆಯಲ್ಲಿ ಮಣ್ಣಿನ ಮೇಲೆ ಪ್ರಾಣಿಜ ಪದಾರ್ಥಗಳ ಪರಿಣಾಮಗಳು ಮತ್ತು ಸೌಲಾಗುವುದು. ಇವುಗಳ ಅಭ್ಯಾಸವನ್ನು ಮುಗಿಸಿದ ಕಾರ್ನೆಲ್ ವಿಶ್ವವಿದ್ಯಾನಿಲಯದ ಮೃತ್ತಿಕಾ ಸಂರಕ್ಷಕ ಶಾಖೆಯ ಮೂವರು ವಿಜ್ಞಾನಿಗಳು ಮೇಲಿನ ತೀರ್ಮಾನಕ್ಕೆ ಬಂದಿದ್ದಾರೆ.

ಪ್ರಾಣಿಜ ಪದಾರ್ಥದ ಅಂಶ ಕಡಿಮೆಯಿರುವ ಮಣ್ಣನ್ನು ಎರಡು ನೇಗಿಲು ಟ್ರ್ಯಾಕ್ಟರಿನ ರಬ್ಬರ್ ಟೈರಿನಷ್ಟು ಕರ್ಷಣ ಶಕ್ತಿಗೆ ಒಳಪಡಿಸಿದರೆ, ಮಣ್ಣಿನ ಮೂಲಕ ನೀರು ಬಹು ಮಂದಗತಿಯಿಂದ ಹೋಗುವಂತಾಗುವಷ್ಟು ಮಣ್ಣು ಗಟ್ಟಿಯಾಗುವದು ಎಂದು ಡಾ॰ ಜಾನ್ ಲ್ಯಾಂಬ ಜೂನಿಯರರು ಹೇಳಿದರು. ಪ್ರಾಣಿಜ ಪದಾರ್ಥ ಹೆಚ್ಚಿದ್ದಲ್ಲಿ ಅದು ಕೆಳಮಣ್ಣು ಗಟ್ಟಿಯಾಗದಂತೆ ತಡೆಯುವುದು. ಪ್ರಾಣಿಜ ಪದಾರ್ಥದ ಮೊತ್ತ ಮತ್ತು ಕರ್ಷಣಶಕ್ತಿಯ ತೀವ್ರತೆ ಇದೇ ಮಣ್ಣು ಹೀರಿಕೊಳ್ಳುವ ತೇವದ ಪರಿಮಾಣವನ್ನು ನಿರ್ಧರಿಸತಕ್ಕವು.

ಮೃತ್ಪರೀಕ್ಷೆಯಲ್ಲಿ ಬಳಸಿದ ಕರ್ಷಣಶಕ್ತಿ ಟ್ರ್ಯಾಕ್ಟರು ಇಲ್ಲವೆ ಖಾಲಿ ಲಾರಿಯ ಶಕ್ತಿ ಸಮವಾಗಿತ್ತು.

ಫಲಿತಾಂಶ, ಅಭ್ಯಸಿಸಿದ ಮಣ್ಣಿನ ಪ್ರತಿಯೊಂದು ಮಾದರಿಯಲ್ಲೂ ಅತ್ಯಂತ ಗಟ್ಟಿಯಾದ ಮಣ್ಣು ಬಹಳ ಕಡಿಮೆ ಪ್ರಾಣಿಜ ಪದಾರ್ಥಾಂಶವುಳ್ಳದ್ದಾಗಿ ಕಂಡು ಬಂದಿತು.

"ನಮ್ಮ ಹೊಲಗದ್ದೆಗಳಿಗೆ ದಿನೇ ದಿನೇ ಹೆಚ್ಚುಹೆಚ್ಚಾಗಿ ಹೂಡುವ ಸಾಮಗ್ರಿಗಳನ್ನು ತರಿಸಿಕೊಳ್ಳುತ್ತ ಹೋದಹಾಗೆ ಮಣ್ಣಿನಲ್ಲಿ ಪ್ರಾಣಿಜ ಪದಾರ್ಥ ಅಧಿಕಾಂಶದಲ್ಲಿರುವಂತೆ ನೋಡಿಕೊಳ್ಳುವುದು ಅವಶ್ಯಕ" ಎಂದು ಡಾ ಲ್ಯಾಂಬರು ಸೂಚಿಸಿದರು.

(ಹರಿಜನ)

ಕರ್ಮವೀರ

ಶ್ರೀಮುಖ್ಯಾಲುಕ್ಕ ವಿಕ್ರಮ ವರ್ಷ [illegible]
ಮಾರ್ಗಶೀರ್ಷ [illegible] ಸೋಮವಾರ

ಜಯಪುರ ಕಾಂಗ್ರೆಸ್ಸು

ಜಯಪುರದಲ್ಲಿ ಡಾ. ಪಟ್ಟಾಭಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಕಾಂಗ್ರೆಸಿನ ಮಹಾಧಿವೇಶನವು ಎಲ್ಲ ಬಗೆಯಿಂದ ಚಿರಸ್ಮರಣೀಯವಾಯಿತೆಂದು ಹೇಳಬಹುದು. ಸತತ ಹೋರಾಟದ ಪರಿಣಾಮವಾಗಿ ಕಾಂಗ್ರೆಸ್ಸು ಸ್ವಾತಂತ್ರ್ಯವನ್ನು ಪಡೆದ ನಂತರ ಕೂಡಿದ ಮೊದಲನೇ ಅಧಿವೇಶನವಿದು. ಆದಕ್ಕಾಗಿಯೆ ಎಲ್ಲೆಲ್ಲಿಯೂ ಉತ್ಸಾಹ ಕಂಡು ಬರುತ್ತಿದ್ದಿತು. ಆದರೆ ರಾಷ್ಟ್ರಪಿತನ ಕೊಲೆಯಿಂದಾದ ದುಃಖದ ಛಾಯೆಯೂ ಎಲ್ಲೆಡೆ ಪಸರಿಸದಿರಲಿಲ್ಲ, ಅಪೂರ್ವವಾದ ಈ ಅಧಿವೇಶನ ಮತ್ತು ತದಂಗಭೂತವಾಗಿ ಏರ್ಪಡಿಸಲ್ಪಟ್ಟಿದ್ದ ಸರ್ವೋದಯ ಪ್ರದರ್ಶನ ಮೊದಲಾದವುಗಳ ವಿವರವನ್ನು ಬೇರೆ ಕಡೆ ಕೊಟ್ಟಿದ್ದೇವೆ ಈ ಸಲದ ಕಾಂಗ್ರೆಸ್ಸಿನ ಪೀಠವನ್ನೇರಿದ ಡಾ. ಪಟ್ಟಾಭಿಯವರು ಹಿರಿಯ ಕಾಂಗ್ರೆಸ್ಸಿಗರು. ತ್ಯಾಗ, ನಿಷ್ಠೆ, ವಿದ್ವತ್ತು; ಅನುಭವ, ಕಾರ್ಯದಕ್ಷತೆ ಮೊದಲಾದವುಗಳಿಂದ ಲೋಕಪ್ರಿಯರಾದವರು.

ಸ್ವಾತಂತ್ರ್ಯ ಸಂಪಾದನೆಗಾಗಿ ಸ್ಥಾಪಿತವಾಗಿದ್ದ ಕಾಂಗ್ರೆಸ್ಸು ಆ ಮಹಾಧ್ಯೇಯವನ್ನು ಈಗ ಸಾಧಿಸಿದೆ. ಇನ್ನು ದೇಶದ ಆರ್ಥಿಕ, ಸಾಮಾಜಿಕ, ಔದ್ಯಮಿಕ ಉನ್ನತಿಯನ್ನು ಸಾಧಿಸುವದು ಅವಶ್ಯವಾಗಿದೆ. ಡಾ. ಪಟ್ಟಾಭಿಯವರು ಈ ವಿಷಯವಾಗಿ ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿರುವರು. ನಿಃಸ್ವಾರ್ಥಿಗಳಾಗಿ, ವಿಶ್ವ ಸರಕಾರ ಸ್ಥಾಪನೆಗಾಗಿ ನಾವು ಪ್ರಯತ್ನಿಸಬೇಕಾಗಿದೆ; ಯುದ್ಧ ಶಕ್ತಿಯ ಕಾರಣಗಳನ್ನು ಹುಡುಕಿ ಅವನ್ನು ನಿರ್ಮೂಲಗೊಳಿಸಬೇಕಾಗಿದೆ; ಶಾಂತಿಯ ಉಜ್ವಲ ಜ್ಯೋತಿಯನ್ನು ಕಿರಿಯರಿಗೆ ಕೊಟ್ಟು ಅವರನ್ನು ಹಿರಿಯರನ್ನಾಗಿ ಮಾಡಬೇಕಾಗಿದೆ, ಎಂದು ಮುಂತಾಗಿ ಹೇಳಿರುವರು. ಹಿಂದುಸ್ತಾನ ಸರಕಾರದ ವಿದೇಶ ಧೋರಣವೆಂತಿರಬೇಕೆಂಬುದು ಅತ್ಯಂತ ಮಹತ್ವದ್ದಾಗಿದೆ. ನಮ್ಮ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಹಲವಾರು ಸಲ ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ. ಪಟ್ಟಾಭಿಯವರೂ ಸೂತ್ರರೂಪವಾಗಿ ಈ ಬಗ್ಗೆ ಹೇಳಿರುವರು. ಜಗತ್ತಿನಲ್ಲಿ ಇಂದು ಕಾಣುತ್ತಿರುವ ಎರಡು ಬಣಗಳಲ್ಲಿ ಯಾವ ಬಣಕ್ಕೂ ಸೇರಿಕೊಳ್ಳದೆ ಆಯಾ ವಿಷಯಗಳ ನ್ಯಾಯಾನ್ಯಾಯವನ್ನು ಆಲೋಚಿಸಿ ತನ್ನ ಧೋರಣವನ್ನು ನಿರ್ಧರಿಸಿಕೊಳ್ಳಬೇಕೆಂಬುದು ನಮ್ಮ ಇಂದಿನ ಸರಕಾರದ ನಿರ್ಧಾರವಾಗಿದೆ. ರಾಷ್ಟ್ರಾಧ್ಯಕ್ಷರು ಭಾಷಾನ್ವಯ ಪ್ರಾಂತರಚನೆಯ ಬಗ್ಗೆಯೂ ತಮ್ಮ ನಿಃಸಂದಿಗ್ಧ ಅಭಿಪ್ರಾಯವನ್ನು ವ್ಯಕ್ತಪಡಿಸಿ ಭಾಷಾನ್ವಯ ಪ್ರಾಂತರಚನೆ ಕೂಡಲೆ ಆಗಬೇಕೆಂದು ಪ್ರತಿಪಾದಿಸಿದರು. ಉಪರಾಷ್ಟ್ರಗಳ ಆಂಜಿಕೆಯನ್ನು ಹೊಡೆದುಹಾಕಿ ಅವೆಲ್ಲ ರಾಷ್ಟ್ರೀಯತೆಗೆ ಪೋಷಕವೇ ಆಗುವವೆಂದು ಸಾರಿದರು. ಸಂಸ್ಥಾನ ಸಮೀಕರಣದ ಸಂಬಂಧದಲ್ಲಿ ಸರಕಾರವನ್ನು ಅವರು ಮನಸಾರೆ ಹೊಗಳಿ ಅಖಂಡ ಹಿಂದುಸ್ತಾನದ ಐಕ್ಯಕ್ಕೆ ಇದು ಅತ್ಯಂತ ಸಹಾಯಕವಾಗಿದೆಯೆಂದೂ ಅಭಿಪ್ರಾಯಪಟ್ಟರು. ಇದಕ್ಕೆಲ್ಲ ಸರದಾರ ವಲ್ಲಭಭಾಯಿಯವರು ಅಭಿನಂದನೀಯರಾಗಿರುವರೆಂದು ಬೇರೆ ಹೇಳಬೇಕಿಲ್ಲ.

ಕಾಂಗ್ರೆಸ್ಸು ಸ್ವೀಕರಿಸಿದ ಗೊತ್ತುವಳಿಗಳು ಸದ್ಯದ ಪರಿಸ್ಥಿತಿಗೆ ಅತ್ಯಂತ ಸಮಂಜಸವಾಗಿವೆ. ಕಾಂಗ್ರೆಸ್ ಕಾರ್ಯಕರ್ತರು ಇಟ್ಟುಕೊಳ್ಳಬೇಕಾದ ಸಾರ್ವಜನಿಕ ಜೀವನದ ನೈತಿಕ ಮಟ್ಟವನ್ನು ಕುರಿತು ಮಾಡಲಾದ ಗೊತ್ತುವಳಿ ಮಹತ್ವದ್ದಾಗಿದೆ. ಅಧಿಕಾರ ಸ್ವೀಕಾರದ ನಂತರ ಕಾಂಗ್ರೆಸ ಕಾರ್ಯಕರ್ತರಲ್ಲಿ ಉಂಟಾದ ಅಧಿಕಾರಲಾಲಸೆ, ಹಣ ಗಳಿಕೆಯ ಲೋಭ ಮುಂತಾದವುಗಳು ಪ್ರಗತಿಪಥದಲ್ಲಿ ನಡೆಯಬೇಕಾದ ರಾಷ್ಟ್ರಕ್ಕೆ ಒಗ್ಗಲಾರವು. ಈ ದೃಷ್ಟಿಯಿಂದಲೆ ಕಾಂಗ್ರೆಸ್ಸು ಕಾರ್ಯಕರ್ತರಿಗೆ ನೀತಿಯ ಮಟ್ಟವನ್ನು ಏರಿಸಲು ಕೇಳಿಕೊಂಡದ್ದು ಸಮಂಜಸವಾಗಿದೆ.

ಭಾಷಾನ್ವಯ ಪ್ರಾಂತ ರಚನೆಯ ಸಂಬಂಧದಲ್ಲಿ ವಿಚಾರ ಮಾಡಲು ಕಾಂಗ್ರೆಸ್ಸು ಮೂವರ ಒಂದು ಸಮಿತಿಯನ್ನು ನೇಮಿಸಿದ್ದು ಮಹತ್ವದ್ದಾಗಿದೆ. ಈ ಸಲ ಏರ್ಪಡಿಸಲಾಗಿದ್ದ ಸರ್ವೋದಯ ಪ್ರದರ್ಶನವು ಈ ವರೆಗಿನ ಪ್ರದರ್ಶನಗಳಿಗಿಂತ ತೀರ ಅಪೂರ್ವವಾಗಿತ್ತೆಂದು ಹೇಳಬಹುದು. ಸರ್ವೋದಯ ಸಾಧಿಸಬೇಕೆಂದು ಪ್ರಯತ್ನಿಸುವವರಿಗೆ ಅದು ಒಳ್ಳೆ ಸಹಾಯಕವಾಗಿತ್ತು. ಮಹಾತ್ಮರ ಆದರ್ಶ ತತ್ವಗಳ ಬೆಳಕಿನಲ್ಲಿಯೇ ಕಾಂಗ್ರೆಸ್ಸು ಮುನ್ನಡೆದು ರಾಷ್ಟ್ರವನ್ನು ಪ್ರಗತಿಪಥದಲ್ಲಿ ಒಯ್ಯಲೆಂದು ಹಾರಯಿಸುತ್ತೇವೆ

ಕಾಂಗ್ರೆಸ್ ಮಂಟಪ



ಜಯಪುರದ "ಗಾಂಧೀನಗರ" ಕಾಂಗ್ರೆಸ್ ಅಧಿವೇಶನದ ಮಂಟಪ.

—ಚಿತ್ರ ಶ್ರೀ ನಾರಾಯಣರಾವ ಕುಲಕರ್ಣಿ.

ವಾರದ ಸಿಂಹಾವಲೋಕನ

ದಿವಂಗತ ಕಲ್ಲಾಪುರ ದೇಸಾಯರು

ಕಾಂಗ್ರೆಸ್ಸಿನ ಹಿರಿಯ ಕಾರ್ಯಕರ್ತರಲ್ಲೊಬ್ಬರಾಗಿದ್ದ ಶ್ರೀ. ನರಸಿಂಗರಾವ ದೇಸಾಯಿ ಕಲ್ಲಾಪುರ ಇವರು ಧಾರವಾಡದಲ್ಲಿ ೧೯ ನೇ ತಾರೀಕು ಮಧ್ಯಾಹ್ನ ಒಮ್ಮೆಲೆ ಹೃದಯ ವಿಕಾರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವಾಗುತ್ತದೆ. ದಿವಂಗತ ನರಸಿಂಗರಾಯರು ಪ್ರಸಿದ್ಧ ವತನದಾರ ಮನೆತನಕ್ಕೆ ಸೇರಿದವರಾಗಿದ್ದರೂ ಯಾವದೇ ಬಗೆಯ ಅಂಜಿಕೆ ಅಳುಕುಗಳಿಲ್ಲದೆ ಪರಕೀಯ ಆಡಳಿತವನ್ನು ಹೋಗಲಾಡಿಸಲು ಬದ್ಧಕಂಕಣವಾದ ಕಾಂಗ್ರೆಸ್ಸಿನಲ್ಲಿ ಸೇರಿ ಕಳೆದ ಮೂವತ್ತು ವರುಷಗಳಿಂದ ಒಂದೇ ಸಮನೆ ಕಾರ್ಯ ಮಾಡುತ್ತ ಬಂದಿದ್ದರು. ಅವರ ನಿರ್ಭಯ ವೃತ್ತಿಗಾಗಿ ಮತ್ತು ನಿಷ್ಠ ರಾಷ್ಟ್ರಸೇವೆಗಾಗಿ ವತನವನ್ನು ಕೂಡ ಕಳೆದುಕೊಳ್ಳುವ ಪ್ರಸಂಗವು ಅವರಿಗೆ ಬಂದಿದ್ದಿತು. ಅದನ್ನು ಕೂಡ ಅವರು ಲೆಕ್ಕಿಸದೆ ರಾಷ್ಟ್ರಕಾರ್ಯವನ್ನು ಕೊನೆಯ ವರೆಗೆ ಸಾಗಿಸಿದರು. ಸರಳ ಸ್ವಭಾವ, ಸಚ್ಚಾರಿತ್ರ್ಯ, ಶೀಲ, ಔದಾರ್ಯ, ತ್ಯಾಗ ನಿಷ್ಠ ಸೇವೆ ಮೊದಲಾದವುಗಳಿಂದ ಅವರು ಒಳ್ಳೆ ಲೋಕಪ್ರಿಯರಾಗಿದ್ದರು. ಸದ್ಯದಲ್ಲಿ ವತನದಾರ ಇನಾಮುದಾರರ ಮೇಲೆ ಆಗುತ್ತಿರುವ ಗದಾ ಪ್ರಹಾರವನ್ನು ತಡೆಯಲು ಅವರು ವತನದಾರ ಇನಾಮುದಾರ ಸಂಘದ ಮುಖಾಂತರ ಹೋರಾಟ ನಡೆಸಿದ್ದರು. ಮುಂಬಯಿ ವಿಧಿಮಂಡಲದ ಸದಸ್ಯರಾಗಿದ್ದರು. ಅನೇಕ ಲೋಕೋಪಯೋಗಿ ಕಾರ್ಯಗಳಿಗಾಗಿ ಎಲ್ಲ ಬಗೆಯಿಂದ ಸಹಾಯ ಸಲ್ಲಿಸಿದ್ದುಂಟು. ಇಂಥ ಹಿರಿಯ ಕಾರ್ಯಕರ್ತರು ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಅಲ್ಪಾವಧಿಯಲ್ಲಿಯೇ ಸ್ವರ್ಗಸ್ಥರಾದುದು ತುಂಬಿ ಬರಲಾರದ ಹಾನಿಯು. ಇವರ ಮರಣದಿಂದ ಕರ್ನಾಟಕವು ಒಬ್ಬ ಪ್ರಮುಖ ಕಾರ್ಯಕರ್ತರಿಗೆ ಎರವಾಗಬೇಕಾಯಿತು. ಮರಣಕಾಲಕ್ಕೆ ಅವರಿಗೆ ೬೩ ವರುಷಗಳಾಗಿದ್ದರೂ ತರುಣರಂತೆ ಇವರು ಯಾವಾಗಲೂ ಕಾರ್ಯನಿರತರಾಗಿದ್ದರು. ಪರಮಾತ್ಮನು ಮೃತರಿಗೆ ಸದ್ಗತಿಯನ್ನೀಯಲಿ. ದಿವಂಗತ ನರಸಿಂಗರಾಯರು ಕೈಕೊಂಡ ಕಾರ್ಯವನ್ನು ಮುಂದೆ ಸಾಗಿಸಲು ಉತ್ಸಾಹೀ ಕಾರ್ಯಕರ್ತರು ಮುಂದೆ ಬರುವಂತೆ ಅನುಗ್ರಹಿಸಲಿ.

ಪೂರ್ವ ಪಾಕಿಸ್ತಾನದ ನಿರಾಶ್ರಿತರು

ಪೂರ್ವ ಪಾಕಿಸ್ತಾನದಲ್ಲಿಯ ಹಿಂದುಗಳ ಪರಿಸ್ಥಿತಿಯು ಅತ್ಯಂತ ಕರುಣಾಜನಕವಾಗಿದೆ. ಈ ಪ್ರಶ್ನೆಯ ಸಂಬಂಧದಲ್ಲಿ ಅಂತರ್ ಮಹಾಸಭಾ ಪರಿಷತ್ತಿನಲ್ಲಿ ಚರ್ಚೆ ನಡೆದಿದೆ. ಜಯಪುರ ಕಾಂಗ್ರೆಸ್ಸಿನಲ್ಲಿಯೂ ಚರ್ಚೆ ನಡೆದು ಗೊತ್ತುವಳಿ ಸ್ವೀಕೃತವಾಗಿದೆ. ಕಾಂಗ್ರೆಸ್ಸಿನ ವಿಷಯ ನಿಯಾಮಕ ಸಮಿತಿಯಲ್ಲಿ ಸರದಾರ ವಲ್ಲಭಭಾಯಿಯವರು ಈ ಬಗ್ಗೆ ಮಾತಾಡುತ್ತ ಈ ಪ್ರಶ್ನೆ ಬಗೆಹರಿಸುವಲ್ಲಿ ಸಹಾಯ ಮಾಡುವದು ಪಾಕಿಸ್ತಾನ ಸರಕಾರದ ಕರ್ತವ್ಯವಾಗಿದೆಯೆಂದು ಸ್ಪಷ್ಟವಾಗಿ ಹೇಳಿರುವರು. ಪಂಜಾಬದಲ್ಲಿಯ ಜನ ಬಲಿಷ್ಠರಿದ್ದುದರಿಂದ ಅವರು ಹೇಗಾದರೂ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವರು. ಆದರೆ ಪೂರ್ವ ಬಂಗಾಲದಲ್ಲಿಯ ಹಿಂದುಗಳು ಅಷ್ಟೊಂದು ಬಲಿಷ್ಠರಿಲ್ಲದ್ದರಿಂದ ಪರಿಸ್ಥಿತಿಯನ್ನೆದುರಿಸಲಾರದೆ ಹಿಂದುಸ್ತಾನಕ್ಕೆ ಗುಳೇ ಬರುತ್ತಿರುವರು. ಇವರ ಭಾರವನ್ನು ಹಿಂದುಸ್ತಾನವು ಇನ್ನು ಮುಂದೆ ತಡೆಯದು. ಆದುದರಿಂದ ಈ ಹಿಂದುಗಳೆಲ್ಲ ಮರಳಿ ಪಾಕಿಸ್ತಾನಕ್ಕೆ ಬರುವಂತೆ ಮತ್ತು ನಿರ್ಭಯತೆಯಿಂದ ಅಲ್ಲಿ ನೆಲಸುವಂತೆ ಅನುಕೂಲತೆಯನ್ನು ಕಲ್ಪಿಸಿ ಕೊಡುವದು ಪಾಕಿಸ್ತಾನ ಸರಕಾರದ ಕರ್ತವ್ಯವಾಗಿದೆ. ಕೋಟ್ಯವಧಿ ನಿರಾಶ್ರಿತರು ಹೀಗೆ ಹಿಂದುಸ್ತಾನದಲ್ಲಿ ನೆಲಸಲು ಬಂದರೆ ಅವರ ವ್ಯವಸ್ಥೆಯನ್ನು ಹಿಂದುಸ್ತಾನವು ಎಂತು ಮಾಡಬಲ್ಲದು ? ಅಂತೆಯೇ ಈ ಪ್ರಶ್ನೆಯನ್ನು ಬಿಡಿಸಲು ಉಪಾಯ ಯೋಜಿಸಬೇಕೆಂದು ಸರದಾರರು ಕೇಳಿಕೊಂಡಿದ್ದಾರೆ. ಮೇಲೆ ಹೇಳಿದಂತೆ ಪಾಕಿಸ್ತಾನದಲ್ಲಿಯ ಹಿಂದುಗಳ ನೆಲಸುವಿಕೆಗೆ, ನಿರ್ಭಯ ಜೀವನ ನಡೆಸುವದಕ್ಕೆ ಯೋಗ್ಯ ಆಶ್ವಾಸನ ಕೊಡುವದು ಶಕ್ಯವಿಲ್ಲದಿದ್ದರೆ ಅವರಿಗಾಗಿ ಭೂಮಿಯನ್ನಾದರೂ ಕೊಡಬೇಕೆಂದು ಸರದಾರರು ಉಕ್ತ ಭಾಷಣದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಈ ಸಮಸ್ಯೆ ಪರಿಹಾರಕ್ಕೆ ಬೇರೆ ಯಾವುದಾದರೂ ಉಪಾಯವಿದ್ದರೆ ಅದನ್ನು ತಮಗೆ ತಿಳಿಸಬೇಕೆಂದೂ ಸರದಾರರು ಕೇಳಿಕೊಂಡಿರುವರು. ಹಿಂದೀ ನಿರಾಶ್ರಿತರ ಸಮಸ್ಯೆಯನ್ನು ಯಶಸ್ವಿಯಾಗಿ ಎದುರಿಸಬೇಕೆಂಬುದಾಗಿ ಗೊತ್ತುವಳಿಯೊಂದು ಸ್ವೀಕೃತವಾಗಿದೆ. ಅಂತೂ ಎರಡೂ ಸರಕಾರಗಳು ನಿರಾಶ್ರಿತರ ಸಮಸ್ಯೆಯನ್ನು ಯಶಸ್ವಿಯಾಗಿ ಬಿಡಿಸಲಿ.

ಕಾಲೋಚಿತ ಹಿತೋಕ್ತಿ

ಹಿಂದುಸ್ತಾನ ಸರಕಾರದ ಉಪಮುಖ್ಯ ಮಂತ್ರಿಗಳೂ ಹಿರಿಯ ಮುತ್ಸದ್ದಿಗಳೂ ಆಗಿರುವ ಸರದಾರ ವಲ್ಲಭಭಾಯಿ ಪಟೇಲರು ಕಾಂಗ್ರೆಸ ವಿಷಯನಿಯಾಮಕ ಸಮಿತಿಯಲ್ಲಿ ಭಾಷಣ ಮಾಡುತ್ತ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಕಾಂಗ್ರೆಸ್ಸಿನಲ್ಲಿ ಸೇರಿ ದೇಶ ಹಿತವನ್ನು ಸಾಧಿಸಬೇಕೆಂದು ಕೇಳಿಕೊಂಡಿದ್ದಾರೆ. ಸ್ವತಂತ್ರ ಹಿಂದುಸ್ತಾನದಲ್ಲಿ ಉತ್ಪಾದನೆ ಹೆಚ್ಚದೆ ಹೊರಗಿನಿಂದಲೆ ಆಹಾರ ಪದಾರ್ಥಗಳನ್ನು ತರಿಸಿಕೊಂಡದ್ದಾದರೆ ಕೆಲವರುಷಗಳಲ್ಲಿಯೇ ಹಿಂದುಸ್ತಾನವು ದಿವಾಳಿ ತೆಗೆಯಬೇಕಾಗುವದು. ಇದೆಲ್ಲವನ್ನು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಅಣಿಗೊಳಿಸಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದಂಥ ಸಂಸ್ಥೆಗಳು ದೇಶಹಿತ ಸಾಧಿಸುವ ಭ್ರಮೆಗೆ ಬಲಿಬಿದ್ದು ಕಾಯದೆಗಳನ್ನು ಮುರಿಯಹತ್ತಿದರೆ ರಾಷ್ಟ್ರಕ್ಕೆ ಅಹಿತವನ್ನೇ ಮಾಡಿದಂತಾಗುವದು. ಗುಪ್ತವಾಗಿ ಚಟುವಟಿಕೆ ನಡೆಸುವಂಥ ಇಂಥ ಸಂಘಗಳನ್ನು ನಿರ್ಮೂಲಗೊಳಿಸದೆ ಬಿಡಲಾರೆವೆಂದೂ ಸರದಾರರು ಎಚ್ಚರಿಕೆಯ ಮಾತು ಹೇಳಿರುವರು. ಖಾಸಗಿ ಸೈನ್ಯವನ್ನಿಟ್ಟುಕೊಂಡು ಗುಪ್ತ ಚಟುವಟಿಕೆ ನಡೆಸುತ್ತಿರುವ ಇಂಥ ಸಂಘಗಳಿಗೆ ಅಪ್ಪಣೆ ಎಂತು ದೊರೆಯಬೇಕು ? ಅದನ್ನು ನಿರ್ಮೂಲ ಮಾಡಲೇಬೇಕಾಗುವದು ಹಿಂದೂ ಧರ್ಮದ ಸಂರಕ್ಷಕರೆಂದು ಹೇಳಿಕೊಳ್ಳುವ ಈ ಸಂಘದವರ ಚಟುವಟಿಕೆಗಳು ಆ ಧರ್ಮದ ಇಷ್ಟೇ ಅಲ್ಲ ಇಡೀ ರಾಷ್ಟ್ರದ ಸಂರಕ್ಷಣೆಗೇ ಮುಳುವಾಗುವವೆಂಬಲ್ಲಿ ಸಂದೇಹವಿಲ್ಲ. ಇದೆಲ್ಲವನ್ನು ಮನಗಂಡು ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಇನ್ನು ಮುಂದಾದರೂ ತಮ್ಮ ಚಟುವಟಿಕೆಗಳನ್ನು ನಿಲ್ಲಿಸಿ ಸರದಾರ ಪಟೇಲರು ಕೇಳಿಕೊಂಡಂತೆ ಕಾಂಗ್ರೆಸ್ಸಿನಲ್ಲಿ ಸೇರಿ ರಾಷ್ಟ್ರಹಿತವನ್ನು ಸಾಧಿಸಬೇಕು. ಈ ವರೆಗೆ ನಡೆದ ಸಂಘದ ಸತ್ಯಾಗ್ರಹವನ್ನು ವಿಮರ್ಶಿಸಿದ್ದಾದರೆ ಜನತೆಯ ಬೆಂಬಲ ಸಂಘಕ್ಕೆ ಸಿಕ್ಕಿಲ್ಲೆಂಬುವದು ಸ್ಪಷ್ಟವಾಗುವದು ಜನತೆಯ ಸಹಾಯಬಲವಿಲ್ಲದ ಯಾವ ಚಟುವಟಿಕೆಗಳೂ ಯಶಸ್ವಿಯಾಗವು. ಇದನ್ನು ತಿಳಿದುಕೊಂಡಾದರೂ ರಾ- ಸ್ವ. ಸಂಘದವರು ಸನ್ಮಾರ್ಗಕ್ಕೆ ಬರಲಿ.

ಸಮಾಜ ಸೇವಕರು

ಮದ್ರಾಸಿನಲ್ಲಿ ಕಳೆದ ವಾರ್ತೆ ಹಿಂದುಸ್ತಾನ ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ಅಮೃತ ಕುವರ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಅಖಿಲ ಭಾರತ ಸಾಮಾಜಿಕ ಕಾರ್ಯಕರ್ತರ ಪರಿಷತ್ತು ಕೆಲ ಮಹತ್ವದ ಗೊತ್ತುವಳಿಗಳನ್ನು ಸ್ವೀಕರಿಸಿದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಪ್ರತಿಯೊಬ್ಬ ಭಾರತೀಯ ತರುಣನು ಸಾಮಾಜಿಕ ಕಾರ್ಯಕರ್ತನೆಂದು ತಿಳಿದು ಸಮಾಜದ ಸರ್ವವಿಧ ಕಾರ್ಯವನ್ನು ಕೈಕೊಳ್ಳಲಣಿಯಾಗಬೇಕಾದುದು ಕರ್ತವ್ಯವಾಗಿದೆ. ಶ್ರೀಮತಿ ಅಮೃತ ಕುವರರು ಈ ಮಾತನ್ನು ಒತ್ತಿ ಹೇಳಿದ್ದಾರೆ. ಹಕ್ಕುಗಳಿಗಾಗಿ ಹೊಡೆದಾಡುವವರು ತಮ್ಮ ಕರ್ತವ್ಯದ ಅರಿವನ್ನೂ ಮಾಡಿಕೊಂಡು ಅದನ್ನು ಆಸ್ಥೆಯಿಂದ ಮಾಡುತ್ತ ಹೋದರೆ ಇಂದು ಸಮಾಜದಲ್ಲಿ ಕಾಣಬರುವ ದೋಷಗಳು ಮಾಯವಾಗುವವೆಂಬಲ್ಲಿ ಸಂದೇಹವಿಲ್ಲ. ದೂರದರ್ಶಿತ್ವ, ಧೈರ್ಯ ಮತ್ತು ಶ್ರದ್ಧೆ ಇವು ಸಾಮಾಜಿಕ ಕಾರ್ಯಕರ್ತನಲ್ಲಿರಬೇಕೆಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದು ಯಥೋಚಿತವಾಗಿದೆ. ಪ್ರತಿಯೊಬ್ಬ ಸ್ತ್ರೀ ಪುರುಷರು ನಾಗರಿಕ ಧರ್ಮವನ್ನು ತಿಳಿದುಕೊಂಡು ತಮ್ಮ ಆಚರಣೆಯಲ್ಲಿ ಅದನ್ನು ಅರಗಿಸಿಕೊಳ್ಳುವಂತೆ ಮಾಡುವದು ಅವಶ್ಯವಾಗಿದೆ. ಹಿಂದುಸ್ತಾನ ಸರಕಾರವು ಮತ್ತು ಆಯಾ ಪ್ರಾಂತಿಕ ಸರಕಾರಗಳು ಸಮಾಜ ಸೇವಕ ಚಟುವಟಿಕೆಗಳಿಗೆ ಸಹಾಯ ಮಾಡಬೇಕೆಂದು ಕೋರಲಾಗಿದೆ. ಕೇವಲ ಆಹಾರ ಧಾನ್ಯದ ಬೆಲೆ ನಿಯಂತ್ರಿಸಿ ಒಕ್ಕಲತನಕ್ಕೆ ಮತ್ತು ರೈತನಿಗೆ ಅವಶ್ಯವಿರುವ ಪದಾರ್ಥಗಳ ಬೆಲೆ ನಿಯಂತ್ರಿಸದ್ದರಿಂದ ಗ್ರಾಮಕಲ್ಯಾಣವನ್ನೇನೂ ಸಾಧಿಸಿದಂತಾಗುವದಿಲ್ಲೆಂದು ಮತ್ತೊಂದು ಗೊತ್ತುವಳಿಯಲ್ಲಿ ಹೇಳಲಾಗಿದೆ. ಗ್ರಾಮ ಪುನರ್ರಚನೆಯ ಕಾರ್ಯಕ್ಕಾಗಿ ಪ್ರೌಢ ಶಿಕ್ಷಣದ ಉಪಯೋಗಮಾಡಿಕೊಳ್ಳಬೇಕೆಂದೂ ಕೇಳಲಾಗಿದೆ. ದೇಶದ ಸಾಂಸ್ಕೃತಿಕ ಸುಧಾರಣೆಗೆ ಅವಶ್ಯವಾದ ಇನ್ನಿತರ ಗೊತ್ತುವಳಿಗಳನ್ನೂ ಪರಿಷತ್ತು ಸ್ವೀಕರಿಸಿದೆ. ಸರಕಾರದವರು ಇತ್ತ ಗಮನಿಸಲಿ.

ಭಾರತಕ್ಕೊಂದು ರಾಷ್ಟ್ರಭಾಷೆ

ಕೆಲವು ಸಂಶಯಗಳಿಗೆ ಸಮಾಧಾನ

ಲೇಖಕರು : ಡಾ. ರಾಜೇಂದ್ರ ಪ್ರಸಾದ

(ಡಾ. ರಾಜೇಂದ್ರಪ್ರಸಾದರು ರಾಷ್ಟ್ರ ಭಾಷೆಯ ಬಗ್ಗೆ ಬರೆದೆರಡು ಲೇಖಾಂಕಗಳು "ಕರ್ಮವೀರ" ದ ಡಿಸೆಂಬರ ೧೩ ಮತ್ತು ೨೦ ರ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈ ಲೇಖದಲ್ಲಿ ಅವರು ಕೆಲವು ಸಂಶಯಗಳಿಗೆ ಸರಿಯಾದ ಸಮಾಧಾನವನ್ನು ಕೊಟ್ಟಿದ್ದಾರೆ.)

ಶ್ರೀ ಕಿ. ಘ. ಮಶ್ರುವಾಲಾರು "ಹರಿಜನ"ದಲ್ಲಿ ಪ್ರಸಿದ್ಧವಾದ ನನ್ನ ಲೇಖಗಳಿಂದ ಉದ್ಭವಿಸುವ ಎರಡು ಪ್ರಶ್ನೆಗಳಿಗೆ ಸಮಾಧಾನ ಕೊಡಬೇಕೆಂದು ಕೇಳಿದ್ದಾರೆ.

೧ ಹೈಕೋರ್ಟು, ವಿಶ್ವವಿದ್ಯಾಲಯಗಳು ಇತ್ಯಾದಿಗಳ ಭಾಷೆ

ಮೊದಲನೆ ಪ್ರಶ್ನೆಯ ಬಗ್ಗೆ ಅವರು ಬರೆಯುತ್ತಾರೆ :

"ಹೈಕೋರ್ಟುಗಳ ಭಾಷೆ ಮತ್ತು ವಿಶ್ವವಿದ್ಯಾಲಯಗಳಲ್ಲಿನ ಬೋಧಭಾಷೆ ಇವುಗಳ ಸಂಬಂಧದಲ್ಲಿ ನೀವು ಹೇಳಿರುವ ಮಾತುಗಳ ಮೇಲಿಂದ ಅವೆರಡೂ ಸಂದರ್ಭಗಳಲ್ಲಿ ಭಾರತದ ಸಾಮಾನ್ಯ (ರಾಷ್ಟ್ರ) ಭಾಷೆಯೇ ಉಪಯೋಗಿಸಲ್ಪಡಬೇಕೆಂದು ನಿಮ್ಮ ಅಭಿಪ್ರಾಯವಿರುವದಾಗಿ ನಾನು ಗ್ರಹಿಸಬಹುದೊ ? "

ಮುಂದೆ ಪುನರ್ವಿಚಾರಿಸುವಾಗ ಅಭಿಪ್ರಾಯ ಪರಿವರ್ತನೆಯಾಗಬಹುದಾದರೂ ಸದ್ಯಕ್ಕಂತೂ ನನ್ನ ಭಾವನೆ ಹೀಗಿದೆ:

(೧) ಹೈಕೋರ್ಟುಗಳಲ್ಲಾದ ತೀರ್ಪುಗಳಲ್ಲಿ ಅಪೀಲಾಗಿ ವರಿಷ್ಠ ನ್ಯಾಯಾಲಯಕ್ಕೆ ಹೋಗುವ ಅಥವಾ ಕಾಯದೆಯ ಪತ್ರಿಕೆಗಳಲ್ಲಿ ಪ್ರಕಟವಾಗಲು ಅರ್ಹವಾದ ತೀರ್ಪುಗಳ ಸಂಖ್ಯೆ ಸಾಮಾನ್ಯವಾಗಿ ತೀರ ಕಡಿಮೆ. ಅಪೀಲುಗಳ ಸಂದರ್ಭದಲ್ಲಿ ಹೈಕೋರ್ಟಿನ ತೀರ್ಪಿನಾದಿಯಾಗಿ ಅವಶ್ಯವಾದ ಎಲ್ಲ ಕಾಗದ ಪತ್ರಗಳನ್ನು ರಾಷ್ಟ್ರಭಾಷೆಗೆ ಭಾಷಾಂತರಿಸುವದು ಅಷ್ಟು ಕಠಿನವಾದ ಮಾತಲ್ಲ. ಈಗಿರುವ ಸ್ಥಿತಿಯಲ್ಲಾದರೂ ಕೆಳ ನ್ಯಾಯಸ್ಥಾನಗಳಲ್ಲಿ ಹಾಜರು ಮಾಡಲ್ಪಟ್ಟ ಎಷ್ಟೋ ಮೂಲ ಕಾಗದ ಪತ್ರ ಮತ್ತು ದಾಖಲೆಗಳನ್ನು ಭಾಷಾಂತರಿಸಲೇ ಬೇಕಾಗುತ್ತದೆ. ಇವುಗಳನ್ನು ಇಂಗ್ಲೀಷಿಗಿಂತ ರಾಷ್ಟ್ರಭಾಷೆಗೆ ಭಾಷಾಂತರಿಸುವದು ಎಷ್ಟೋ ಸುಲಭ.

ಕಾಯದೆಯ ಪತ್ರಿಕೆಗಳಲ್ಲಿಯೂ, ನನ್ನನ್ನು ಕೇಳಿದರೆ, ಉಲ್ಲೇಖಾರ್ಹವಾದ ತೀರ್ಪುಗಳನ್ನು ರಾಷ್ಟ್ರಭಾಷೆಗೆ ಅಧಿಕೃತವಾಗಿ ಭಾಷಾಂತರ ಮಾಡಿ ಪ್ರಕಟಿಸಬೇಕು. ದಿನದಿನವೂ ಕೊಡಲ್ಪಟ್ಟ ಅನೇಕ ತೀರ್ಪುಗಳಲ್ಲಿ ವರದಿಯಾಗತಕ್ಕವು ತೀರವಿರಳ. ಭಾಷಾಂತರದಲ್ಲಾಗಬಹುದಾದ ತಪ್ಪುಗಳನ್ನು ದೂರೀಕರಿಸಲು ಮೂಲ ತೀರ್ಪುಗಳನ್ನು ವರದಿ ಮಾಡಬಹುದು, ಇಲ್ಲವೆ ಪ್ರಾಂತ ಭಾಷೆಯಲ್ಲೊಂದು ರಾಷ್ಟ್ರ ಭಾಷೆಯಲ್ಲೊಂದು ಹೀಗೆ ಎರಡು ಶ್ರೇಣಿಗಳಾಗಿ ಅವನ್ನು ಪ್ರಕಟಿಸಬಹುದು.

(೨) ಆದರೆ ಇದರಿಂದ ಹೈಕೋರ್ಟುಗಳಲ್ಲಿ ಪ್ರಾಂತ ಭಾಷೆಗಳಿಗೆ ಮಾತ್ರ ವ್ಯಾಪ್ತಿಯಿರಬೇಕೆಂದು ತಾತ್ಪರ್ಯವಲ್ಲ. ಹೈಕೋರ್ಟುಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಪ್ರಾಂತಿಕ ಭಾಷೆ ಮತ್ತು ರಾಷ್ಟ್ರಭಾಷೆ ಇವೆರಡಕ್ಕೂ ಸಮಾನ ವ್ಯಾಪ್ತಿಯಿರಬೇಕು. ವಿಶ್ವವಿದ್ಯಾಲಯಗಳಲ್ಲಿರುವ ವಿದ್ಯಾರ್ಥಿಗಳೂ ಆಚಾರ್ಯರೂ ನ್ಯಾಯಸ್ಥಾನಗಳಲ್ಲಿರುವ ವಕೀಲರೂ ನ್ಯಾಯಾಧೀಶರೂ ಆ ಪ್ರಾಂತಿಕ ಭಾಷೆಯನ್ನಾಡುವಂಥವರಾಗಿದ್ದರೆ ಅವನ್ನು ಉಪಯೋಗಿಸಲು ಅವರಿಗೆ ಆತಂಕವಿರಕೂಡದು. ಆದರೆ ಪರಪ್ರಾಂತಗಳಿಂದ ಬಂದವರಿಗೆ, ಅವರು ಪ್ರಾಂತಿಕ ಭಾಷೆಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಅಪೇಕ್ಷಿಸಲ್ಪಟ್ಟಿದ್ದರೂ, ರಾಷ್ಟ್ರಭಾಷೆಯಲ್ಲಿ ತಮ್ಮ ವಿಚಾರಗಳನ್ನು ಪ್ರಕಟಗೊಳಿಸುವ ಸ್ವಾತಂತ್ರ್ಯವಿರಬೇಕು. ಪ್ರಾಂತದಲ್ಲಿರುವ ವಿದ್ಯಾರ್ಥಿಗಳೂ ಇತರರೂ ರಾಷ್ಟ್ರಭಾಷೆಯಲ್ಲಿ ಪರ್ಯಾಪ್ತ ಜ್ಞಾನವನ್ನು ಪಡೆದಿರಬೇಕೆಂದು (ಈಗ ಅವರಿಗಿರುವ ಇಂಗ್ಲೀಷ್ ಜ್ಞಾನಕ್ಕಿಂತಲೂ ಹೆಚ್ಚು) ನಿರೀಕ್ಷಿಸಲ್ಪಟ್ಟಿರುವದರಿಂದ ಅದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸ್ವಲ್ಪವೂ ಕಠಿನವಾಗಲಾರದು. ಇದರಿಂದ ವಿಶ್ವವಿದ್ಯಾಲಯಗಳಿಗೂ ನ್ಯಾಯಸ್ಥಾನಗಳಿಗೂ ಇತರ ಪ್ರಾಂತಗಳಿಂದಲೂ ಸಮರ್ಥರನ್ನು ತರಿಸಿ ಉಪಯೋಗಿಸಿಕೊಳ್ಳಲವಕಾಶ ದೊರೆಯುವದು. ಅಖಿಲ ಭಾರತ ವಿದ್ಯಾಸಂಸ್ಥೆಗಳು ಯಾವ ಪ್ರಾಂತದಲ್ಲೇ ಇರಲಿ, ಸಹಜವಾಗಿ ರಾಷ್ಟ್ರ ಭಾಷೆಯನ್ನೇ ಉಪಯೋಗಿಸಬೇಕು. ಪ್ರಾಂತ ಭಾಷೆಗಳೂ ರಾಷ್ಟ್ರಭಾಷೆಯೂ ಸಮಸಮಾನವಾಗಿ ಉತ್ಕರ್ಷಗೊಳ್ಳುವವೊ ಅಥವಾ ಕೆಲ ಭಾಗಗಳಲ್ಲಿ ಮೊದಲನೆಯದು ಎರಡನೆಯದನ್ನು ಮೀರಿ ಮತ್ತು ಇನ್ನು ಕೆಲವೆಡೆಗಳಲ್ಲಿ ಎರಡನೆಯದು ಮೊದಲನೆಯದನ್ನು ಮೀರಿ ವರ್ಧಿಷ್ಣುವಾಗುವದೊ ಎಂಬದನ್ನು ಕಾಲವೇ ನಿರ್ಣಯಿಸಬಲ್ಲದು. ಏನಾದರೂ ರಾಷ್ಟ್ರಭಾಷೆ ಉಪೇಕ್ಷೆಗೊಳಗಾಗದು.

(೩) ಇದು ಶಾಸನ ಸಭೆಗಳ ಸಮಸ್ಯೆಯನ್ನೂ ಬಿಡಿಸುವದು. ಒಕ್ಕೂಟದಾದ್ಯಂತವೂ ಎಲ್ಲ ಕಾಯದೆಗಳು ರಾಷ್ಟ್ರ ಭಾಷೆಯಲ್ಲೇ ಲಿಖಿತವಾದರೂ ಪ್ರಾದೇಶಿಕ ಭಾಷೆಗಳಲ್ಲಿ ಅವುಗಳನ್ನು ಸರ್ವಜನೀನ ಪರಿಜ್ಞಾನಕ್ಕಾಗಿ ಅನುವಾದಿಸಲೇಬೇಕಾಗುವದು. ವಿಶ್ವವಿದ್ಯಾಲಯದ ಛಾತ್ರರೂ ವಕೀಲರೂ ಮತ್ತು ಇದ ವಿಶಿಷ್ಟರೂ ರಾಷ್ಟ್ರಭಾಷೆಯಲ್ಲಿ ಪರಿಣತರಾಗಿರಬೇಕೆಂದು ನಿರೀಕ್ಷಿಸಬಹುದಾದರೂ ಎಲ್ಲ ಶಾಸನ ಸಭಾಸದರಿಂದ ಹಾಗೆ ನಿರೀಕ್ಷಿಸುವದು ಸಾಧ್ಯವಿಲ್ಲ. ಅವರ ಸೌಕರ್ಯಕ್ಕಾಗಿ ಪ್ರಾಂತಿಕ ಶಾಸನ ಸಭೆಗಳಲ್ಲಾಗುವ ಎಲ್ಲ ಮೂಲ ಕಾಯದೆಗಳು ಮೊವಲು ಪ್ರಾಂತ ಭಾಷೆಯಲ್ಲೆ ಇರುವದವಶ್ಯ. ಆದರೆ ಪ್ರತಿಯೊಂದು ಪ್ರಾಂತವೂ ರಾಷ್ಟ್ರ ಭಾಷೆಯಲ್ಲಿ ಅವುಗಳ ಅನುವಾದವನ್ನು ಪ್ರಕಟಿಸಬೇಕು. ಬಹುಭಾಷಾಪ್ರಾಂತಗಳಲ್ಲಿ ಅಥವಾ ರಾಷ್ಟ್ರ ಭಾಷೆಯಲ್ಲೆ ಮಾತಾಡಬೇಕೆಂದಿಚ್ಛಿಸುವ ಸಭಾಸದರ ಸಂದರ್ಭದಲ್ಲಿ, ಹಾಗೆ ಮಾಡಲು ಅಡ್ಡಿಯಿರತಕ್ಕದ್ದಲ್ಲ.

ಹೇಗೇ ಇದ್ದರೂ ಅನುವಾದಗಳು ಅನಿವಾರ್ಯವೇ. ಸಾರ್ವಜನಿಕರಿಗೋಸ್ಕರವಾದರೂ ಅನುವಾದಿಸಬೇಕು, ಅಥವಾ ಪರಪ್ರಾಂತಿಕ ಪ್ರಯೋಜನಗಳಿಗಾಗಿಯಾದರೂ ಅನುವಾದಿಸಬೇಕು.

ಮೊದಲನೆ ಲೇಖದಲ್ಲಿ ರಾಷ್ಟ್ರ ಭಾಷೆಯ ಅಭ್ಯಾಸವನ್ನು ತೀವ್ರಗೊಳಿಸಬೇಕೆಂದು ನಾನು ಸ್ಪಷ್ಟವಾಗಿ ಸೂಚಿಸಿರುವೆನೆಂದು ನೆನಸು. ಹಿಂದುಸ್ತಾನದಲ್ಲಿ ವಿದ್ಯಾವಂತನೆಂದೆನಿಸಿಕೊಳ್ಳುವ ಪ್ರತಿಯೊಬ್ಬ ನಾಗರಿಕನೂ ಕನಿಷ್ಠಪಕ್ಷ ಎರಡು ಭಾಷೆಗಳಲ್ಲಾದರೂ—ಒಂದು ಪ್ರಾಂತ ಭಾಷೆ, ಇನ್ನೊಂದು ರಾಷ್ಟ್ರಭಾಷೆ-ಪರಿಣತನಾಗಿರುವ ದಿವಸ ಬಂದೀತೆಂದು ಹಾರೈಸುವೆ. ಭಾರತದಂಥ ವಿಸ್ತಾರವಾದ ದೇಶದಲ್ಲಿ ಏನಾದರೊಂದು ಬಗೆಯ ಏಕರೂಪತೆಯನ್ನು ಉಳಿಸಿಕೊಳ್ಳಬೇಕಾದರೆ, ಅಷ್ಟೇ ಏಕೆ, ಪರಸ್ಪರ ವಿಭಿನ್ನವಾದ ಬೇರೆ ಬೇರೆ ಭಾಷೆಗಳನ್ನಾಡುವ ಹೆಚ್ಚು ಕಡಿಮೆ ಸ್ವತಂತ್ರ ಘಟಕಗಳಲ್ಲಿ ಈ ದೇಶ ಒಡೆದು ಹೋಗದಂತೆ ತಡೆಯಬೇಕಾದರೆ, ಮೇಲೆ ಹೇಳಿದ್ದೊಂದೇ ಉಪಾಯ. ಆದುದರಿಂದ ದೇಶದಲ್ಲಿ ರಾಷ್ಟ್ರಭಾಷೆಯ ಅಭ್ಯಾಸವನ್ನು ಹೆಚ್ಚು ಪ್ರಚುರಗೊಳಿಸಬೇಕು. ದೇಶದಲ್ಲೆಲ್ಲ ಕಡೆ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರಭಾಷೆಯನ್ನೇ ಶಿಕ್ಷಣಮಾಧ್ಯಮವಾಗಿ ಮಾಡುವದು ಸಾಧ್ಯವಾಗದಿದ್ದರೂ ಅನೇಕಾನೇಕ ವಿದ್ಯಾರ್ಥಿಗಳು, ದೇಶ ಸೇವೆ ಮಾಡುವ ಮತು ಸಮಸ್ತ ದೇಶಕ್ಕೂ ಸಂಬಂಧಿಸಿದ ಸಾಮಾನ್ಯ ಹಿತಾಹಿತ ಸಂಗತಿಗಳನ್ನು ಅರಿತುಕೊಳ್ಳುವ ಹಂಬಲ ಅವರಲ್ಲಿದ್ದರೆ, ರಾಷ್ಟ್ರಭಾಷೆಯನ್ನು ವಿಶೇಷ ಪರಿಶ್ರಮದಿಂದ ಅಭ್ಯಸಿಸಬೇಕಾಗುವದು. ವಕೀಲರು, ನ್ಯಾಯಾಧಿಕಾರಿಗಳು, ಶಾಸನ ಸಭಾಸದರು ಮತ್ತು ಮೇಲ್ತರಗತಿಗಳ ಶಿಕ್ಷಕರು ತಮ್ಮ ಕರ್ತವ್ಯಗಳನ್ನು ತೃಪ್ತಿಕರವಾಗಿ ಪಾಲಿಸಬೇಕಾದರೆ ಅವರಿಗೆ ರಾಷ್ಟ್ರ ಭಾಷೆಯ ಜ್ಞಾನ ಅವಶ್ಯ. ಈಗಾಗಲೆ ಹೇಳಿರುವಂತೆ, ನಮ್ಮ ಸಂಶೋಧನಾತ್ಮಕ ಪತ್ರಿಕೆಗಳನ್ನು ಹತ್ತಾರು ಭಾಷೆಗಳಲ್ಲಿ ಪ್ರಕಟಿಸಲಳವಲ್ಲ. ಅದಕ್ಕೆ ಹಿಡಿಯುವ ವೆಚ್ಚದ ಮಾತಿರಲಿ, ಅಂಥ ಪತ್ರಿಕೆಗಳಿಂದ ದೊರೆಯಬಹುದಾದ ಪ್ರಯೋಜನವೂ ಈ ದೇಶದ ಮಟ್ಟಿಗೆ ಕೂಡ ತೀರ ಕಡಿಮೆಯಾಗುವದು; ನಿಷ್ಪ್ರಯೋಜನವಾದರೂ ಆಗಬಹುದು. ಅನ್ಯದೇಶಗಳು ಅವುಗಳನ್ನುಪಯೋಗಿಸುವ ಸಂಗತಿ ದೂರವೆ ಉಳಿಯಿತು. ಅವು ರಾಷ್ಟ್ರಭಾಷೆಯಲ್ಲಿ ಪಡೆಯಲ್ಪಟ್ಟರೆ, ಈ ದೇಶದ ಮಟ್ಟಿಗಾದರೂ ಎಲ್ಲ ಸಂಶೋಧಕರಿಗೆ ಅವು ಲಭ್ಯವಾಗುವವಲ್ಲದೆ, ಅವು ವಿದೇಶಗಳ ಎಷ್ಟೋ ಪಟ್ಟು ಗೌರವಕ್ಕೆ ಪಾತ್ರವಾಗುವಷ್ಟು ಉಚ್ಚ ಶ್ರೇಣಿಯವಾಗಿದ್ದರೆ, ಭಾರತದ ಸಂಶೋಧನ ಪತ್ರಿಕೆಗಳಲ್ಲಿ ಬರುವ ವಿಚಾರಗಳ ಅಧ್ಯಯನಕ್ಕಾಗಿ, ಪರಿಚಯವನ್ನು ಸಂಪಾದಿಸುವದಕ್ಕೋಸ್ಕರ ವಿದೇಶೀಯರೂ ನಮ್ಮ ರಾಷ್ಟ್ರಭಾಷೆಯನ್ನು ಕಲಿಯುವರು. ಇದು ಕಾರಣ, ರಾಷ್ಟ್ರ ಭಾಷೆಯ ಅಧ್ಯಯನ ಅಳವಾಗುತ್ತ ಹೋದ ಹಾಗೆ, ವಿಶಿಷ್ಟ ಕ್ಷೇತ್ರಕ್ಕಷ್ಟೇ ಸಂಕುಚಿತವಾಗಿರದೆ ಇಡಿ ದೇಶಕ್ಕೆ ಉಪಯೋಗವಾಗಬೇಕಾಗಿರುವ ಎಲ್ಲ ಚಟುವಟಿಕೆಗಳಲ್ಲಿಯೂ ರಾಷ್ಟ್ರ ಭಾಷೆಯನ್ನುಪಯೋಗಿಸುವ ಪರಿಪಾಠವು ಬೆಳೆಯುತ್ತ ಹೋಗುವದೆಂದು ನನ್ನ ಊಹೆ. ಹೈಕೋರ್ಟುಗಳಿಗೆ ರಾಷ್ಟ್ರಭಾಷೆಯನ್ನು ಉಪಯೋಗಿಸಲು ಎಂದು ಸಾಧ್ಯವಾದೀತು, ಎಂದಾದರೂ ಸಾಧ್ಯವಾದೀತೆ, ಎಂದು ಸಾಧೀಗಲೇ ಹೇಳಲಾರೆ. ಅವು ಅದನ್ನು ಸ್ವೀಕರಿಸದಿದ್ದರೆ ಆಗ ಕಾಯದೆಯ ಪತ್ರಿಕೆಗಳಲ್ಲಿ ಅವು ಕೊಟ್ಟ ಮಹತ್ವದ ತೀರ್ಪುಗಳನ್ನೂ ಅದೇ ಪ್ರಕಾರ ವಿವಿಧ ಪ್ರದೇಶಗಳಲ್ಲಿ ಶಾಸನ ಸಭೆಗಳು ಮಾಡಿದ ಕಾಯದೆಗಳನ್ನೂ ದೇಶದ ಬೇರೆ ಪ್ರಾಂತಗಳಿಗಾಗಿ ರಾಷ್ಟ್ರಭಾಷೆಯಲ್ಲಿ ಅನುವಾದಿಸಿ ಪ್ರಕಟಿಸಲೇಬೇಕಾಗುವದೆಂಬಲ್ಲಿ ನನಗೆ ಸಂಶಯವಿಲ್ಲ. ಹಾಗಾದರೆ, ಆ ಅನುವಾದಗಳ ಸಾಧುತ್ವವನ್ನು ಕುರಿತು ಸಂಬಂಧಪಟ್ಟ ಅಧಿಕಾರಿಗಳು ಭರವಸೆ ಕೊಡಬೇಕಾಗುವದು. ಇಷ್ಟಾದರೂ ಮಾಡದೆ ಹೋದರೆ ಒಂದು ಪ್ರಾಂತದವರಿಗೆ ಇನ್ನೊಂದರ ಇರವುತೆರವುಗಳ ವಿಚಾರದಲ್ಲಿ ಅದ್ಯ ಪರ್ಯಂತ ಪರಿಚಯ ದೊರಕುವದು ಅಸಂಭವ. ಪ್ರತಿಯೊಂದು ಪ್ರಾಂತದಲ್ಲಿಯೂ ಕೆಲವು ಪತ್ರಿಕೆಗಳು ರಾಷ್ಟ್ರಭಾಷೆಯಲ್ಲಿ ಪ್ರಕಟವಾಗುವವೆಂದೂ ಅವು ಇಂದಿನ ಇಂಗ್ಲೀಷ ಪತ್ರಿಕೆಗಳಂತೆ ದೇಶದಲ್ಲೆಲ್ಲ ಪ್ರಸಾರವಾಗುವವೆಂದೂ ನನ್ನ ಹಕೆ.

ಇದೆಲ್ಲ ಸಾಧ್ಯವಾಗಬೇಕಾದರೆ, ವಿಶ್ವವಿದ್ಯಾಲಯಗಳೂ ಇತರ ಶಿಕ್ಷಣ ಸಂಸ್ಥೆಗಳೂ ಉತ್ತಮ ಪ್ರತಿಯ ರಾಷ್ಟ್ರ ಭಾಷೆಯಲ್ಲಿ ಶಿಕ್ಷಣ ಕೊಡಲು ಸಮರ್ಥವಾಗುವದವಶ್ಯ. ಈ ಸಿದ್ಧಾಂತದಿಂದ ತಪ್ಪಿಸಿಕೊಳ್ಳುವದು ಸಾಧ್ಯವೇ ಇಲ್ಲ. ಹೀಗಾದರೆ, ಉಚ್ಚ ಅಧಿಕಾರದ ಅಧಿಕಾರಿಗಳಿಗೂ ರಾಜಕೀಯ 'ವ್ಯವಸಾಯಕ್ಕೂ ಉತ್ತಮ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಾವೀಣ್ಯಕ್ಕೂ ಪತ್ರಿಕಾ ವ್ಯವಸಾಯವೇ ಮೊದಲಾದವುಗಳಿಗೂ ಅವಶ್ಯವಾದ ಅರ್ಹತೆಯನ್ನು ಪಡೆಯಬೇಕೆಂಬ ಆತುರವುಳ್ಳ ವಿದ್ಯಾರ್ಥಿಗಳಿಗೆ ರಾಷ್ಟ್ರಭಾಷೆಯಲ್ಲಿ ಹೆಚ್ಚಿನ ಪರಿಜ್ಞಾನವನ್ನು ಸಂಪಾದಿಸಲು ಅನುಕೂಲವಾಗುವದು. ಇದಕ್ಕೋಸ್ಕರ ಹೈಸ್ಕೂಲ್ ವರ್ಗಗಳಿಂದಾರಂಭಿಸಿ ಮುಂದಿನ ಅಭ್ಯಾಸದಲ್ಲಿ ರಾಷ್ಟ್ರಭಾಷೆಯನ್ನು ಒತ್ತಾಯದ ವಿಷಯವನ್ನಾಗಿ ಮಾಡಬೇಕಲ್ಲದೆ ಅದರ ಅಭ್ಯಾಸಕ್ಕೆ ಸರ್ವಪ್ರಕಾರಗಳಿಂದಲೂ ಉತ್ತೇಜನ ಕೊಡಬೇಕು.

ಇದರಿಂದ ಗಾಬರಿಯಾಗುವ ಕಾರಣವೇನೂ ಇಲ್ಲ. ಭಾರತೀಯರಿಗೆ ಭಾಷೆಗಳನ್ನು ಕಲಿಯುವ ಜನ್ಮಸಿದ್ಧ ಚಾತುರ್ಯವಿದೆಯೆಂದು ನಾನು ನಂಬುತ್ತೇನೆ. ಆದ್ದರಿಂದ ಒಮ್ಮೆ ಈ ಮಾತು ಮನದಟ್ಟಾದರೆ, ಆ ಮೇಲೆ ತಮ್ಮ ಸ್ವಂತ ಭಾಷೆ ಯಾವುದೇ ಇರಲಿ, ರಾಷ್ಟ್ರಭಾಷೆಯಲ್ಲಿ ಪಾರಂಗತರಾಗಲು ಅವರಿಗೆ ಹೆಚ್ಚು ವೇಳೆ ಹಿಡಿಯಲಾರದು. ಇಂಗ್ಲೀಷು ನಮಗೆ ಸರ್ವಥಾ ಪರಕೀಯ ಭಾಷೆ. ಆದರೂ ಅದನ್ನು ಪ್ರವೇಶಗೊಳಿಸಿದಾಗಿನ ಮೊದಲನೆ ಪೀಳಿಗೆಯೇ ಅದರಲ್ಲಿ ಉತ್ತಮವಾದ ಪರಿಣತಿಯನ್ನು ತೋರಿಸಿತು. ಅಲ್ಲಿಂದೀಚೆಗೆ ಹಿಂದೀಯರ ಇಂಗ್ಲೀಷ್ ಪರಿಜ್ಞಾನ ಹೆಚ್ಚಿಯೇ ಇಲ್ಲ; ಇಂಗ್ಲೀಷ್ ಭಾಷೆಯ ಪ್ರಸಾರ ಬೆಳೆಯಿತಲ್ಲದೆ ಅದರ ಪರಿಜ್ಞಾನದ ಆಳ ಹೆಚ್ಚಾಗಲಿಲ್ಲ. ಆದುದರಿಂದ, ಕ್ರಮದಿಂದ ಕಲಿಸಿದರೆ ರಾಷ್ಟ್ರ ಭಾಷೆಯ ಪ್ರಸಾರದಿಂದ ಯಾವುದೊಂದು ವಿಶಿಷ್ಟ ಪ್ರದೇಶದ ಜನರು ಜೀವನದ ಸ್ಪರ್ಧೆಯಲ್ಲಿ ಹಿಂದುಳಿದುಬಿಡಬಹುದೆಂಬ ಶಂಕೆಗೆ ಆಧಾರವಿಲ್ಲ. ಏನಾದರೂ ಶಂಕೆಯಿದ್ದರೆ, ಈ ವಿಚಾರದಲ್ಲಿ ಯಾವುದೊಂದು ವಿಶಿಷ್ಟ ಪ್ರದೇಶಕ್ಕೆ ಇರಬಹುದಾದ ಸೌಕರ್ಯವಿಶೇಷವನ್ನು ನಿವಾರಿಸುವ ಮೂಲಕ ಆ ಭಯವನ್ನು ನಿವಾರಿಸಬಹುದು.

೨ ಸಂಸ್ಕೃತದ ಉಪಯೋಗ

ಶ್ರೀ ಮಶ್ರುವಾಲರ ಎರಡನೆ ವಿಚಾರ ಹೀಗಿದೆ:

"ನಿಮ್ಮ ಉತ್ಕೃಷ್ಟವಾದ ಸಿದ್ಧಾಂತಗಳಲ್ಲಿ ಎಂಟನೆಯದು ಗಹನವಾದ ಮತ್ತು ವಿವಾದಾತ್ಮಕ ಕೆಲವು. ವಿವಾದದ ವಿಷಯವೆಂದರೆ ಸಂಸ್ಕೃತದಿಂದ ಅನೇಕ ಶಬ್ದಗಳನ್ನು ತೆಗೆದುಕೊಳ್ಳಬೇಕೆನ್ನುವದೆಂದಲ್ಲ, ಆ ಶಬ್ದಗಳ ಜಾತಿ ಮತ್ತು ಅವುಗಳನ್ನು ತೆಗೆದುಕೊಳ್ಳುವ ಇಲ್ಲವೆ ಅವುಗಳಿಂದ ಹೊಸ ಶಬ್ದಗಳನ್ನು 'ಅಚ್ಚು ಹಾಕುವ' ಬಗ್ಗೆ ನಿಮ್ಮ ಸೂಚನೆಗಳು. "ಹರಿಜನ"ದ ೨೮-೧೧-೪೮ ರ ಸಂಚಿಕೆಯಲ್ಲಿ ಘಟನೆಯ ಕರೆದಿನ "ಮೂರು ಅನುವಾದಗಳು" ಎಂಬ ಲೇಖದಲ್ಲಿ ನಾನು ಮಾಡಿದ ಟೀಕೆಯನ್ನು ನೀವು ನೋಡಿರಬಹುದು. ನಾವು ಅಚ್ಚುಹಾಕುವ ಹೊಸ ಶಬ್ದಗಳು ನಮ್ಮ ಮಾತಾಡುವ ಭಾಷೆಗಳ ಸ್ವರೂಪಕ್ಕೂ ಜಾತಿಗುಣಕ್ಕೂ ಹೊಂದಿಕೆಯಾಗಿರಬೇಕೆಂದು ನನ್ನ ದೃಢವಾದ ಅಭಿಪ್ರಾಯ. ಅಲ್ಲದೆ ಎಲ್ಲ ಪ್ರಾಂತಗಳ ಸಾಮಾನ್ಯ ಸ್ತ್ರೀಪುರುಷ ಬಾಲಕರಿಗೂ ಮೆಚ್ಚಿಗೆಯಾಗುವಂತೆ ಅವು ಸರಳವೂ ಉಚ್ಚಾರಸುಲಭವೂ ಮಧುರವೂ ಆಗಿರಬೇಕು. ಪಾಂಡಿತ್ಯಪ್ರದರ್ಶನ, ಆಡಂಬರದ ದೋಷ ಇವುಗಳನ್ನು ಸಾಧ್ಯವಿದ್ದಷ್ಟು ದೂರೀಕರಿಸಬೇಕು."

ನನ್ನ ಸಿದ್ಧಾಂತದ ಎಂಟನೆ ವಿಭಾಗದಲ್ಲಿ ಹೊಸ ಶಬ್ದಗಳನ್ನು ನಿಶ್ಚಯಿಸ ಮಾಡಿಕೊಳ್ಳುವ ಪ್ರಸಂಗದಲ್ಲಿ ಸಂಸ್ಕೃತಕ್ಕೇ [illegible] ಕೆಂದು ನಾನು ಸೂಚಿಸಿದ್ದೇನೆ [illegible] ಮೋಹವನ್ನು ಬಿಟ್ಟುಬಿಡಬೇಕೆಂದೂ [illegible] ವಾದ ಮಟ್ಟಿಗೆ ಜಾಡಸ್ಥಿತ ಭಾಷೆಗಳ ಸ್ವರೂಪಕ್ಕೂ ಜಾತಿಗುಣಕ್ಕೂ ಅವು [illegible] ದಂತಿರಬೇಕೆಂದೂ ಅವು ಸರಳ [illegible] ರಬೇಕೆಂದೂ ನಾನು ಒಪ್ಪುವೆ. [illegible] ಮಟ್ಟಿಗೆ ಸಾಧ್ಯವೊ ಹಾಗಾದರೆ [illegible] ನಾವು ಆ ದಿಶೆಯಲ್ಲಿ ಪ್ರಯತ್ನಿಸಬೇಕೆಂಬ [illegible] ಸಂದೇಹವಿಲ್ಲ.

ಪಟ್ನಾ, ೧೨-೧೨-೪೮.

ಮಾನವಕುಲದ ಸೇವಕ

[[illegible] ಶ್ರೀ [illegible] ಹಾಡ [illegible] ಪ್ರತಿ [illegible] ಪ್ರಕಟಿಸಿದರು [illegible] ಅರಿಯುತ್ತಾರೆ.

"ನಮ್ಮ [illegible] ಈ [illegible] ಶ್ರೀ [illegible] ನೆನಪಿದೆ. [illegible] ಶ್ರೀ [illegible] ದರು. ([illegible] ಉಪದೇಶವಾಯಿತು.) ಈ [illegible] ನನ್ನು ಶ್ರೀ [illegible] ಇಂಗ್ಲೀಷಿಗೆ [illegible] ಮತ್ತು "ಮಾಡರ್ನ ರಿವ್ಯೂ" ಪತ್ರಿಕೆಯಲ್ಲಿ ಪ್ರಕಟಿಸಿದರು. ಈ ಇಂಗ್ಲೀಷ ಅನುವಾದವನ್ನು ಭಾರತಜ್ಯೋತಿಯು [illegible] ನನಗೊಬ್ಬರು ಓಲೆಗಾರರು [illegible] ದರು. — ಕಿಶೋರಲಾಲ ಮಶ್ರುವಾಲಾ]

ಏಕ ದಿನ ಜಾರಾ ಮೇರೆ ಛಿಲ, ತಾರಾ ಗಿಯೆ
ರಾಜಾರ ದೋಹಾಯ ದಿಯೆ,
ಏ ಯುಗೆ ತಾರಾಯೀ ಜನ್ಮ ನಿಯೆ ಛೆ ಆಜಿ
ಮಂದಿರೆ ತಾರಾ ಎಸೇಛೆ ಭಕ್ತಸಾಜಿ
ಘಾತಕ ಸೈನ್ಯ ಡಾಕಿ,
ಮಾರೊ ಮಾರೊ ಹಾಕಿ,
ಗರ್ಜನೆ ಮಿಶೆ ಪೂಜಾಮಂತ್ರೇರ ಸ್ವರ।
ಮಾನವ ಪುತ್ರ ಗಭೀರ ವ್ಯಥಾಯ
ಕಹೇನ, "ಹೇ ಈಶ್ವರ!
ಏ ಪಾನಪಾತ್ರ ನಿದಾರುಣ ವಿಷೆ ಭರಾ
ದೂರೆ ಫೇಲೆ ದಾಓ
ದೂರೆ ಫೇಲೆ ದಾಓ ತ್ವರಾ" !

ಆ ದಿನ,
ಅರಸರ ಕಡೆಯವರೆನ್ನುತೆ, ಬಂದವರು
ಕೊಲೆಗೈದವರೇ ಈ ದಿನ ಭಕ್ತರ
ವೇಷದಲಿ ನೆರೆದರು ಗುಡಿ ಗುಂಡಾರದಿ
ಭಜನೆಯ ಕಲರವವು !
ಮೇಳದ ಭಜನೆಯೊಳೇನು ಧ್ವನಿ ?
'ಕೊಲೆಲೆ ಕೊಲು ಕೊಲು' ಎನ್ನುವ
ರಣಧ್ವನಿ !
ಕೇಳುವವನವನೊ, ಮರುಧ್ವನಿ, ಮನುವಿನ
ಮಾನವ ಪುತ್ರನವೆ ?
"ದೇವರೆ, ಬಾಬಾ, ಚಿತ್ತೈಸಿ ಚಿತ್ತೈಸಿ,
ಸಾವಿನ ರಸ,ಹಾ ! ಹಾಲಾಹಲವಿಷ
ಕಾವವರಿನ್ನಾರ್ ಮನುಕುಲ ಮಲಗಲು
ಅಣಿಯಾಗಿದೆ ಪ್ರಭು,ಹಾ !"
— ರವೀಂದ್ರನಾಥ ಠಾಕೂರ

ಮಣ್ಣಿನ ಮನೆಗಳು

೪

ಮನೆಗೆಲ್ಲ ಒಂದೇ ಬಗೆಯ ಮಣ್ಣನ್ನೇ ಉಪಯೋಗಿಸುವದು ಒಳ್ಳೆಯದು. ಸಾಚೆಯ ಅಚ್ಚಿನಲ್ಲಿ ಒತ್ತಿಕ್ಕುವ ಅರಲಿನ ಕೆಲಸವೆಸಗುವದಕ್ಕಿಂತ ಮೊದಲೇ ಲೆಕ್ಕ ಮಾಡಿಕೊಂಡಿರಬೇಕು. ಅಚ್ಚೊತ್ತಿದ ಪ್ರತಿಯೊಂದು ಘನಫೂಟಿಗೂ ೨ ಘನಫೂಟು ಅರಲು ಅಥವಾ ೧½ ಘನಫೂಟು ಜಿಗಿಯಾದ ಗಟ್ಟಿ ಮಣ್ಣು ಸಿದ್ಧವಾಗಿರಬೇಕು. ಅಗಿದು ತೆಗೆದ ಮಣ್ಣನ್ನು ೧ ಅಂಗುಲದ ಸಾಣಿಗೆಯಲ್ಲಿ ಹಾಕಿ ತೆಗೆಯಬೇಕು. ಸಣ್ಣ ಕಲ್ಲೂ ಬೊತ್ತ ಹರಳೂ ಮಣ್ಣಿನಲ್ಲಿದ್ದಾಗ ಹೀಗೆ ಸಾಣಿಸುವದು ಅವಶ್ಯ. ಅಮೇಲೆ ಬೇಕೆನಿಸಿದರೆ ಉಸುಕನ್ನೂ ಗರಸನ್ನೂ ಬೆರೆಯಿಸಬೇಕು. ಹೀಗೆ ಬೆರೆಯಿಸಿದ ಮಣ್ಣನ್ನು ೩-೪ ಅಂಗುಲ ದಪ್ಪಕ್ಕೆ ಹರಹಿ ಅನೇಕ ಸಣ್ಣ ಧಾರೆಯಾಗಿ ಬೀಳುವ ಹೂವಿನ ಗಿಡಗಳಿಗೆ ನೀರೆರೆವ ಸೇಚನಪಾತ್ರದಿಂದ ನೀರು ಚಿಮುಗಿಸಿ ಅದನ್ನು ತೋಯಿಸಬೇಕು. ತೊಯ್ದ ಮಣ್ಣನ್ನು ಅನಂತರ ಕಲಸಿ ಗುಂಪು ಗೂಡಿಸಿ ಒದ್ದೆಯಾದ ತಟ್ಟು ಹೊಚ್ಚಿ ಕೆಲ ತಾಸು ಇಲ್ಲವೆ ರಾತ್ರಿಯೆಲ್ಲ ನೆನೆಯಿಸಬೇಕು.

ಬಹಳ ಮನೆಗಳನ್ನು ಕಟ್ಟಬೇಕಾದಾಗ ದೂರಿಂದ ಮಣ್ಣು ತರುವ ತೊಂದರೆಯನ್ನು ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕು. ಬೇಕಾದಷ್ಟು ಮಣ್ಣನ್ನು ಸುಲಭವಾಗಿ ಮತ್ತು ಹತ್ತಿರದಲ್ಲಿಯೇ ದೊರಕಿಸಿಕೊಳ್ಳುವ ಹಂಚಿಕೆಯೆಂದರೆ ಹಾದಿ ಬೀದಿಗಳನ್ನು ೩ ರಿಂದ ೩ ಅಡಿಯವರೆಗೆ ಅಗಿದು ತೆಗೆಯುವದು. ಹೀಗೆ ಮಾಡುವದರಿಂದ ಅನೇಕ ಸೌಕರ್ಯಗಳೂ ಲಾಭಗಳೂ ಆಗುತ್ತವೆ. ಮನೆಗಳೆಲ್ಲ ತಾವಾಗಿ ಎತ್ತರದ ತಾಣದಲ್ಲಿ ನಿಂತುಕೊಳ್ಳುವವು, ಮನೆಗಳ ಸುತ್ತಲಿನ ನೀರೆಲ್ಲ ಸುಲಭವಾಗಿ ಹರಿದು ಹಾದಿಬೀದಿಗಳು ಕೊಳಚೆಯಾಗುವದಿಲ್ಲ ಇಷ್ಟಾಗಿ ಮಣ್ಣು ವಿಪುಲವಾಗಿ ಕಟ್ಟುಗೆಯ ಹತ್ತಿರವೇ ಸಿಕ್ಕಿಹೋಗುತ್ತದೆ.

ಅಚ್ಚೊತ್ತಿ ಅರಲಿನಿಂದ ಕಟ್ಟುವ ಮನೆಗೆ ತಗಲುವ ವೆಚ್ಚವು ಕೂಲಿಯಮೇಲೂ ಉಪ್ಪಾರನ ಕೌಶಲ್ಯದಮೇಲೂ ಅವಲಂಬಿಸಿರುತ್ತದೆ. ವಾಸಕ್ಕೆ ಇಂತಹ ಗೋಡೆಯ ಮನೆಗಳೇ ಆದರ್ಶಪ್ರಾಯವೆನ್ನಬೇಕು. ಸಾಕಷ್ಟು ಕೂಲಿ ಸಿಕ್ಕುವಂತಿದ್ದರೆ ಇವು ಬಹಳ ಅಗ್ಗದ ಮನೆಗಳೇ!

ಕೆಲಸವನ್ನು ಗುತ್ತಿಗೆಗಾರರಿಗೆ ಒಪ್ಪಿಸಿದ್ದರೆ ಸಾಚೆಯ ಅಚ್ಚುಗಳನ್ನು ಸರಿಯಾಗಿ ಉಪಯೋಗಿಸಲಾಗುತ್ತಿದೆ ಎಂಬ ಬಗ್ಗೆ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ಪುಕ್ಕಟೆಯಾಗಿ ಸಿಕ್ಕ ಮಣ್ಣಿನ ಲಾಭಕ್ಕೆ ಎರವಾಗಬೇಕಾಗಬಹುದು.

ಅಚ್ಚೊತ್ತಿ ಗೋಡೆ ಕಟ್ಟಲು ಬೇಕಾಗುವ ಉಪಕರಣಗಳತ್ತ ಇನ್ನು ಹೊರಳುವಾ. ಅವು ಬಹು ಸುಲಭವಾಗಿದ್ದು ಬೇಕಾದ ಹಳ್ಳಿಯಲ್ಲಿ ಅವನ್ನು ಸಿದ್ಧಪಡಿಸಿಕೊಳ್ಳಬಹುದು.

ಜಡಿದ ಮಣ್ಣಿನಿಂದ ಮನೆ ಕಟ್ಟಲು ಬೇಕಾಗುವ ಸಾಧನಗಳ ವಿವರಗಳನ್ನು ಇನ್ನು ಪರಿಶೀಲಿಸೋಣ. ಅವುಗಳ ರೂಪ ತೀರ ಸರಲವಾಗಿದೆ. ಕಬ್ಬಿಣವೊಂದನ್ನು ಬಿಟ್ಟರೆ ಅದಕ್ಕೆ ಬೇಕಾಗುವ ಉಳಿದೆಲ್ಲ ಸಾಮುಗ್ರಿಗಳು ಹಳ್ಳಿಯಲ್ಲೆ ದೊರೆಯುತ್ತಿದ್ದು ಹಳ್ಳಿಯಲ್ಲೆ ಹಳ್ಳಿಯ ಶಿಲ್ಪಿಗಳೇ ಅವನ್ನು ಸಿದ್ಧಗೊಳಿಸಬಹುದು. ಮಣ್ಣನ್ನು ಹಾಕಿ ಜಡಿಯಲು ಒಂದು ಅಚ್ಚು (ಸಾಚೆ) ಮತ್ತು ಜಡಿಯಲು ಒಂದು ಜಡಿ ಮುಷೆ.

ಹಿಂದಿನಿಂದ ಉಪಯೋಗದಲ್ಲಿರುವ ಜಡಿ ಮುಷೆ V ಆಕಾರದ್ದಾಗಿರುತಿತ್ತು. ಅದರ ಕೋನ ೬೦ ಅಂಶಗಳಿಂದ ೧೨೦ ಅಂಶಗಳ ವರೆಗೂ ಇರುತಿತ್ತು. ಪಾರ್ಶ್ವಗಳ ಮೇಲೆ ಒತ್ತಡ ಕೊಡುವದರಿಂದ ಮಣ್ಣು ಗಸ್ಪನೆ ಕೂಡ್ರುವದೆಂದು ಭಾವಿಸಲಾಗಿತ್ತು. ಆದರೆ ಈಚೆಗಿನ ಅನುಭವದಿಂದ ಈ ಕೋನಾಕಾರದ ಜಡಿಮುಷೆಗಿಂತಲೂ ಸಮತಲವಾದ ಜಡಿ ಮುಷೆಯೇ ಮಣ್ಣನ್ನು ಹೆಚ್ಚು ಗಸ್ಪನೆ ಕೂಡ್ರಿಸುವದೆಂದು ಕಂಡು ಬಂದಿದೆ. ಆದರೆ ಪ್ರತಿ ಚೌರಸ ಇಂಚು ಸಮತಲ ಕ್ಷೇತ್ರದ ಮೇಲೆ ಕನಿಷ್ಠ ಎರಡು ಪೌಂಡಿನಷ್ಟಾದರೂ ಒತ್ತಡ ಬೀಳುವಂತಿರಬೇಕು. ೩"×೩"×೩" ಆಕಾರದ ಕಬ್ಬಿಣದ ಚೌಕಗಳನ್ನು ೬ ಅಡಿ ಉದ್ದ ೧½" ವ್ಯಾಸವುಳ್ಳ ಬಡಿಗೋಲಿನ ತುದಿಗೆ ಅಂಟಿಸಿದರೆ ಒಳಿತಾಗುವದು. ಅಂಥ ಬಡಿಗೋಲುಗಳು ೧೫ ಪೌಂಡು ಭಾರವಾಗಿರುತ್ತವೆ. ಅಷ್ಟು ಕಬ್ಬಿಣ ಸಿಗದಿದ್ದಲ್ಲಿ ೩"×೩" ನ ಗಟ್ಟಿಯಾದ ಕಟ್ಟಿಗೆಯ ಚೌಕಗಳನ್ನು ಮಾಡಿ ಸುತ್ತಲೂ ಕಬ್ಬಿಣದ ತಗಡು ಬಡಿದರೂ— ಅದು ಸಾಕಷ್ಟು ಭಾರವಾಗಿದ್ದರೆ— ಸಾಕು

ಮುಂಬಯಿಗಾಗಿ ಹಾಲು

ಯುದ್ಧ ಕಾಲದ ಕೊನೆಯ ಅವಧಿಯಲ್ಲಿ ಉತ್ತರ ಹಲವುಯೋಜನೆಗಳಂತೆ ಖೇಡಾ ಜಿಲ್ಲೆಯಿಂದ ಮುಂಬಯಿಗಾಗಿ ಹಾಲು ಕೊಳ್ಳುವ ಯೋಜನೆಯೂ ಕೈಕೊಳ್ಳಲಾಯಿತು. ಈಗಲೂ ಅದು ಜಾರಿಯಲ್ಲಿ ಇದೆ ಮತ್ತು ಆ ಜಿಲ್ಲೆಯಲ್ಲಿ ಪ್ರತಿದಿನವೂ ೧೨೦೦೦ ಪೌಂಡು ಹಾಲು ಮುಂಬಯಿಗೆ ಬರುತಿದೆ. ಸಹಕಾರಿ ಸಂಸ್ಥೆಯೊಂದಕ್ಕೆ ಸರಕಾರದವರು ಈ ಹಾಲು ಪೂರೈಕೆಯ ಗುತ್ತಿಗೆಯನ್ನು ಕೊಟ್ಟಿದ್ದಾರೆ. ಈ ಸಹಕಾರಿ ಸಂಸ್ಥೆಯಲ್ಲಿ ಮುಖ್ಯವ್ಯಾಕಪಾಗಿರುವ ಪಾಲ್ಸನ್ ಲೇ೦ಸೊಸಾಯಿಟಿಯೂ ಪಾಲಗಾರವಾಗಿರುವದು.

ಸರಕಾರದವರು ಪೌಂಡಿಗೆ ೦-೩-೩ ಯಂತೆ ಹಾಲು ಕೊಂಡು ಮುಂಬಯಿಯಲ್ಲಿ ೭ ಆಣೆಗೆ ಪೌಂಡಿನಂತೆ ಮಾರುತ್ತಾರೆ; ಒಕ್ಕಲಿಗರಿಂದ ಕಂಪನಿಯು ಪೌಂಡಿಗೆ ೨॥ ಆಣೆ ಮೂರು ಆಣೆಯಂತೆ ಹಾಲು ಕೊಳ್ಳುತ್ತದೆ. ಈ ವ್ಯವಸ್ಥೆಯಲ್ಲಿ ಸರಕಾರದವರಿಗೆ ದಿನವೂ ಮೂರು ಸಾವಿರ ರೂಪಾಯಿ ಉಳಿಯುತ್ತದೆ.

ಹಾಲನ್ನು ಮಾರಬಾರದೆಂಬುದು ಹಿಂದುಸ್ತಾನದ ಹಳೆಯ ನೀತಿಯು. ಹಣಕ್ಕೆ ವಿನಿಮಯವಾಗಿ ಹಾಲು ಮಾರುವದು ಕೀಳ್ತನವೆಂದು ಭಾವಿಸಲಾಗುತಿದ್ದಿತು. ತತ್ಪರಿಣಾಮವಾಗಿ ಹಾಲೆಲ್ಲ ಮನೆಯಲ್ಲಿಯೇ ಬಳಸಲಾಗುತಿದ್ದಿತು. ಹೆಚ್ಚಿಗೆ ಉಳಿದ ಹಾಲಿನ ಬೆಣ್ಣೆ ತೆಗೆಯಲಾಗುತಿದ್ದಿತು ಬೆಣ್ಣೆ ಅಥವಾ ತುಪ್ಪ ಮಾರಲಿಕ್ಕೆ ಯಾವದೇ ಬಗೆಯ ನಿರ್ಬಂಧವಿರಲಿಲ್ಲ. ಹಾಲು ಮಾರಬಾರದೆಂದು ನಿಯಮವಿದ್ದುದರಿಂದ ಕರುವಿಗೆ ತನ್ನ ತಾಯಿಯ ಹಾಲನ್ನು ಹೆಚ್ಚಾಗಿ ಕುಡಿಯುವ ಅವಕಾಶ ದೊರೆಯುತಿತ್ತು. ಪ್ರತಿಯೊಂದು ಮನೆಯಲ್ಲಿ ಬೇಕಾದಷ್ಟು ಮಜ್ಜಿಗೆ ಮಾಡಲಾಗುತಿದ್ದಿತು. ಮತ್ತು ಯಾರಲ್ಲಿ ಮಜ್ಜಿಗೆ ಇರುತಿರಲಿಲ್ಲವೊ ಅವರಿಗೆ ಅದನ್ನು ಪುಕ್ಕಟೆ ಕೊಡಲಾಗುತಿದ್ದಿತು. ಹಾಲು ಮಾರುವ ನಿಂದ್ಯ ಪರಿಪಾಠ ಪ್ರಚಾರದಲ್ಲಿ ಬಂದು ಅನೇಕ ದುಷ್ಟ ರೂಢಿಗಳಿಗೆ ಕಾರಣವಾಗಿದೆ. ಆದರೆ ಈ ವಿಷಯವಾಗಿ ನಾನೇನು ಈಗ ಬರೆಯಬಯಸುವದಿಲ್ಲ. ಹಾಲಿನ ಧಾರಣೆಯ ಪ್ರಶ್ನೆಯನ್ನು ಮಾತ್ರ ನಾನಿಲ್ಲಿ ವಿವರಿಸುತ್ತೇನೆ.

ಹಾಲು ಉತ್ಪಾದನ ಮಾಡುವವನ ಪರಿಶ್ರಮಕ್ಕೆ ತಕ್ಕಷ್ಟು ಹಣ ಸಿಕ್ಕಬೇಕು. ದನದ ಜೋಪಾನೆಯನ್ನು ಯೋಗ್ಯ ರೀತಿಯಿಂದ ಮಾಡಲು ಅವನಿಗೆ ಅನುಕೂಲವಾಗಬೇಕು. ಮತ್ತು ಅವನ ಕೆಲಸಕ್ಕೆ ತಕ್ಕಂತೆ ಜೀವನ ವೇತನ ಸಿಕ್ಕಬೇಕು, ಇದೆಲ್ಲವನ್ನು ಅನುಲಕ್ಷಿಸಿ ಹಾಲಿನ ಧಾರಣೆಯನ್ನು ಗೊತ್ತುಪಡಿಸಬೇಕೆಂಬದನ್ನು ಗಮನಿಸಲಿಕ್ಕೆ ಬೇಕು. ಈ ಬಗ್ಗೆ ಈ ಜಿಲ್ಲೆಯ ಒಕ್ಕಲಿಗರಿಂದ ದೂರುಗಳು ನನ್ನ ಕಡೆಗೆ ಬಂದಿವೆ. ಸರಕಾರದವರು ಗೊತ್ತುಪಡಿಸಿದ ದರಕ್ಕೆ ಹಾಲು ಕೊಡುವದರಿಂದ ಖೇಡಾದಲ್ಲಿ ಅತ್ಯುತ್ತಮ ಜಾತಿಯ ಎಮ್ಮೆಗೆ ಕೂಡ ಪ್ರತಿ ವರುಷ ೪೬೯ ರೂಪಾಯಿ ಹಾನಿಯಾಗುತಿದೆಯೆಂದು ಬೋರಿಯಾವಿಯ ಶ್ರೀ ಬಿ. ಬಿ. ಪಟೇಲರು ನನಗೆ ಅಂಕೆಸಂಖ್ಯೆಗಳನ್ನು ಕೊಟ್ಟು ಬರೆದು ತಿಳಿಸಿದ್ದಾರೆ. ಅವರ ಅಭಿಪ್ರಾಯದಂತೆ ಹಾಲಿನ ಧಾರಣೆಯು ಪೌಂಡಿಗೆ ೫॥ ಆಣೆಗಿಂತ ಕಡಮೆಯಿರತಕ್ಕದ್ದಲ್ಲ ಆದುದರಿಂದ ಪೌಂಡಿಗೆ ೩। ಆಣೆಯೆಂದರೆ ಘಾತಕವಾದ ಭಾರವಾದ ಹಾನಿಯು. ಗುಜರಾಥ ಗೋ ಸೇವಾ ಸಂಘದ ಕಾರ್ಯದರ್ಶಿಗಳಿಂದ ನಾನು ಅವರಲೆಕ್ಕವನ್ನೂ ಪರಿಶೀಲಿಸಿಕೊಂಡೆನು. ಒಕ್ಕಲಿಗನು ಹುಲ್ಲನ್ನು ಕೊಳ್ಳದಿದ್ದರೆ ಮತ್ತು ದನ ಕಾಯುವದಕ್ಕಾಗಿ ಹಣವನ್ನು ಕೊಡದಿದ್ದರೆ ಹಾಲಿನ ಧಾರಣೆಯು ಪೌಂಡಿಗೆ ೪-೪॥ ಆಣೆ ಆಗಬಹುದೆಂದು ಅವರ ಅಭಿಪ್ರಾಯ. ಹುಲ್ಲಿಗಾಗಿ ಮತ್ತು ದನ ಕಾಯುವದಕ್ಕಾಗಿ ಅವನು ಹಣವನ್ನು ಕೊಟ್ಟದ್ದಾದರೆ ಧಾರಣೆಯು ಇನ್ನಷ್ಟು ಹೆಚ್ಚುವದು. ಆನಂದದಲ್ಲಿಯ ಒಕ್ಕಲತನ ಸಂಸ್ಥೆಯ ಲೆಕ್ಕಪತ್ರವನ್ನು ಪರಿಶೀಲಿಸಿದ್ದಾದರೆ ಹಾಲಿನ ಧಾರಣೆಯು ಪೌಂಡಿಗೆ ೦-೪-೯ ಬರುತ್ತದೆ. ಆದುದರಿಂದ ಹಾಲಿನ ಧಾರಣೆಯು ಪೌಂಡಿಗೆ ೪। ಆಣೆಗಿಂತ ಕಡಮೆ ಇರಬಾರದೆಂದು ಅವರ ಅಭಿಪ್ರಾಯ. ಒಳ್ಳೆ ಮತ್ತು ಯೋಗ್ಯ ರೀತಿಯಿಂದ ಪೋಷಣೆ ಹೊಂದಿದ ಎಮ್ಮೆಯನ್ನು ಲಕ್ಷದಲ್ಲಿ ಇಟ್ಟುಕೊಂಡು ಈ ಅಂಕೆಗಳನ್ನು ಗೊತ್ತುಪಡಿಸಲಾಗಿದೆಯೆಂದು ಅವರ ಅಭಿಪ್ರಾಯ. ಒಳ್ಳೆ ಮತ್ತು ಯೋಗ್ಯ ರೀತಿ ಪೋಷಣೆ ಹೊಂದಿದ ಎಮ್ಮೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವದು ಅತಿ ಅಶಕ್ತ ಎಮ್ಮೆಗಳನ್ನು ಲೆಕ್ಕಕ್ಕೆ ಹಿಡಿಯುವಂತೆ ಸದೋಷವೇ ಆಗಿದೆ ಎಂಬುದನ್ನು ಅವರು ಒಪ್ಪುತ್ತಾರೆ. ಸಾಮಾನ್ಯವಾಗಿ ಪ್ರತಿಯೊಬ್ಬರ ಮನೆಯಲ್ಲಿ ಇರುವ ಮತ್ತು ಸಾಮಾನ್ಯವಾದ ರೀತಿಯಲ್ಲಿ ಪೋಷಿತವಾದ ಎಮ್ಮೆಗಳನ್ನು ಲೆಕ್ಕಕ್ಕೆ ಹಿಡಿದುಕೊಳ್ಳುವದು ಸಮಂಜಸವಾದುದು. ಒಡೆಯರಿಗೆ ಶ್ರಮಕ್ಕೆ ತಕ್ಕ ಪರಿಹಾರ ಸಿಕ್ಕದ್ದಾದರೆ ಮಾತ್ರ ಅವರು ತಮ್ಮ ದನಗಳ ಪಾಲನೆ ಸುಧಾರಣೆಯತ್ತ ಹೆಚ್ಚು ಲಕ್ಷ ಕೊಡಬಲ್ಲರಲ್ಲದೆ ಅವನ್ನು ಪೋಷಿಸುವ ರೀತಿಯಲ್ಲಿಯೂ ಸುಧಾರಣೆ ಮಾಡಬಹುದು. ಮೇವು ಮತ್ತು ಉಳಿದ ಪದಾರ್ಥಗಳ ಧಾರಣೆ ಅಂದಿನಿಂದ ಮತ್ತೆ ಏರಿವೆಯೆಂದು ಅವರು ಹೇಳುತ್ತಾರೆ.

ಯಾವದೇ ದೃಷ್ಟಿಯಿಂದ ನೀವು ವಿಚಾರ ಮಾಡಿದರೂ ಸದ್ಯದ ಧಾರಣೆಯು ಯೋಗ್ಯ ಇರುವದಿಲ್ಲೆಂಬುದು ಕಂಡು ಬರದಿರಲಾರದು. ಸರಕಾರದವರಿಗೆ ಅದಕ್ಕಾಗಿ ಸಾಕಷ್ಟು ಹಣ ಉಳಿಯುತ್ತದೆ. ಈ ಧಾರಣೆ ಹೆಚ್ಚಳಕ್ಕಾಗಿ ಮುಂಬಯಿಯಲ್ಲಿಯ ಧಾರಣೆಯನ್ನು ಏರಿಸುವ ಅವಶ್ಯಕತೆಯೇನು ತೋರುವದಿಲ್ಲ ಪೌಂಡಿಗೆ ೦-೩-೩ ದರದ ಮೇಲೆ ಆಡಳಿತ ವೆಚ್ಚವು ೦-೩-೯ ಬರುತ್ತಿದ್ದರೆ ಆಡಳಿತ ಪದ್ಧತಿಯಲ್ಲಿಯೇ ಏನಾದರೂ ದೋಷವಿರಲಿಕ್ಕೆ ಬೇಕು.

ಧಾರಣೆಯು ಈ ಸಮಸ್ಯೆಯ ಒಂದು ಅಂಶ ಮಾತ್ರ. ಈ ಹಾಲಿನ ವ್ಯವಹಾರದಿಂದ ಉದ್ಭೂತವಾದ ಮತ್ತೊಂದು ಗಂಡಾಂತರದತ್ತ ನನ್ನ ಗಮನವನ್ನು ಸೆಳೆಯಲಾಗಿದೆ. ಆಯಾ ಉತ್ಪಾದಕರಿಂದ ಬೇಗ ಬೇಗ ಹಾಲನ್ನು ಕಲೆಹಾಕಲು ಸರಕಾರದವರು ಆಯಾ ಹಳ್ಳಿಗಳಿಗೆ ಹೋಗಲು ವರ್ತುಲ ಮಾರ್ಗಗಳನ್ನು ಹಾಕಲು ಯೋಜನೆಯೊಂದನ್ನು ಗೊತ್ತುಪಡಿಸಿದ್ದಾರೆಂದು ನಡಿಯಾದ ತಾಲೂಕಿನ ನರಸಂದಾ ಹಳ್ಳಿಯ ಒಕ್ಕಲಿಗರು ದೂರಿಕೊಂಡಿದ್ದಾರೆ. ಈ ಯೋಜನೆಯನ್ವಯ ಸದ್ಯದ ಮಾರ್ಗಗಳ ಉಪಯೋಗ ಮಾಡಿಕೊಳ್ಳದೆ ಹೊಸದೊಂದು ಮಾರ್ಗವನ್ನೇ ಹಾಕಲು ನಿರ್ಧರಿಸಲಾಗಿದೆಯಂತೆ. ಈಗ ಸಾಗಾಗುತಿದ್ದ ಪ್ರದೇಶದೊಳಗಿಂದಲೆ ಈ ಮಾರ್ಗವು ಹಾಯುವದಂತೆ. ಇದರಿಂದ ಅನೇಕ ದೊಡ್ಡ ಹೊಲಗಳೆಲ್ಲ ಸಣ್ಣಣ್ಣ ತುಂಡುಗಳಾಗಿ ವಿಚ್ಛೇದಿಸಲ್ಪಡುವವು; ಮಾರ್ಗದಲ್ಲಿ ಬರುವ ಅನೇಕ ಹಣ್ಣಿನ ಗಿಡಗಳೂ ನಾಶವಾಗುವವು ಈ ರೀತಿ ಒತ್ತಾಯದಿಂದ ಹೊಲಗಳನ್ನು ವಶಪಡಿಸಿಕೊಳ್ಳುವದರಿಂದ ಅನೇಕ ಬಡ ಒಕ್ಕಲಿಗರು ಅನವಶ್ಯಕವಾಗಿ ಹಾನಿಗೊಳಗಾಗುವರು. ಮುಂಬಯಿಯಂಥ ದೊಡ್ಡ ನಗರಗಳು ಹಳ್ಳಿಗಳ ನಾಶ ಮತ್ತು ಹಾನಿಗೆ ಹೇಗೆ ಕಾರಣವಾಗುತಿವೆ ಎಂಬುದರ ಪ್ರತ್ಯಕ್ಷ ನಿದರ್ಶನವಿದು. ಮುಂಬೈಯಂಥ ದೊಡ್ಡ ನಗರವಿದ್ದರೆ ಅದನ್ನು ನಿರೋಗಿ ಮತ್ತು ಸರ್ವಸಮೃದ್ಧ ನಗರವನ್ನಾಗಿ ಇರಿಸುವದಕ್ಕಾಗಿ ಭಯಂಕರವಾದ ಯೋಜನೆಯು ಬೇಕಾಗುತ್ತದೆ. ಅದೆಲ್ಲ ದೊಡ್ಡ ವೆಚ್ಚದ್ದು. ಬಳಸುವವರಿಂದಲೆ ಎಲ್ಲ ಹಣವನ್ನು ಕೂಡಿಸುವದು ಶಕ್ಯವಿಲ್ಲದ್ದರಿಂದ ಹಳ್ಳಿಗಳೇ ಹಾನಿಗೊಳಗಾಗಬೇಕಾಗುತ್ತದೆ. ಇದರ ಕೊನೆಯ ಪರಿಹಾರವೆಂದರೆ ಬಲಿಷ್ಠ ಗ್ರಾಮಪಂಚಾಯಿತಗಳನ್ನು ರಚಿಸುವದೇ ಎಂಬುದು ಸ್ಪಷ್ಟವಾಗಿದೆ. ತಮ್ಮ ಸುಲಿಗೆಯನ್ನು ಪ್ರತೀಕರಿಸುವಷ್ಟು ಅವು ಸಶಕ್ತವಾಗಿರಲಿಕ್ಕೆ ಬೇಕು. ಆದರೆ ಪಂಚಾಯತಗಳು ಗುಂಪುಗಳ ರಾಜಕಾರಣ, ಲಂಚಗುಳಿತನ ಮತ್ತು ಅಪ್ರಾಮಾಣಿಕತನ ಇವುಗಳಿಂದ ಮುಕ್ತವಾದಾಗಲೆ ಇದೆಲ್ಲ ಶಕ್ಯವಿದೆ. ಬಲ್ಲವರು ಹೇಳುವಂತೆ ಪಂಚಾಯತಗಳು ಪರಮಾತ್ಮನ ಅಂದರೆ ಸತ್ಯ, ನ್ಯಾಯ, ಸಮಾನತೆ ಮತ್ತು ಸದ್ಗುಣಗಳ ಪ್ರತಿನಿಧಿಗಳಾದರೆ ಮಾತ್ರ ಅನ್ಯಾಯವನ್ನು ಪ್ರತೀಕರಿಸಿ ಶೋಷಣೆಯನ್ನು ಪಡೆಯುವ ಶಕ್ತಿಯು ಅವುಗಳಲ್ಲಿ ಬರುವದು.

ಮುಂಬಯಿ ೧೬-೧೨-೪೮ — ಕಿ. ಘ. ಮಶ್ರೂವಾಲಾ

ಇಂಥ ೧೫ ಪೌಂಡಿನ ಈ ಬಡಿಮುಷೆಗಳನ್ನು ಮೊಣಕಾಲಿನೆತ್ತರಕ್ಕೆ ಎತ್ತಿ ಕೈಬಿಟ್ಟುಬಿಡಬೇಕು. ಬಲವಾಗಿಯೂ ಎಲ್ಲ ಕಡೆ ಒಂದೇ ಬಗೆಯಾದ ಪೆಟ್ಟು ಬೀಳುವಂತೆಯೂ ಹೊಡೆಯುವದು ಅವಶ್ಯ. ಇಲ್ಲದಿದ್ದರೆ ದುರ್ಬಲ ಸ್ಥಾನಗಳು ಉಳಿದುಬಿಡಬಹುದು. ಬಡಿಯುವದರಲ್ಲಿ ಪ್ರಮಾದ ಮಾಡಿದರೆ ಗೋಡೆ ಬಹಳ ಬಲಹೀನವಾಗುವದು. ಮನಸಿಟ್ಟು ಕೆಲಸ ಮಾಡಿದರೆ ಅತ್ಯಂತ ಬಲಿಷ್ಠ ಗೋಡೆ ನಿರ್ಮಾಣವಾಗುವದು.

—ಮಾರಿಸ್ ಫ್ರೈಡಮನ್

ಹೈದರಾಬಾದಕ್ಕೆ

ಪಂ. ನೆಹರೂರ ಆಗಮನ

ಸಂದರ್ಶನಕ್ಕಾಗಿ ಅಪೂರ್ವ ಜನಸಮ್ಮರ್ದ

ಭಾರತದ ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲ ನೆಹರುರವರು ೨೪ ನೇ ತಾ. ಮಧ್ಯಾಹ್ನ ವಿಶೇಷ ವಿಮಾನದಿಂದ ಹೈದರಾಬಾದ ಹಕೀಮಪೇಟ ವಿಮಾನ ನಿಲ್ದಾಣದಲ್ಲಿ ಬಂದಿಳಿದರು.

ಹೈದರಾಬಾದ ಸಂಸ್ಥಾನದ ಮಿಲಿಟರಿ ಗವರ್ನರರಾದ ಮೇಜರ ಜನರಲ್ ಜೆ. ಎನ್. ಚೌಧರಿ, ಮುಖ್ಯ ನಾಗರಿಕ ಆಡಳಿತಗಾರರಾದ ಶ್ರೀ ಡಿ. ಎಸ್. ಬಖಲೆ ಮತ್ತು ನಿಜಾಮರ ಪರವಾಗಿ ವರ್ಹಾಡದ ರಾಜಕುಮಾರರು ಪಂ. ನೆಹರುರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

ಪಂ. ನೆಹರುರವರು ವಿಮಾನದಿಂದ ಇಳಿದ ಕೂಡಲೇ ಹಿಂದೀ ಸೈನಿಕರು ಸಲ್ಲಿಸಿದ ಗೌರವ ರಕ್ಷೆಯನ್ನು ಸ್ವೀಕರಿಸಿದರು. ನಾಗರಿಕ ಸ್ವಾಗತ ಸಮಿತಿಯ ಪರ ಪ್ರತಿನಿಧಿಗಳು ಮತ್ತು ಮಿಲಿಟರಿ ಗವರ್ನರರು ಪಂ. ನೆಹರೂರಿಗೆ ಹೂವಿನ ಮಾಲೆಯನ್ನು ಹಾಕಿದರು. ಸ್ವಾಗತ ಸಮಿತಿಯಲ್ಲಿನ್ದ ತಮ್ಮ ಕೆಲ ಹಳೆ ಮಿತ್ರರೊಡನೆ ಮತ್ತು ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರೊಡನೆ ಕೆಲ ಹೊತ್ತು ಮಾತಾಡಿದನಂತರ ಪಂ. ನೆಹರೂರವರು ಒಂದು ಬಯಲು ಕಾರಿನಲ್ಲಿ ಬೋಲಾರಾಮ ಭವನಕ್ಕೆ ತೆರಳಿದರು.

ಸಾವಿರಾರು ಗಂಡಸರು ಮತ್ತು ಹೆಂಗಸರು ಪಂ. ನೆಹರೂರ ಸಂದರ್ಶನಕ್ಕಾಗಿ ಬೆಳಗಿನಿಂದಲೂ ವಿಮಾನ ನಿಲ್ದಾಣದಲ್ಲಿ ನೆರೆದಿದ್ದರು. ಪಂ. ನೆಹರೂರ ವಿಮಾನವು ನೆಲಕ್ಕೆಮುಟ್ಟಿದ ಕೂಡಲೇ 'ಜೈ ಹಿಂದ' ಮತ್ತು 'ಪಂ. ನೆಹರೂಕಿ ಜೈ' ಎಂಬ ಕೂಗುಗಳು ದಿಗಂತವನ್ನು ವ್ಯಾಪಿಸಿದವು.

ಬೋಲಾರಾಮ ಭವನದ ವರೆಗೆ ಮೂರು ಮೈಲುಗಳ ಉದ್ದಕ್ಕೂ ಅನೇಕ ಜನರು ಸಾಲುಗಟ್ಟಿ, ಅನೇಕ ಜನರು ಗಿಡಗಳನ್ನೇರಿ ಕುಳಿತಿದ್ದು ಪಂ. ನೆಹರೂರವರು ಹಾದು ಹೋಗುವಾಗ ಜಯ ಘೋಷಗಳಿಗೆ ಪ್ರತ್ಯುತ್ತರವಾಗಿ ಕೈಬೀಸಿ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ ಸಾಗಿದ್ದರು.

ಮನೆಗೆಲಸಕ್ಕೆ ಹರಿಜನರು

ಪತ್ರಕಾರನೊಬ್ಬ ಬರೆಯುತ್ತಾನೆ.

" ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂಬವರು ತಮ್ಮಲ್ಲಿಯ ಮನೆಗೆಲಸಗಾರರೆಲ್ಲರನ್ನು ತೆಗೆದುಹಾಕಿ ಅವರ ಬದಲು ಹರಿಜನರನ್ನು ನಿಯಮಿಸಿಕೊಳ್ಳುವ ಮಾದರಿಯನ್ನಿಟ್ಟುಕೊಳ್ಳಬೇಕು. ಏಕೆಂದರೆ ಉಪದೇಶಕ್ಕಿಂತ ಆಚರಣೆಯೇ ಉತ್ತಮವಾದುದು. ಇದರಿಂದ ದೇವಾಲಯದ ಅಧಿಕಾರಿಗಳ ಮನಸ್ಸು ಪರಿವರ್ತನಹೊಂದಿ ಈಗಿರುವ ವಿರೋಧದ ವಾತಾವರಣವು ಸಮಾಧಾನಸ್ಥಿತಿಗೆ ಬರುವಂತಾಗುವುದು. ಹಾಗೆ ಮಾಡದಿದ್ದರೆ ಅವರ ಉಪದೇಶ ಮತ್ತು ನಿಷ್ಠೆಗಳ ಪೊಳ್ಳುತನವನ್ನು ಅದು ಸ್ಪಷ್ಟವಾಗಿ ಬಯಲಿಗೆಳೆಯುತ್ತದೆ. "

ಈ ಸಲಹೆಯನ್ನು ನಾನೇನೋ ಪುರಸ್ಕರಿಸುತ್ತೇನೆ. ಆದರೆ ದೇವಾಲಯ ಪ್ರವೇಶಕ್ಕೂ ಮನೆಗೆಲಸಕ್ಕೆ ಹರಿಜನರನ್ನು ಇಟ್ಟುಕೊಳ್ಳುವುದಕ್ಕೂ ಯಾವ ಸಂಬಂಧವೂ ಇಲ್ಲ. ವಿಚಾರಿಸಿ ನೋಡಿದರೆ ಹರಿಜನರು ಧಾರ್ಮಿಕ ಮತ್ತು ಸಾಮಾಜಿಕ ಸಮಾರಂಭಗಳಲ್ಲಿ ಸವರ್ಣ ಹಿಂದುಗಳೊಡನೆ ನಿರಾತಂಕವಾಗಿ ಬೆರೆಯುತ್ತ ಹೋದಂತೆ ಅವರನ್ನು ಮನೆಗೆಲಸಕ್ಕೆ ಇಟ್ಟುಕೊಳ್ಳುವುದು ತಾನಾಗಿಯೆ ಸುಲಭವಾಗಿ ರೂಢಿಯಲ್ಲಿ ಬಂದುಬಿಡುವುದು ಕಳೆದ ಶತಕದ ಕೊನೆಯವರೆಗೆ ಬ್ರಾಹ್ಮಣ ಮತ್ತು ಬನಿಯರಂಥ ಉಚ್ಚವರ್ಣದ ಹಿಂದುಗಳು ಹರಿಜನೇತರ ನೀಚವರ್ಣದ ಆಳುಗಳಿಂದ ನೀರನ್ನಾಗಲಿ ಚಹವನ್ನಾಗಲಿ ತೆಗೆದುಕೊಳ್ಳುತ್ತಿದ್ದಿಲ್ಲ ಎಂಬುದು ಬಹುಶಃ ಪತ್ರಕಾರನಿಗೆ ಗೊತ್ತಿಲ್ಲದಿರಬಹುದು ಈಗ ಅವರನ್ನು ಅಡಿಗೆ ಮಾಡಲಿಕ್ಕೂ ಬಡಿಸಲಿಕ್ಕೂ ನಿಯಮಿಸಿಕೊಂಡಿರುವುದನ್ನು ಕಾಣಬಹುದು. ಅನೇಕ ಕುಟುಂಬಗಳಲ್ಲಿ ಹರಿಜನರನ್ನು ಮನೆಯಾಳುಗಳನ್ನಾಗಿ ನಿಯಮಿಸಿಕೊಂಡಿರುವುದು ಲೇಖಕನಿಗೆ ಗೊತ್ತಿಲ್ಲದಂತೆ ತೋರುವುದು.

ಮುಂಬಯಿ ೫-೧೨-೪೮ — ಕಿ. ಘ. ಮ.

ನಾರದ ಭವಿಷ್ಯ

ಜ್ಯೋತಿಷಿ- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಅಫೀಸ ಖಡೇಬಝಾರ, ಬೆಳಗಾವಿ

ಡಿಸೆಂಬರ ತಾ. ೨೭ ರಿಂದ ಜನೆವರಿ ೨ ರ ವರೆಗೆ

ಮೇಷ

ನಿಮ್ಮ ಪ್ರಕೃತಿ ಉತ್ತಮ. ಆದರೆ ಹೆಂಡತಿಯ ಪ್ರಕೃತಿ ನಾದುರಸ್ತ ಆದಂತೆ ಭಾಸ. ಮಕ್ಕಳ ಪ್ರಕೃತಿ ಉತ್ತಮ. ಆದರೆ ಕೆಲವೊಂದು ಅಪಘಾತದ ಅಂಜಿಕೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಬಹಳ ಜೋರಾದ ಪ್ರಗತಿ. ಹೆಚ್ಚಿನ ಪ್ರತಿಷ್ಠೆ ತುಂಬ ಲಾಭ. ಆದರೆ ಹಿತವಿರೋಧಿಗಳು ವಿಪರೀತ ಅಂಜಿಕೆಯ ಬೆದರಿಕೆ ಹಾಕಿ ಹಿಂದೆ ಜಗ್ಗುವ ಪ್ರಯತ್ನ ನಡೆಸುವರು. ನೌಕರ ಜನರ ಅಧಿಕಾರದಲ್ಲಿ ಹೆಚ್ಚಳ. ರೋಖ ಸಂಗ್ರಹದಲ್ಲಿ ಹೆಚ್ಚಳ. ಆದರೆ ಆಸ್ತಿಯಲ್ಲಿ ಸ್ವಲ್ಪ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರರಲ್ಲಿ ಒಬ್ಬರು ಒಂದು ವಿಪರೀತ ವಸ್ತುವನ್ನು ಬೇಡುವರು. ಆದರೆ ಅದನ್ನು ಕೊಡುವದಾಗದ್ದರಿಂದ ನಿಮ್ಮ ಮೇಲೆ ಬಹಳ ಸಿಟ್ಟಾಗುವರು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲನೇ ೩ ಚರಣಗಳಿಗೆ ತೊಂದರೆ ಕಡಿಮೆ. ತಾ ೨೯, ೩೦, ೩೧, ೧, ಅನುಕೂಲ.

ವೃಷಭ

ನಿಮ್ಮ ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳದು ಸ್ವಲ್ಪ ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಸ್ಥಾವರದಲ್ಲಿ ಹೆಚ್ಚಳವಾಗುವಂತಹ ಒಂದು ಮಾರ್ಗವು ದೊರೆಯುವ ಯೋಗ. ತಾಯಿಗೆ ಬಹಳ ಕ್ಲೇಶ ಮತ್ತು ಇಬ್ಬರಲ್ಲಿಯೂ ವಿರೋಧ. ಉದ್ಯೋಗದಲ್ಲಿ ಪ್ರತಿಷ್ಠೆ ಬಹಳ ಉತ್ತಮ. ಆದರೆ ಪ್ರಗತಿ ಮತ್ತು ಲಾಭ. ಇವುಗಳಲ್ಲಿ ಅಕಸ್ಮಿಕವಾಗಿ ಕೆಲ ಅಡಚಣಿ ಬರುವ ಸಂಭವ. ಸುಂದರ ಸುಂದರ ಸ್ತ್ರೀಯರ ಭೆಟ್ಟಿ ವ ತ್ತು ಗೌರವಿಸುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಅಲ್ಪ ಸ್ವಲ್ಪ ಅವಚಿತ ಲಾಭ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ ೨೭, ೨೮, ೧, ಅನುಕೂಲ.

ಮಿಥುನ

ಪ್ರಕೃತಿ ಉತ್ತಮ. ಹೆಂಡತಿಯದೂ ಅನುಕೂಲ. ಆದರೆ ಉಭಯತರಲ್ಲಿ ಸ್ವಲ್ಪ ಮತಭೇದ. ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮಿತ್ರರಲ್ಲಿ ಒಬ್ಬರ ಕಲ್ಪನಾತೀತ ಉನ್ನತಿಯಾದ ಸುದ್ದಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹೊಸ ಹೊಸ ಅಡಚಣಿಗಳು. ಅಕ್ಕಿ ಇಲ್ಲವೆ ಕುಟುಂಬದಲ್ಲಿಯ ಯಾವ ಕೊಬ್ಬ ಹೆಣ್ಣು ಮಗಳಿಂದ ನಿಮ್ಮ ಅತಿದ್ವೇಷ. ಪ್ರವಾಸಾದಿ ಕೆಲಸ ಹಿತಕರ. ಮೃಗಾದ ೪ ನೆ ಮತ್ತು ಆರಿದ್ರದ ೨ ನೆ ಮತ್ತು ೪ ನೆ ಮತ್ತು ಪುನರ್ವಸುವಿನ ೨ ನೇ ಚರಣಗಳಿಗೆ ತೊಂದರೆ ಕಡಿಮೆ. ತಾ ೨೯, ೩೦, ೩೧ ಉತ್ತಮ.

ಕರ್ಕ

ಎಲ್ಲರ ಪ್ರಕೃತಿ ಅನುಕೂಲ. ಆದರೆ ಹೆಂಡತಿ ಯಾವಾಗಲೂ ಕ್ರೋಧಯುಕ್ತ. ಅಲ್ಲದೆ ಕುಟುಂಬದಲ್ಲಿಯ ಪ್ರತಿಯೊಬ್ಬರ ಅಭಿಪ್ರಾಯ ಪರಸ್ಪರ ವಿರುದ್ಧ ಆಗುವದರಿಂದ ಪ್ರತಿಯೊಂದು ಕೆಲಸದಲ್ಲಿಯೂ ಗೊಂದಲ. ಮಕ್ಕಳು ಮಾತ್ರ ಜನರಲ್ಲಿ ಪ್ರಶಂಸೆಯಾಗುವಂತಹ ಯಾವದೊಂದು ಕೆಲಸ ಮಾಡುವ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೂ ಸಂಗ್ರಹದಲ್ಲಿಯ ಹಣವನ್ನು ವೆಚ್ಚ ಮಾಡುವಷ್ಟು ಹೆಚ್ಚು ವೆಚ್ಚ. ಮನಸ್ಸಿನಲ್ಲಿ ಪರೋಪಕಾರದ ಬಗ್ಗೆ ಅತಿ ವೈಷಮ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳದೇ ಹೆಚ್ಚು ಜೋರು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ. ಪುಷ್ಯದ ೪ ನೆ ಮತ್ತು ಅಶ್ಲೇಷೆಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ ೨೭, ೨೮, ೧, ೨, ಉತ್ತಮ.

ಸಿಂಹ

ಪ್ರಕೃತಿ ಎಲ್ಲರದೂ ಅನುಕೂಲ. ಆದರೆ ಪ್ರತಿಯೊಬ್ಬರ ವರ್ತನ ಪರಸ್ಪರರಿಂಗೆ ಒಪ್ಪಿಗೆಯಾಗದಂತಹದು. ಪ್ರಾಪಂಚಿಕ ಸುಖ ಬಹಳ ಉತ್ತಮ ಪತ್ನಿಯ ಬಂಧುವರ್ಗದಲ್ಲಿ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ವಿಶೇಷತಃ ನೌಕರವರ್ಗದವರಿಗೆ ಹೆಚ್ಚು ಅನುಕೂಲ. ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಸಂಗತಿಗಳನ್ನು ಮಾಡುವದರಿಂದ ನೆರೆಯಲ್ಲಿರುವ ಹಕ್ಕುದಾರರು ಬಹಳ ರೊಚ್ಚಿಗೇಳುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ವಿಶೇಷ ಬುದ್ಧಿಮತ್ತೆಯ ಕೆಲ ಕೃತ್ಯಗಳು ಪ್ರವಾಸಾದಿ ಕೆಲಸ ಹಿತಕರ. ಮಘಾದ ೪ ನೆ ಮತ್ತು ಪೂರ್ವದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ ೨೯, ೩೦, ೩೧, ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳ ವರ್ತನ ಇಲ್ಲವೆ ಅವರ ಭಾವೀ ಉನ್ನತಿಯ ಬಗ್ಗೆ ಉಭಯತ್ಯರಿಗೆ ಬಹಳ ಚಿಂತೆಯುಂಟಾಗುವಂತಹ ಪರಿಸ್ಥಿತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ಹೆಚ್ಚಾಗಹತ್ತುವದರಿಂದ ಕೈಯೂರಿಕೊಂಡು ಕೂಡ್ರುವ ಸರತಿ. ಮಿತ್ರಸುಖ ಉತ್ತಮ. ಬಂಧು ಬಳಗದವರಲ್ಲಿ ಉತ್ಕರ್ಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲ. ವಾತಾನರಣ. ಪ್ರವಾಸಾದಿ ಕೆಲಸ ಹಿತಕರ. ಉತ್ತರೆಯ ೪ ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೭, ೨೮, ೧, ೨, ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖವೂ ಅದರಂತೆ. ಪ್ರಮುಖರ ಸಹವಾಸ; ಮಕ್ಕಳ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಎರಡನೆಯವರಿಗೆ ಹ್ಯಾವು ಹುಟ್ಟುವಷ್ಟು ಅನುಕೂಲ. ಸ್ಥಾವರದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಭಾವೀ ಭಾಗ್ಯಸೂಚಕವಾದ ಘಟನೆಗಳು. ಪ್ರವಾಸಾದಿ ಕೆಲಸ ಉತ್ತಮ. ಚಿತ್ರಾದ ೪ ನೇ ಮತ್ತು ಸ್ವಾತಿಯ ೨ ಮತ್ತು ೪ ನೇ ಮತ್ತು ವಿಶಾಖಾದ ೨ ನೇ ಚರಣಗಳಿಗೆ ಹೆಚ್ಚು ಅನುಕೂಲ. ತಾ ೨೭, ೨೮, ೨೯, ೩೦ ಅನುಕೂಲ.

ವೃಶ್ಚಿಕ

ಎಲ್ಲರ ಪ್ರಕೃತಿ ಉತ್ತಮ. ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ. ಪೂಜ್ಯ ವ್ಯಕ್ತಿಯ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಸ್ಥಾವರದಲ್ಲಿ ಸ್ವಲ್ಪ ಪ್ರತಿಕೂಲ ಘಟನೆಗಳು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೇ ಯಶಸ್ಸು. ಪ್ರತಿಯೊಂದು ಕೆಲಸದಲ್ಲಿ ಸಾಹಸ ಹೆಚ್ಚು. ಕೆಲವೊಂದು ಮಂಗಳ ಕೃತ್ಯ, ಇಲ್ಲವೆ ಧಾರ್ಮಿಕ ಕಾರ್ಯ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ೪ ನೇ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ ೨೭, ೨೮, ೧, ೨ ಅನುಕೂಲ.

ಧನು

ಮಕ್ಕಳಿಗಿಂತ ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಹೆಚ್ಚು ಅನುಕೂಲ. ಕೆಲವೊಂದು ಕೌಟುಂಬಿಕ ಉತ್ಕರ್ಷದ ಸಂಗತಿ ಸಂಭವಿಸುವ ಯೋಗ. ಆದರೆ ಪ್ರತಿ ಯೊಬ್ಬರ ಮತಾಂತರದಿಂದ ಪ್ರಾಪಂಚಿಕ ಸುಖ ಕಡಮೆಯು. ಯೋಗ್ಯ ಬೆಲೆ ಕೊಟ್ಟೂ ಕೇವಲ ಉಪೇಕ್ಷಣೀಯ ಅಕ್ಕಿ ಖರೀದಿ ಮಾಡುವಿರಿ. [illegible] ಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಯೋಗ್ಯ ಕೆಲಸದಲ್ಲಿ, ಆದರೆ ಪ್ರಮಾಣ ಮೀರಿ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಆದರೆ ಶತ್ರುಗಳ ಜೋರು ಹೆಚ್ಚು. ಪ್ರವಾಸಾದಿ ಕೆಲಸ ಹಿತಕರ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆಯುಂಟಾದರೆ ಯಶಸ್ಸು. ತಾ. ೩೦, ೧, ೨ ಅನುಕೂಲ.

ಮಕರ

ನಿಮ್ಮ ಸ್ವಂತ ಪ್ರಕೃತಿ ಕೆಡುವದು. ಆದರೆ ಹೆಂಡತಿ ಮತ್ತು ಮಕ್ಕಳದು ಉತ್ತಮ ಮತ್ತು ಅವರ ಸುಖ ಸ್ವಸ್ಥಿತ. ಉದ್ಯೋಗದಲ್ಲಿ ಪ್ರಗತಿಯ ಬಗ್ಗೆ ಸ್ವಲ್ಪ ತಕರಾರು. ಆದರೆ ಲಾಭ ಮತ್ತು ಪ್ರತಿಷ್ಠೆ ಉತ್ತಮ. ವೆಚ್ಚ ಹೆಚ್ಚು. ಆದರೆ ಅವರಲ್ಲಿಯ ಪೇಕು ಸಾಧ್ಯ ಸಿಟ್ಟು ಹೆಚ್ಚು. ಆದರೆ ಅಪರಿಂದಲೆ ಕೆಲ ಮಾತು ಸರಳವಾಗಿ ಸಾಧ್ಯವಾಗುವ ಪ್ರಕ್ರಿಯೆ. ಸ್ವರ್ಥ ಶುಭ ಮತ್ತು ಭಾವೀಸೂಚಕ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೭, ೨೮, ೧, ೨ ಅನುಕೂಲ.

ಕುಂಭ

ಎಲ್ಲರ ಪ್ರಕೃತಿ ಉತ್ತಮ. ಆದರೆ ಹೆಂಡತಿಯು ನಿರರ್ಥಕ ವಿಷಯಗಳಲ್ಲಿಯೂ ವಿತಂಡ [illegible]

[illegible]

ಮೀನ

[illegible] ಕೆಲಸ [illegible] ಅನುಕೂಲ.

ಹಿಂದುಸ್ಥಾನ

ಮುಂಬಯಿ

ಬೆಲ್ಜಿಯಮದ ಅರ್ಥಿಕ ಶಿಷ್ಟ ಮಂಡಳದ ಅಧ್ಯಕ್ಷರಾದ ಕೂಟನರು, ತಮ್ಮ ರಾಷ್ಟ್ರವು ಹಿಂದುಸ್ಥಾನಕ್ಕೆ ಸಾಧ್ಯವಿದ್ದಷ್ಟು ಯಂತ್ರ ಸಾಮುಗ್ರಿ ಪೂರೈಸುವದೆಂದು ತಿಳಿಸಿದರು. ಭಾರತದಲ್ಲಿ ವರ್ಷಕ್ಕೆ ೧೦ ಲಕ್ಷ ಟನ್ನ ಮಾತ್ರ ಉಕ್ಕು ಸಿದ್ಧವಾದರೆ ತಮ್ಮ ದೇಶದಲ್ಲಿ ವರ್ಷಕ್ಕೆ ೭೦ ಲಕ್ಷ ಟನ್ನ ಉಕ್ಕು ಸಿದ್ಧವಾಗುವದೆಂದೂ ಹಿಂದುಸ್ಥಾನದ ಔದ್ಯೋಗಿಕ ಪ್ರಗತಿಯು ಬಹಳ ಆಗಬೇಕಾಗಿದೆಯೆಂದೂ ಉದ್ಗಾರ ತೆಗೆದರು.

ಮುಂಬಯಿಯ ಹತ್ತರ ಕಲ್ಯಾಣದ ಸಮೀಪಕ್ಕೆ ೧೨ ಲಕ್ಷ ನಿರಾಶ್ರಿತರಿಗೆ ವಾಸಿಸಲು ಅನುಕೂಲವಾಗುವಂತೆ ಒಂದು ಹೊಸ ನಗರವನ್ನೇ ರಚಿಸಲಾಗುವದೆಂದೂ ಈ ನಗರವು ೧೦ ಚದರು ಮೈಲು ವಿಸ್ತಾರದ್ದಾಗುವದೆಂದೂ ಈಗಾಗಲೇ ಈ ಬಗ್ಗೆ ನಕ್ಷೆಗಳು ಸಿದ್ಧವಾಗಿರುವದೆಂದೂ ತಿಳಿಯುತ್ತದೆ.

ಹಿಂದುಸ್ಥಾನದ ವಿಶ್ವವಿದ್ಯಾಲಯಗಳಲ್ಲಿ ಗಣಿತ, ಭೌತಿಕ ಶಾಸ್ತ್ರ, ರಸಾಯನ ಶಾಸ್ತ್ರ, ಇವುಗಳ ಅಭ್ಯಾಸಕ್ರಮದಲ್ಲಿ ಬದಲಾವಣೆ ಮಾಡಿ ಅಣುಶಕ್ತಿ ಸಂಶೋಧನೆಗೆ ಉಪಯುಕ್ತವಾಗುವ ರೀತಿಯಲ್ಲಿ ಅಭ್ಯಾಸಕ್ರಮ ಸಿದ್ಧಪಡಿಸಲು ಹಿಂದುಸ್ಥಾನ ಅಣುಶಕ್ತಿ ಸಮಿತಿಯು ವಿಚಾರ ನಡೆಸಿದೆ.

ಮುಂಬಯಿ ಒಕ್ಕಲತನ ಸಾಲಗಾರರ ಮಸೂದೆಯು ಲೀನವಾದ ಸಂಸ್ಥಾನಗಳಿಗೂ ಅನ್ವಯಿಸಲ್ಪಟ್ಟಿರುವದು. ಈ ಕಾಯದೆಯನ್ವಯ ಸಾಲ ಸರಿಪಡಿಸಲು ಅರ್ಜಿಮಾಡಿಕೊಳ್ಳುವದಕ್ಕೆ ಸರಕಾರದವರು ೧೯೪೯ ಜೂನ ೧೫ ಕೊನೆಯ ದಿನವೆಂದು ಗೊತ್ತುಮಾಡಿದ್ದಾರೆ. ಅರ್ಜಿಯ ನಮೂನೆಗಳು ಸಂಬಂಧಿಸಿದ ಕೋರ್ಟುಗಳಲ್ಲಿ ಸಿಗುವವು ಮತ್ತು ಇವೇ ಕೋರ್ಟಿಗೆ ಈ ಬಗ್ಗೆ ಅರ್ಜಿ ಹಾಕಬೇಕೆಂದು ಸರಕಾರ ಪ್ರಕಟನೆ ಹೊರಟಿದೆ.

ಮುಂಬಯಿ ಬಂದರದಲ್ಲಿ ತಾ. ೧೪ರಂದು ಸುಂಕದ ಅಧಿಕಾರಿಗಳು ಏಡನದಿಂದ ಬಂದ ಒಂದು ಹಡಗವನ್ನು ಶೋಧಿಸಲಾಗಿ ಕೆಂಪು ಸಮುದ್ರದ ಬಂದರಗಳಿಂದ ಕಳ್ಳರೀತಿಯಿಂದ ಸಾಗಿಸುತ್ತಿದ್ದ ೪೮ ಸಾವಿರ ರೂ. ಬೆಲೆಯ ೬೪೦ ಚಿನ್ನದ ನಾಣ್ಯಗಳು ದೊರೆತವು. ಒಬ್ಬನು ಈ ನಾಣ್ಯಗಳನ್ನು ಒಂದು ಅರಿವೆಯ ಪಟ್ಟಿಯಲ್ಲಿ ಹೊಲಿದು ಸೊಂಟಕ್ಕೆ ಕಟ್ಟಿಕೊಂಡಿದ್ದನು. ಇಷ್ಟಲ್ಲದೆ ಇವನ ಹತ್ತರ ಹಿಂದೀ ಚಲಾವಣಿಯ ೨೦ ಸಾವಿರ ರೂ. ಹಳ ನೋಟುಗಳೂ ಸಿಕ್ಕವು.

ಹೊಸದಿಲ್ಲಿ

ಗಾಂಧಿ ಸ್ಮಾರಕ ನಿಧಿಗೆ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪನಿಯು ೧೫ ಲಕ್ಷ ರೂಪಾಯಿಗಳ ಕಾಣಿಕೆ ಸಲ್ಲಿಸಿರುವವಾಗಿ ತಿಳಿಯುತ್ತದೆ.

ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ವಾಲೊಯಿನೊ ಹಾಗು ಉರಿಲ್ ಕಾರ್ನರು ಮುಖ್ಯ ಪ್ರಧಾನರಾದ ಪಂ. ಜವಾಹರಲಾಲರನ್ನು ತಾ. ೨೦ ರಂದು ಕಂಡು ಮಾತುಕತೆ ನಡೆಸಿದರು. ಈ ಮಾತುಕತೆಯ ಕಾಲಕ್ಕೆ ಸರ್ ಎನ್ ಗೋಪಾಲಸ್ವಾಮಿ ಅಯ್ಯಂಗಾರ ಹಾಗು ಸರ್ ಗಿರಿಜಾಶಂಕರ ವಾಜಪೇಯಿ, ವಿದೇಶ ಶಾಖೆಯ ಕಾರ್ಯದರ್ಶಿ ಅವರೂ ಉಪಸ್ಥಿತರಿದ್ದರು.

ಹಿಂದುಸ್ಥಾನ ಸರಕಾರದವರು ವೈದ್ಯಕೀಯ ಸಲಹೆಯ ಮೇರೆಗೆ, ನಿರಾಶ್ರಿತರ ಶಿಬಿರಗಳಲ್ಲಿಯ ನಿರಾಶ್ರಿತರಿಗೆ ಕೊಡುತ್ತಿದ್ದ ಸೀದಾ ಪ್ರಮಾಣವನ್ನು ಹೆಚ್ಚಿಸಿರುವರೆಂದೂ ಇದರಿಂದ ಸರಕಾರಕ್ಕೆ ದಿನ ಒಂದಕ್ಕೆ ೧॥ ಲಕ್ಷ ರೂಪಾಯಿ ಹೆಚ್ಚಿಗೆ ವೆಚ್ಚ ತಗಲುವದೆಂದೂ ತಿಳಿಯುತ್ತದೆ.

ಸಂಯುಕ್ತ ಪ್ರಾಂತ

ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಜಾನೇವರಿ ತಾ. ೧ಕ್ಕೆ ಅಲಹಾಬಾದಕ್ಕೆ ಹೋಗಿ ೪ ದಿನ ಇರಲಿದ್ದಾರೆಂದೂ ತಾ. ೨ಕ್ಕೆ ರಶಿಯಾದಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಮಗಳು ಕು. ತಾರಾ ಪಂಡಿತರ ಮದುವೆಯಿದ್ದು ಅದನ್ನು ಮುಗಿಸಿಕೊಂಡು ತಾ. ೩ಕ್ಕೆ ಹಿಂದಿ ವಿಜ್ಞಾನ ಕಾಂಗ್ರೆಸಿನ ೩೬ನೆಯ ವಾರ್ಷಿಕ ಅಧಿವೇಶನದ ಉದ್ಘಾಟನೆ ಮಾಡಿ ತಾ. ೪ಕ್ಕೆ ದಿಲ್ಲಿಗೆ ತೆರಳುವರೆಂದೂ ತಿಳಿಯುತ್ತದೆ.

ಕಾಶಿ ಹಿಂದೂ ವಿಶ್ವ ವಿದ್ಯಾಲಯದ ಟೆಕ್ನಾಲಜಿ ಕಾಲೇಜಿನ ಸಂಸ್ಥಾಪಕರೂ ಪ್ರಿನ್ಸಿಪಾಲರೂ ಆಗಿದ್ದ ಡಾ. ಎನ್. ಎನ್. ಗೋಡಬೋಲೆಯವರು ಅಲ್ವಾರ ಸಂಸ್ಥಾನದ ಕೈಗಾರಿಕೆ ಶಾಖೆಯ ಮುಖ್ಯಾಧಿಕಾರಿಗಳಾದ್ದರಿಂದ ಕಾಶಿಯ ಕನ್ನಡಿಗರು ಅವರಿಗೆ ತಾ. ೧೬ ರಂದು ಸತ್ಕಾರ ಕೂಟ ಏರ್ಪಡಿಸಿದ್ದರು

ಪಶ್ಚಿಮ ಬಂಗಾಲ

ಅಂದಮಾನ ನಡುಗಡ್ಡೆಗೆ ನೇತಾಜಿ ಸುಭಾಸ ಚಂದ್ರ ಬೋಸರ ಹೆಸರಿಡುವ ಸೂಚನೆಯನ್ನು ಕೇಂದ್ರ ಸರಕಾರದ ಎಲ್ಲ ಮಂತ್ರಿಗಳೂ ಒಪ್ಪಿದ್ದಾರೆಂದು ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಡಾ. ಬಿಧನಚಂದ್ರರಾಯರು ತಾ. ೧೯ ರಂದು ಒಂದು ಸಂದರ್ಭದಲ್ಲಿ ತಿಳಿಸಿದರು. ಯುದ್ಧ ಕಾಲಕ್ಕೆ ೧೯೪೩ರಲ್ಲಿ ನೇತಾಜಿ ಸುಭಾಸಚಂದ್ರ ಬೋಸರು ಅಂದಮಾನವನ್ನು ಒಮ್ಮೆ ಸಂದರ್ಶಿಸಿದ್ದರು. ಆ ಮೇಲೆ ಅಲ್ಲಿ ಸ್ವತಂತ್ರ ಹಿಂದುಸ್ಥಾನ ಸರಕಾರವು ರಾಜ್ಯಭಾರ ಮಾಡುತ್ತಿತ್ತು.

ಪಶ್ಚಿಮ ಬಂಗಾಲ ಸರಕಾರವು ಮಾಧ್ಯಮಿಕ ಶಿಕ್ಷಣದ ಆಡಳಿತ ಹಾಗೂ ಅಭಿವೃದ್ಧಿಯನ್ನು, ಮಾಧ್ಯಮಿಕ ಶಿಕ್ಷಣ ಮಂಡಲ ಸ್ಥಾಪಿಸಿ ಅದಕ್ಕೆ ಒಪ್ಪಿಸುವ ಒಂದು ಮಸೂದೆಯನ್ನು ಮುಂದಿನ ತಿಂಗಳ ಸೇರಲಿರುವ ಶಾಸನಸಭೆಯ ಅಧಿವೇಶನದಲ್ಲಿ ಮಂಡಿಸಲಿದೆ.

ಮಧ್ಯಪ್ರಾಂತ

ನಾಗಪೂರದ ಎಂಪ್ರೆಸ್ ಗಿರಣಿಗಳ ಗುಂಪಿನ ವ್ಯವಸ್ಥಾಪಕ ವರ್ಗದವರು ನೂಲುವ ವಿಭಾಗದಲ್ಲಿ ಸಾಕಷ್ಟು ಕೆಲಸಗಾರರು ಬರುವವರೆಗೆ ಗಿರಣಿಗಳನ್ನು ಮುಚ್ಚಲಾಗಿದೆಯೆಂದು ತಾ ೨೦ ರಂದು ಮಧ್ಯಾಹ್ನ ನೋಟೀಸು ಹಚ್ಚಿದರು ಇದರಿಂದ ೧೭ ಸಾವಿರ ಜನ ಕೆಲಸಗಾರರು ಕೆಲಸವಿಲ್ಲದೆ ಕುಳಿತಿರುವರು.

ಮಧ್ಯಪ್ರಾಂತ ಸರಕಾರದವರು ತಾ. ೧೭ ರಂದು ಒಂದು ಪ್ರಕಟನೆ ಹೊರಡಿಸಿ, ಯಾವ ಸರಕಾರೀ ನೌಕರರೂ ಆರ್. ಎಸ್. ಎಸ್. ಚಟುವಟಿಕೆಗಳಲ್ಲಿ ಭಾಗವಹಿಸಕೂಡದೆಂದೂ ಭಾಗವಹಿಸಿದವರನ್ನು ನೌಕರಿಯಿಂದ ತೆಗೆದೊಗೆಯಲಾಗುವದೆಂದೂ ಎಚ್ಚರಿಕೆ ಕೊಟ್ಟಿದ್ದಾರೆ.

ಹೈದರಾಬಾದ

ನಾನಾ ವರ್ಣಗಳ ಪೋಷಾಕಿನಿಂದ ಮತ್ತು ಥಳಥಳಿಸುವ ಶಸ್ತ್ರಾಸ್ತ್ರಗಳಿಂದ ಶೋಭಿಸುತ್ತಿದ್ದ ನಿಜಾಮರ ಅರಬ ಸೈನಿಕರನ್ನು ಕ್ರಮೇಣ ವಿಸರ್ಜಿಸಲಾಗುತ್ತಿದೆ ೭ ಸಾವಿರ ಸೈನಿಕರ ಈ ದಳವನ್ನು ನಿಜಾಮರ ಸ್ವಂತ ಕೆಲಸಕ್ಕಾಗಿ ಉಪಯೋಗಿಸಲಾಗುತ್ತಿತ್ತು.

ಚಂದಾದಾರರಲ್ಲಿ ವಿನಂತಿ

— ೦ —

ಯಾವದೆ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚ ಸಹಿತ (ಚಂದಾ ಹಣ ಮುಂಗಡ)

೧ ವರ್ಷ	೬-೪-೦
೬ ತಿಂಗಳಿಗೆ . . .	೩-೪-೦
೩ ,, ...	೧-೧೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೭ ಆಣೆ ಹೆಚ್ಚಿಗೆ ಬೀಳುವದು.

ರೂಪರಂಗ

ಚಿತ್ರ ಬಹಿಷ್ಕಾರ

“ಜುಗನು” ಎಂಬ ಚಿತ್ರವನ್ನು ಮುಂಬಯಿ ಸೆನ್ಸರ್ ಬೋರ್ಡು ಮೊದಲು ಸಂಪೂರ್ಣ ಪುರಸ್ಕರಿಸಿದನಂತರ ಈಗ ಗೃಹಮಂತ್ರಿ ಮುರಾರಜಿ ದೇಸಾಯಿಯವರು ಅದನ್ನು ಬಹಿಷ್ಕರಿಸಿದ್ದಾರೆ. ಇದನ್ನು ನೋಡಿದರೆ ಬೋರ್ಡಿನ ಸದಸ್ಯರ ಯೋಗ್ಯತಾನಿರ್ಣಯದ ಯೋಗ್ಯತೆಯ ಬಗ್ಗೆ ಸಂಶಯತಾಳಬೇಕಾಗಿದೆ ಎಂದು “ಫಿಲ್ಮ ಇಂಡಿಯದ” ಸಂಪಾದಕರಾದ ಶ್ರೀ ಬಾಬುರಾವ್ ಪಟೇಲರು ಬರೆಯುತ್ತಾರೆ.

ಕುರುಡನಿಗು ಕೂಡ “ಜುಗನು” ವಿನಲ್ಲಿರುವ ಅಶ್ಲೀಲಭಾಗ ಗೊತ್ತಾಗುವಂತಿದೆಯೆಂದು ಹೇಳಲಾಗಿದೆ. ಹೀಗಿದ್ದರೂ ಮೊದಲು ಸೆನ್ಸರಬೋರ್ಡು ಇದನ್ನು ಹೇಗೆ ಪಾಸು ಮಾಡಿತು ಎಂಬುದೇ ರಸಿಕರನ್ನೆದುರಿಸುವ ಪ್ರಶ್ನೆಯಾಗಿದೆ. ಮೇಲಿನ ಚಿತ್ರವನ್ನು ಬಹಳ ಅಲಕ್ಷ್ಯದಿಂದ ಪರಿಶೀಲಿಸಿರಬಹುದು ಇಲ್ಲವೆ ಸದಸ್ಯರಿಗೆ ಸಾರ್ವಜನಿಕ ನೀತಿಯ ಬಗ್ಗೆ ಕಲ್ಪನೆಯೇ ಇಲ್ಲದೆ ಅವರು ಚಿತ್ರವಿಮರ್ಶೆಯಲ್ಲಿ ಅಸಮರ್ಥರಾಗಿರಬಹುದು ಎಂದು ಹೇಳಲಾಗುತ್ತಿದೆ ಎಂಬ ಮಾತು ಸಹಜವಾಗಿದೆ.

ಸೆನ್ಸರ್ ಬೋರ್ಡಿನಲ್ಲಿ ಎಂಥ ಸದಸ್ಯರಿದ್ದಾರೆ? ಎಂಬುದನ್ನು ಮೊದಲು ತಿಳಿಯಬೇಕು. ಸದಸ್ಯರು ಸಂಬಳ ತಿನ್ನುವವರಲ್ಲ. ಪ್ರತಿದಿನ ಬೆಳಿಗ್ಗೆ ಬಂದು ಕುಳಿತು ಕೆಲಸ ಮಾಡಿ ಹೋಗುತ್ತಾರೆ. ಅವರಲ್ಲಿ ವಿದ್ಯಾವಂತ ವಿದ್ಯಾವತಿಯರಿದ್ದಾರೆ. ಇವರಿಗೆ ಬೆಳಗಿನ ಕೆಲಸ ಬೇಸರವುಂಟು ಮಾಡಿರಬಹುದೇ? ಆಹೊತ್ತಿನಲ್ಲಿ ಮನೆಯ ತಾಪತ್ರಯ ಹೆಚ್ಚಾಗಿರಬಹುದೇ? ಕೆಲವರು ಚಿತ್ರಾಲಯಗಳನ್ನು ಹೊಕ್ಕು ಆಗಾಗ ಕಣ್ಣು ಕೆಂಪಗೆ ಮಾಡುವದು, ಅತ್ತಿತ್ತ ಗಲಾಟೆಮಾಡುವುದು ಮತ್ತು ಪೂರ್ವಗ್ರಹದಿಂದ ಮಾತಾಡುವುದು ಹೀಗೆಲ್ಲ ಮಾಡುವರೆಂದು ಸುದ್ದಿ. ಬಿಟ್ಟಿ ಕೆಲಸ ಮಾಡುವುದೆಂದರೆ ಹೀಗೇ ಅಲ್ಲವೆ? ಯಾವ ಸಂಘ ಅಥವಾ ಸಂಸ್ಥೆಯೆ ಆಗಲಿ ಬಿಟ್ಟಿ ಕೆಲಸಗಾರರನ್ನು ನಿಯಮಿಸಿದರೆ ಆಗುವದೇ ಹೀಗೆ ಎಂಬುದನ್ನು ಇದರಿಂದ ಕಲಿತುಕೊಳ್ಳಬಹುದು. ಜಗತ್ತಿನ ವ್ಯವಹಾರದಲ್ಲಿ ನಿಷ್ಕಾಮಕರ್ಮಿಗಳನ್ನೂ ಕೇವಲ ಪರೋಪಕಾರಿಗಳನ್ನೂ ಹುಡುಕುವದು ವ್ಯರ್ಥವೆಂಬುದನ್ನು ನಿಯೋಜಕರು ತಿಳಿಯಬೇಕು. ನಿಷ್ಕಾಮ ಕರ್ಮ, ಕೇವಲ ಪರೋಪಕಾರ ಎಂಬ ಮಾತುಗಳು ಕೇವಲ ಅಭಾಸಿಕ, ಇಹದ ಕಾಮವಿಲ್ಲದಿದ್ದರೆ ಪರದ ಕಾಮವಿರುತ್ತದೆ, ಪರೋಪಕಾರದಲ್ಲಿ ಯಾವುದಾದರೊಂದು (ಮಾನಸಿಕವಿದ್ದರೂ ಇರಲಿ ಕಡೆಯ ಪಕ್ಷ) ಸ್ವೋಪಕಾರ ಇದ್ದೇ ಇರುತ್ತದೆ ಎಂಬುದು ಶಾಶ್ವತವಾಗಿ ನಿಜವಿರುತ್ತದೆ. ಹೀಗಿರುವುದರಿಂದ ವ್ಯಾವಹಾರಿಕ ನಾಗರಿಕರನ್ನು ಬಿಟ್ಟಿ ಕೆಲಸ ಮಾಡಹಚ್ಚಿದರೆ ಮತ್ತೇನಾದೀತು?

ಈಗಿನ ಪರಿಶೀಲನಪ್ರತಿಫಲವು ರೀಲಿಗೆ ೫ ರೂಪಾಯಿ. ಇದು ಬಹಳ ಕಡಿಮೆ ಎಂಬುದನ್ನು ಯಾರೂ ಅಲ್ಲಗಳೆವಂತಿಲ್ಲ, ಇದನ್ನು ಹೆಚ್ಚಿಸಬೇಕು. ನಿರ್ಮಾಪಕರಿಂದಲೇ ಈ ಪ್ರತಿಫಲವನ್ನು ಕೊಡಿಸಬಹುದು ಎಂದೀ ಸಲಹೆ ಯುಕ್ತವೆಂದು ಎಲ್ಲರೂ ಒಪ್ಪುವಂತಿದೆ. ಅಲ್ಲದೆ, ಚಿತ್ರವಿಮರ್ಶಕನಾಗಬೇಕಾದರೆ ಅವನಿಗೆ ಭಾಷಾಜ್ಞಾನ, ಅಭಿನಯಜ್ಞಾನ, ವಿಶಾಲ ಅನುಭವ, ಸಾಮಾಜಿಕ ನೀತಿನಿಯಮ ಆಚಾರ ವಿಚಾರ ವೈವಿಧ್ಯ ಮತ್ತು ವೈಲಕ್ಷಣ್ಯ, ಪುನಃ ಶಾಸ್ತ್ರ ಇವುಗಳ ಜ್ಞಾನ ಇರಬೇಕು; ಮತ್ತು ಜನರ ಜೀವನದ ಇತಿಸ್ಥಿತಿಯ ಅದ್ಯತನ ಅನದ್ಯತನ ಮತ್ತು ಭವಿಷ್ಯ ಲಕ್ಷಣಗಳ ಹೇತು ಕಾರ್ಯ ಫಲಾದಿಗಳ ವಿಮರ್ಶ ವಿಚಕ್ಷಣೆಯಿರಬೇಕು. ಈ ಅಂಶವನ್ನು ಸರಕಾರ ಗಮನಿಸುವುದು ಅವಶ್ಯವೆಂದು ಬಲ್ಲವರು ಒಪ್ಪದಿರರು.

ಆಸ್ಟ್ರೇಲಿಯದವರಿಂದ ನಾವು ಈ ಸಂಬಂಧದಲ್ಲಿ ಒಂದು ಪಾಠವನ್ನು ಕಲಿಯಬಹುದಾಗಿದೆ. ಅಲ್ಲಿಯ ಕಾಯದೆ ಈಗ ಶೃಂಗಾರ ಮತ್ತು ಭಯಾನಕ ಚಿತ್ರಗಳು ಮಕ್ಕಳಿಗೆ ಯೋಗ್ಯವಲ್ಲವೆಂದು ಸಾರಿದೆ. ಚಿತ್ರಗಳನ್ನು ಅಲ್ಲಿ ಮೂರು ವಿಧವಾಗಿ ವಿಂಗಡಿಸಲಾಗಿದೆ. ಸಾಮಾನ್ಯ, ಮಕ್ಕಳಿಗೆಯೋಗ್ಯವಲ್ಲದ್ದು ಮತ್ತು ಕೇವಲ ವಯಸ್ಕರು ನೋಡತಕ್ಕ ಭಯಾನಕ ಚಿತ್ರಗಳು ಎಂದು ಚಿತ್ರಾಲಯದ ಒಂದು ಚಿತ್ರದ ಬಗ್ಗೆ ಪಡೆದ ಒಪ್ಪಣೆಯ ಪತ್ರವನ್ನು ಜಾಹೀರು ಮಾಡಬೇಕೆಂದು ಕಾಯಿದೆ. ಚಿತ್ರಾಲಯ ಸಹ ಸುತ್ತದೆ. ಪ್ರದರ್ಶಕರು ಕೂಡ ಒಂದು ರೀತಿನಲ್ಲಿ ಚಿತ್ರದ ವರ್ಗವನ್ನು ಪ್ರದರ್ಶಿಸಬೇಕೆಂಬ ನಿಯಮವಿದೆ. ಇವಲ್ಲದೆ, ಹಿಂದುಸ್ಥಾನದಲ್ಲಿ ಬಹಿಷ್ಕರಿಸಿದ ಚಿತ್ರಗಳನ್ನು ಬೇರೆ ದೇಶಕ್ಕೆ ಕಳುಹದಂತೆ ನೋಡಿಕೊಳ್ಳುವವ್ಯವಸ್ಥೆಯೂ ಆಗಬೇಕಾಗಿದೆ. ಹಿಂದುಸ್ಥಾನದಲ್ಲಿ ಬಹಿಷ್ಕರಿಸಲ್ಪಟ್ಟ “ಮುಲ್ಲಿ” ಎಂಬ ಅಶ್ಲೀಲ ಚಿತ್ರವನ್ನು ಈಗ ರಂಗೂನಿನಲ್ಲಿ ಪ್ರದರ್ಶಿಸಲಾಗುತ್ತಿದೆಯೆಂದು ಸುದ್ದಿ. ಇದರಿಂದ ಅಲ್ಲಿಯ ಭಾರತೀಯರ ನೀತಿ ಕೆಡುವುದಲ್ಲದೆ ಹೊರನಾಡುಗಳಲ್ಲಿ ಭಾರತದ ಕೀರ್ತಿಯೂ ಮ್ಲಾನವಾಗುವುದು ಎಂಬುದು ಎಲ್ಲರೂ ಲಕ್ಷ್ಯಕೊಡಬೇಕಾದದ್ದು.

ರಂಗದೊಡೆಯರು ರಂಗದ ಬಾಡಿಗೆಯಲ್ಲಿ ಹೇಗೋ ಹಾಗೇ ನಿರ್ಮಾಪಕವರ್ಗವು ಜನರ ಮನೋದೌರ್ಬಲ್ಯದಲ್ಲಿ ಕಳ್ಳಪೇಟೆ ನಡೆಸುವುದನ್ನು ತಡೆಯುವುದು ಇಂದು ಸರಕಾರದ ಅತ್ಯಾವಶ್ಯಕ ಕರ್ತವ್ಯವೆಂಬುದನ್ನು ಮನಗಂಡರೆ, ಇಂದು ನಾಡಿನ, National Character— ರಾಷ್ಟ್ರೀಯ ವ್ಯಕ್ತಿತ್ವ ರೂಪಣದಲ್ಲಿ ಚಿತ್ರಗಳ ಪಾತ್ರ ಎಷ್ಟರ ಮುಖ್ಯಗಿದೆ ಎಂಬುದು ಗೊತ್ತಾಗದಿರದು. ಶಿಕ್ಷಣದಲ್ಲಿ ಶ್ರವ್ಯ ಮತ್ತು ದೃಶ್ಯಸಾಧನಗಳ ಸ್ಥಾನ ಗೊತ್ತಿದ್ದ ವಿದ್ಯಾವೇತ್ತರಿಗೆ ಈ ಸಂಗತಿಯನ್ನು ಹೆಚ್ಚು ವಿಸ್ತರಿಸಿ ಹೇಳಬೇಕಾಗಿಲ್ಲ. ಧರ್ಮಶ್ರದ್ಧೆಗೆ ಮಹತ್ವ ಕೊಡದ ಇಂದಿನ ಪ್ರಜಾಧುತ್ವಘಟಿತ ಸರಕಾರಗಳು ನೀತಿ ಪಾಠ ಶಾಲೆಗಳಲ್ಲಾದರೂ ಜನರು ನಿತ್ಯವಿರುವಂತೆ ಅವರಿಗೆ ವಿದ್ಯಾಭ್ಯಾಸ ಮಾಡಿಸದಿದ್ದರೆ ಅವುಗಳ ಅಸ್ತಿತ್ವಕ್ಕೇ ಕಾಲಕ್ರಮೇಣ ಗೆದ್ದಲು ಹಿಡಿಯಬಹುದಲ್ಲವೆ?

—ಚಿತ್ರಭಾನು

ಜಯಪುರ-ಗಾಂಧೀನಗರದಲ್ಲಿ ಸರ್ವೋದಯ ಪ್ರದರ್ಶನ

ಆಚಾರ್ಯ ವಿನೋಬಾ ಭಾವೆ ಅವರ ಭಾಷಣ

ಜಯಪುರ ಕಾಂಗ್ರೆಸಿನ ಕಾಲಕ್ಕೆ ಆಚಾರ್ಯ ವಿನೋಬಾ ಭಾವೆ ಅವರು, ತಾ. ೧೪ ಮಂಗಳವಾರ ಗಾಂಧೀ ನಗರದಲ್ಲಿ ಸರ್ವೋದಯ ಪ್ರದರ್ಶನವನ್ನು ಉದ್ಘಾಟಿಸುತ್ತ ಮಾಡಿದ ಭಾಷಣದ ಸಾರಾಂಶ ಹೀಗಿದೆ:—

ಸರ್ವೋದಯ ಪ್ರದರ್ಶನದ ಉದ್ಘಾಟನ ಮಾಡುವ ಕಾರ್ಯವನ್ನು ನೆರವೇರಿಸಲು ನನಗೆ ಬಹಳ ಆನಂದವೆನಿಸುವದು.

ವಿಧಾಯಕ ಕಾರ್ಯಗಳ ಬೇರೆಬೇರೆ ಸಂಸ್ಥೆಗಳಿಂದ ಹಿಂದುಸ್ತಾನದ ಎಲ್ಲ ಭಾಗಗಳಿಂದಲೂ ಸುಮಾರು ೫೦೦ ಕಾರ್ಯಕರ್ತರು ಇಲ್ಲಿಗೆ ಬಂದಿದ್ದು ಅವರ ಸಂಯುಕ್ತ ಪ್ರಯತ್ನದ ಫಲವೇ ಈ ಪ್ರದರ್ಶನವಾಗಿದೆ.

ಕಾರ್ಯಕರ್ತರ ನಿರ್ಧಾರ

ವರ್ಧಾದಿಂದ ಸುಮಾರು ೧೦೦ ಕಾರ್ಯಕರ್ತರು ಬಂದು ಈ ಪ್ರದರ್ಶನದಲ್ಲಿ ಕಾರ್ಯ ಮಾಡುತ್ತಿದ್ದಾರೆ. ಪ್ರೇಕ್ಷಕರು ಈ ಪ್ರದರ್ಶನವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಇದರಿಂದ ವೈಯಕ್ತಿಕ ಹಾಗೂ ರಾಷ್ಟ್ರೀಯ ಜೀವನದಲ್ಲಿ ಇದರ ಉಪಯುಕ್ತತೆ ಎಷ್ಟೆಂಬದನ್ನು ಕಂಡುಕೊಳ್ಳಬೇಕು.

ಸರ್ವೋದಯ ಸಮಾಜದ ಗುರಿ

ಗಾಂಧೀಜಿಯವರ ಮರಣದ ನಂತರ ದೇಶದಲ್ಲಿಯ ವಿಧಾಯಕ ಕಾರ್ಯಕರ್ತರು ಸೇವಾಗ್ರಾಮದಲ್ಲಿ ಸಭೆಸೇರಿ 'ಸರ್ವೋದಯ ಸಮಾಜ'ವೆಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಸರ್ವೋದಯ ಸಮಾಜವೆಂದರೆ ಅದೊಂದು ಸಂಸ್ಥೆಯಲ್ಲ. ಅದೊಂದು ಸಾಮಾಜಿಕ ಕ್ರಾಂತಿ ಸಾಧಿಸುವ ಶಬ್ದ. ಸಂಸ್ಥೆಗಳಿಗಿಂತಲೂ ಶಬ್ದದಲ್ಲಿ ಹೆಚ್ಚು ಪ್ರಭಾವವಿರುವದು. ಒಮ್ಮೊಮ್ಮೆ ಶಬ್ದಗಳಲ್ಲಿದ್ದ ಶಕ್ತಿಯು ಸಂಸ್ಥೆಗಳಲ್ಲಿ ಇರಲಾರದು. ಇಂಥ ಪ್ರಚಂಡ ಶಕ್ತಿಸಂಪನ್ನವಾದ ಶಬ್ದವನ್ನು ಅಂಗೀಕರಿಸಿದ್ದೇವೆ. ನಮಗೆ ಕೆಲವರ ಅಭ್ಯುದಯವಾಗುವದು ಬೇಕಾಗಿಲ್ಲ. ಬಹುಸಂಖ್ಯಾಕರ ಏಳಿಗೆಯಾದರೆ ಸಾಕೆಂದು ನಾವು ಭಾವಿಸುವದಿಲ್ಲ-ಸರ್ವಜನರ ಅಭ್ಯುದಯವಾಗಬೇಕು ಕಲ್ಯಾಣ ಸಾಧಿಸಬೇಕು. ಇದೇ ನಮ್ಮ ಮನೀಷೆ ಜನರು ಶ್ರೇಷ್ಠರಿರಲಿ, ಕನಿಷ್ಠರಿರಲಿ; ಎಲ್ಲ ಬಗೆಯ ಸ್ಥಿತಿಗತಿಗಳಲ್ಲಿದ್ದ ಸರ್ವಜನರ ಅಭ್ಯುದಯವಾಗಬೇಕು. ಅಂದರೆ ನಮಗೆ ಸಮಾಧಾನ. ಅದನ್ನು ಸಾಧಿಸುವದೇ ಸರ್ವೋದಯ ಸಮಾಜದ ಗುರಿ.

ಈ ದೃಷ್ಟಿಯಿಂದ ನೀವು ಈ ಪ್ರದರ್ಶನ ನೋಡಿರಿ. ಖಾದಿ ವಿಭಾಗದಲ್ಲಿ ಎಲ್ಲರೂ ಉಪಯೋಗಿಸಬಹುದಾದ ಸರಂಜಾಮುಗಳಿವೆ. ಹತ್ತಿಯನ್ನು ಅರೆಯುವದರಿಂದ ವಸ್ತ್ರವನ್ನು ಸಿದ್ಧಗೊಳಿಸುವ ವರೆಗಿನ ಎಲ್ಲ ಪ್ರಕ್ರಿಯೆಗಳಲ್ಲಿ ಉಪಯೋಗಿಸುವ ಸರಂಜಾಮು ಸಲಕರಣೆಗಳು ತೀರ ಸಾದಾ ಇವೆ. ನಯಿ ತಾಲೀಮ (ಮೂಲ ಶಿಕ್ಷಣ) ವಿಭಾಗದಲ್ಲಿ ನಿಮ್ಮ ಮಕ್ಕಳು ಕಾರ್ಯಕ್ಷಮರಾಗಿ ಧನೋತ್ಪಾದನೆಗೆ ಸಮರ್ಥರಾಗುವರೆಂಬದನ್ನು ಕಾಣಬಹುದು. ಸಾಮಾನ್ಯ ಹಳ್ಳಿಯಲ್ಲಿ ಕೂಡ ಕಲಿಸಬಹುದಾದ ಕೈಗಾರಿಕೆಗಳ ಮುಖಾಂತರ ಶಿಕ್ಷಣ ಕೊಡುವದು ಸಾಧ್ಯವಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಇಲ್ಲಿ ಅನೇಕ ಮಾದರಿಯ ಶೌಚಕೂಪಗಳಿವೆ. ಇವುಗಳಿಂದ ನಿಮ್ಮ ಆರೋಗ್ಯ ರಕ್ಷಣೆಯಾಗಿ ಉತ್ತಮ ಗೊಬ್ಬರ ಸಿದ್ಧವಾಗುವದು ಸಾಧ್ಯವಿದೆ ಎಂಬದನ್ನು ಅರಿಯಬಹುದು.

ಗ್ರಾಮೋದ್ಯೋಗಗಳೇ ಏಕೆ ?

ಇಂದಿನ ಕಾರಖಾನೆ ಯುಗದಲ್ಲಿ ಮಕ್ಕಳ ಆಟಿಗೆಯಂಥ ಸಲಕರಣೆಗಳಿಂದ ನಡೆಯುವ ಈ ಕೈಗಾರಿಕೆಗಳ ಪ್ರಯೋಜನವೇನು? ಎಂದು ಹಲವರು ಕೇಳುತ್ತಾರೆ.

ಈ ಚಿಕ್ಕ ಉಪಕರಣಗಳೇ ಅತಿ ವಿಸ್ತಾರವಾದ ಪ್ರಮಾಣದಲ್ಲಿ ಉತ್ಪತ್ತಿ ಹೆಚ್ಚಿಸಬಲ್ಲವೆಂದು ನನ್ನ ಅಭಿಪ್ರಾಯ. ಯಾಕೆಂದರೆ ಇವುಗಳನ್ನು ಕೋಟ್ಯಂತರ ಜನರು ಉಪಯೋಗಿಸಿ ಉತ್ಪತ್ತಿ ಕಾರ್ಯದಲ್ಲಿ ತೊಡಗಬಹುದಾಗಿದೆ. ನಿಮ್ಮ ಕಾರಖಾನೆಗಳಲ್ಲಿ ಹತ್ತಿಪ್ಪತ್ತು ಲಕ್ಷ ಜನರಿಗೆ ನೀವು ಕೆಲಸ ಕೊಡಬಲ್ಲಿರಿ. ಆದರೆ ಈ ಚಿಕ್ಕ ಉಪಕರಣಗಳ್ನು ಬಳಸುವದಾದರೆ ಕೋಟ್ಯಂತರ ಜನರನ್ನು ಕೆಲಸಕ್ಕೆ ಹಚ್ಚಬಹುದು-ಇಂಥ ಉದ್ಯೋಗವನ್ನು ಕ್ಷುಲ್ಲಕವೆಂದು ಭಾವಿಸುವಿರಾ?

ಮಹಾರಾಷ್ಟ್ರದ ಸಂತ ತುಕಾರಾಮರು ಒಂದು ಅಭಂಗದಲ್ಲಿ ಹೀಗೆ ಹೇಳಿದ್ದಾರೆ.

"ನನ್ನ ಸಂಪತ್ತು, ನನ್ನ ಕಾಳುಕಡಿ, ತಿಜೋರಿಯಲ್ಲಿಲ್ಲ, ಕಣಜಗಳಲ್ಲಿ ಇಲ್ಲ. ಅದು ಅಪಾರವಾದುದರಿಂದ ಇವುಗಳಲ್ಲಿ ಇಡಲು ಶಕ್ಯವೇ ಇಲ್ಲ. ನನ್ನ ಆಸ್ತಿ, ನನ್ನ ಧನ ಸಂಪತ್ತಿ ಪ್ರತಿಯೊಂದು ಮನೆಮನೆಯಲ್ಲಿಡಲಾಗಿದೆ. ಅದು ಅಷ್ಟು ಅಪಾರವಾದುದಾಗಿದೆ."

ಯಾವನು ತನ್ನ ಸಂಪತ್ತು ಪ್ರತಿಯೊಂದು ಮನೆಯಲ್ಲಿರುವದೆಂದು ಭಾವಿಸುವನೋ ಅವನು ಉದಾರ ಮನಸಿನ ಉದಾತ್ತ ಜೀವಿಯಾಗುವನು. ಮನೆಯಲ್ಲಿ ಸಂಗ್ರಹಿಸಿಟ್ಟ ನೀರನ್ನು ನೋಡಿ ಸುರಿಯುವ ಮಳೆಯ ಪ್ರತಿಯೊಂದು ಹನಿ ಅಲ್ಪವೆಂದು ಹೇಳಿದರೆ ಅದು ಅಜ್ಞಾನದ ಪ್ರದರ್ಶನವಾಗುವದು. ಮಳೆ ಹನಿಯು ದೇಶದಲ್ಲೆಲ್ಲ ಬಿದ್ದು ಜಗತ್ತಿಗೇ ನೀರು ಪೂರೈಸುವದು. ಅದರಿಂದಲೇ ಎಲ್ಲ ವನಸ್ಪತಿಗಳು ಬೆಳೆಯುವವು; ಕೆರೆ ಕಾಲುವೆ ತುಂಬಿ ಹೊಳೆ ಹಳ್ಳ ಹರಿದು ಅದರಿಂದಲೇ ಭೂಮಿಗೆ ನೀರಾವರಿ ಸೌಲಭ್ಯ ದೊರೆಯುವದು. ಆದುದರಿಂದ ಕಣ್ಣಿಗೆ ಮಳೆಹನಿ ಸಣ್ಣದಾಗಿ ಕಂಡರೂ ಅದರ ಪ್ರಭಾವ ದೊಡ್ಡದು. ಇದೇ ಮಾತು ಗ್ರಾಮೋದ್ಯೋಗಗಳಿಗೂ ಅನ್ವಯಿಸುವದು.

ಪ್ರದರ್ಶನದ ಉದ್ದೇಶ

ಗ್ರಾಮೋದ್ಯೋಗಗಳ ಬಗ್ಗೆ ಈ ಕ್ರಾಂತಿಕಾರಕ ದೃಷ್ಟಿಕೋನವನ್ನು ತಂದು ಕೊಡುವದೇ ಈ ಪರಿಷತ್ತಿನ ಉದ್ದೇಶವಾಗಿದೆ.

ಇಂಥ ಪ್ರದರ್ಶನವನ್ನು ಕಾಂಗ್ರೆಸಿನ ಅಧಿವೇಶನದಲ್ಲಿ ಕಾಂಗ್ರೆಸಿನ ಪರವಾಗಿ ಇಲ್ಲಿ ಏರ್ಪಡಿಸಿದ ಕಾರಣವೇನು? ನೀವೇ ಸ್ವತಂತ್ರವಾಗಿ ಇಂಥ ಪ್ರದರ್ಶನವನ್ನು ಏರ್ಪಡಿಸಬಾರದೇಕೆ? ಎಂದು ಕೆಲವರು ಕೇಳಬಹುದು. ಇದೂ ನಿಜವೇ.

ನಾವು ಇಲ್ಲಿಗೆ ಕಾಂಗ್ರೆಸಿನ ಬೆಂಬಲ ಪಡೆಯುವ ಉದ್ದೇಶದಿಂದ ಬಂದಿದ್ದರೆ ನಾವು ದೊಡ್ಡ ಗಂಡಾಂತರಕ್ಕೆ ಆಮಂತ್ರಣವಿತ್ತಂತೆ ಎಂಬದನ್ನು ಮಾತ್ರ ಸ್ಪಷ್ಟವಾಗಿ ಹೇಳಬಲ್ಲೆ.

ಒಬ್ಬರ ಬೆಂಬಲವನ್ನೋ ಮಾರ್ಗದರ್ಶನವನ್ನೋ ಕೋರಿ ಕುಳಿತಲ್ಲಿಯಾದರೆರೂ ಕೆಲಸಗಳಾಗುವವೆ?

ಹೊಸ ಹೊಸ ತ್ಯಾಗ ಬೇಕು

ಕಾಂಗ್ರೆಸಿಗರು ತಾವು ಹಿಂದೆ ಸ್ವಾರ್ಥತ್ಯಾಗದಿಂದ ಗಳಿಸಿದ್ದನ್ನು ಈಗ ಹಾಳು ಮಾಡಿಕೊಳ್ಳಹತ್ತಿದ್ದಾರೆ. ಅವರಿಗೆ ಹೊಸ ತ್ಯಾಗದ ವಿಚಾರವೇ ಇಲ್ಲ. ತಮ್ಮ ಹಿಂದಿನ ತ್ಯಾಗದ ಪ್ರತಿಫಲ ಪಡೆಯಲು ಅವರು ಗಡಬಡಿಸುತ್ತಿದ್ದಾರೆ. ಕಾಂಗ್ರೆಸಿಗರಲ್ಲಿ ಹೊಟ್ಟೆಕಿಚ್ಚು, ತಮ್ಮಲ್ಲಿಯೇ ಕೆಲವರ ಉತ್ಕರ್ಷವಾದರೆ ಅಲಬಗ್ಗೆ ಅಸಹನೆ ಹೆಚ್ಚಿದೆ. ಸತ್ಯದ ಬಗ್ಗೆ ಅವರಲ್ಲಿ ಲವಲೇಶ ಪ್ರೇಮ ಉಳಿದಿಲ್ಲ. ಸ್ವತಃ ನಾನು ಕಾಂಗ್ರೆಸಿನ ನಮ್ರ ಸೇವಕನಾಗಿದ್ದೇನೆ. ಆದರೂ ನನ್ನ ಸೇವೆಯನ್ನು ಅವಶ್ಯಬಿದ್ದಾಗಲೆಲ್ಲ ಅದರ ಬೆಲೆ ಎಷ್ಟೇ ಇರಲಿ ಸಲ್ಲಿಸುತ್ತ ಬಂದಿರುವೆ. ಎಂದೇ ನಾನು ಕಾಂಗ್ರೆಸಿಗರ ಬಗ್ಗೆ ಈ ಉದ್ಗಾರ ತೆಗೆಯಬೇಕಾದರೆ ಬಹಳ ವ್ಯಥೆಯಾಗುವದು. ನಾನೇನೂ ಕುತ್ಸಿತ ಭಾವನೆಯಿಂದ ಹೀಗೆ ಟೀಕಿಸುವದಿಲ್ಲ. ನನಗೆ ಕಾಂಗ್ರೆಸಿನ ಬಗ್ಗೆ ಅತ್ಯಂತ ಪ್ರೇಮಾದರಗಳಿವೆ. ಅದರ ಸದಸ್ಯರು ನೀತಿಪಥದಿಂದ, ತ್ಯಾಗ ಮಾರ್ಗದಿಂದ, ಚ್ಯುತರಾದದ್ದು ಕಂಡು ವ್ಯಥೆ ಎನಿಸಿ ಈ ಉದ್ಗಾರ ಹೊರಡಿಸಿದೆ.

ನಾರದರಂತೆ ಸರ್ವತ್ರ ಸುತ್ತುವಾ

ಮಹಾನ್ ಋಷಿ ನಾರದನಂತೆ ನಾವೂ ವಿನಮ್ರಭಾವದಿಂದ ಎಲ್ಲ ಜನರ ಕಡೆಗೂ ಹೋಗಬೇಕು. ನಾರದನು ದೇವತೆಗಳ ಕಡೆಗೆ ಹೋಗುವನು, ಮಾನವರ ಕಡೆಗೂ ಹೋಗುವನು. ನಾವು ನಾರದನಂತೆ ಸೇವಾಬುದ್ಧಿಯಿಂದ ಎಲ್ಲ ಜಾತಿ ಮತ ಪಂಥದವರನ್ನು ಕಾಣುವೆವು. ನಮಗೆ ಯಾವ ಸಂಸ್ಥೆಯ ಕೃಪಾಛತ್ರದಡಿಯಲ್ಲಿ ನಿಲ್ಲುವದೂ ಬೇಕಿಲ್ಲ. ಅದರಂತೆಯೇ ಅಧಿಕಾರದಲ್ಲಿದ್ದ ಸರಕಾರದ ಸಹಾಯವನ್ನೂ ನಾವು ಅಪೇಕ್ಷಿಸುವದಿಲ್ಲ. ಯಾವದೇ ಕ್ರಾಂತಿಕಾರಕ ವಿಚಾರಗಳ ಪ್ರಸಾರವನ್ನು ಸರಕಾರ ಮುಖಾಂತರ ಮಾಡುವದು ಸಾಧ್ಯವೇ ಇಲ್ಲ. ಸರಕಾರವು ಬಹಳಾದರೆ ಶಾಂತಿ ಪ್ರಸ್ಥಾಪಿಸಿ ಜೀವನ ಸುಖಕರವಾಗಿ ಸಾಗಿಸುವಂಥ ಅನುಕೂಲತೆಗಳನ್ನು ಒದಗಿಸಿ ಕೊಡಬಲ್ಲದು. ನಾವು ಸರಕಾರದಿಂದ ಇದಕ್ಕೂ ಹೆಚ್ಚಿನ ಕಾರ್ಯವನ್ನು ಅಪೇಕ್ಷಿಸಬಾರದು. ಭಗವಾನ್ ಬುದ್ಧನು ಜಗತ್ತಿಗೊಂದು ಕ್ರಾಂತಿಕಾರಕ ವಿಚಾರವನ್ನು ಕೊಟ್ಟನು. ಅವನೇನೂ ಸರಕಾರದ ಬಲದಿಂದ ತನ್ನ ತತ್ವದ ಪ್ರಸಾರ ಮಾಡಲಿಲ್ಲ. ಇದಕ್ಕೆ ಪ್ರತಿಯಾಗಿ ಅವನು ತನ್ನ ರಾಜಕೀಯ ಅಧಿಕಾರವನ್ನು ತ್ಯಜಿಸಬೇಕಾಯಿತು. ಮಹಾತ್ಮಾ ಗಾಂಧಿಯವರು ತಮ್ಮ ತತ್ವಗಳ ಪ್ರಸಾರಕ್ಕೆ ರಾಜಕೀಯ ಅಧಿ[illegible]

ಆಚಾರ್ಯ ವಿನೋಬಾ ಭಾವೆಯವರು

[illegible]

ಇಲ್ಲಿಗೆ ಪ್ರದರ್ಶನ ನೋಡಲು ಬರುವ ಪ್ರೇಕ್ಷಕರು ಇದರ ಉಪಯುಕ್ತತೆಯನ್ನು ಅರಿತುಕೊಳ್ಳುವರೆಂಬ ವಿಶ್ವಾಸದಿಂದ ನಾನು ಇದರ ಉದ್ಘಾಟನವಾಯಿತೆಂದು ಸಾರುತ್ತೇನೆ.

ಸರ್ವೋದಯ ಪ್ರದರ್ಶನದಲ್ಲಿ ಸೂತ್ರಯಜ್ಞ

ಗಾಂಧಿನಗರ (ಜಯಪುರ) ದಲ್ಲಿ ತಾ. ೧೫-೧೨-೪೮ ಕ್ಕೆ ಸರ್ವೋದಯ ಪ್ರದರ್ಶನದಲ್ಲಿ ನಡೆದ ಸೂತ್ರಯಜ್ಞದಲ್ಲಿ (ಎಡದಿಂದ ಬಲಕ್ಕೆ) ಶ್ರೀಗಳಾದ ಕೃಷ್ಣದಾಸ ಜಾಜು, ಶಂಕರರಾವ ದೇವ, ಆಚಾರ್ಯ ವಿನೋಬಾ ಭಾವೆ ಅವರು ಭಾಗವಹಿಸಿರುವರು.

ಶ್ರೀ. ಹಿರೇಮಠರನ್ನು ಬೀಳ್ಕೊಡುವದು

ಪುಣೆಯಲ್ಲಿ ಸಮಾರಂಭ

ಪುಣೆಯಲ್ಲಿ ದಿನಾಂಕ ೧೪-೧೨-೪೮ನೇ ದಿವಸ ಕರ್ಮಪ್ರಯತ್ನೇಶ್ವರ ಮಂದಿರದಲ್ಲಿ ಪುಣೆಯ ಕನ್ನಡ ಶಿಕ್ಷಣ ಸೇವಾ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀಯುತ ಹಿರೇಮಠ ಇವರನ್ನು ಬೀಳ್ಕೊಡುವ ಸಮಾರಂಭವು ಜರುಗಿತು. ಶ್ರೀ. ಶೀಲವಂತ ಹಿರೇಮಠ, ಪಪ್ಪು ಹಾಗೂ [illegible]ಕರರು ಅವರ ಬಗ್ಗೆ ಮಾತನಾಡಿದರು. ಶ್ರೀ. ಹಿರೇಮಠ ಅವರು ತಮ್ಮ ಚಿಕ್ಕ ಅವಧಿಯಲ್ಲಿ ಇಲ್ಲಿಯ ಎಲ್ಲ ಕನ್ನಡ ಶಾಲೆಗಳನ್ನು [illegible] ಸ್ಥಿತಿಗೆ ತಂದಿದ್ದಲ್ಲದೆ ಶಿಕ್ಷಕರ [illegible] ಶಾಲೆಗಳಿಗೆ ಸ್ಥಳ ಹಾಗೂ ಇನ್ನಿತರ ತೊಂದು ತೊಡಕುಗಳನ್ನು ಅವರು ದೂರಮಾಡಿದರು. [illegible] ಕಚೇರಿಯ ಕೆಲಸವನ್ನು ಮುಗಿಸಿಕೊಂಡು ಪ್ರತಿನಿತ್ಯ ಕನ್ನಡ ಶಾಲೆಗಳ ಕೆಲಸಕ್ಕಾಗಿ [illegible] ಶ್ರೀ ಹಿರೇಮಠರವರು ಕೆಲಸಮಾಡಿದ್ದನ್ನು [illegible]ಗರು ಮಾದರಿಯಾಗಿಟ್ಟುಕೊಂಡು ಅವರ ಹಾಗೆ ಕನ್ನಡ ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಮುಕ್ತಹಸ್ತದಿಂದ ಸಹಾಯ ಮಾಡಬೇಕೆಂದು ಶ್ರೀ. ಪಪ್ಪು ಅವರು ಒತ್ತಿ ಹೇಳಿದರು.

ಶ್ರೀ ಹಿರೇಮಠರ ಸ್ಥಳದಲ್ಲಿ [illegible] ಅಧ್ಯಕ್ಷರಾದ ಶ್ರೀ [illegible] ಅವರು [illegible] ಈ ಸಂಸ್ಥೆಯ ಸೇವೆ ಒದಗಿಸಿಕೊಟ್ಟ [illegible] ಕಾರ್ಯಕರ್ತರನ್ನು ಅಭಿನಂದಿಸಿದರು, [illegible] ಶ್ರೀ ಹಿರೇಮಠ ಅವರನ್ನೇ ಮಾದರಿಯಾಗಿಟ್ಟುಕೊಂಡು [illegible] ಮಾಡುವೆನೆಂದು ಆಶ್ವಾಸನ [illegible] ಆ ಮೇಲೆ ಶ್ರೀ [illegible] ಶಿಕ್ಷಣ ಸಮಿತಿಯ ಇತಿಹಾಸವನ್ನು ಶಾಲೆಗಳ ಪ್ರಗತಿಯನ್ನು [illegible] ಹೇಳಿದರು. [illegible] ಹಾಗೂ [illegible] ಅಧ್ಯಕ್ಷರನ್ನು ಅಭಿನಂದಿಸಿದ ಬಳಿಕ ಸಭೆಯು [illegible]

ಚಿಯಾಂಗರ ದುರ್ದಶೆಗೆ ಕಾರಣಗಳೇನು?

ಚಿಯಾಂಗರ ಸ್ವಾರ್ಥ— ಅಧಿಕಾರಿಗಳ ಲೋಭ— ಸೇನಾಪತಿಗಳ ಅದೂರದರ್ಶಿತ್ವ ಸೈನ್ಯದ ಅವ್ಯವಸ್ಥೆ ಜನರ ಅಪ್ರೀತಿ— ಅನಿಯಂತ್ರಿತ ವೆಚ್ಚ—

ಜನರಲಿಸಿಮೋ ಚಿಯಾಂಗ್ ಕೈಶೇಕರ ಸೈನ್ಯವಿಂದು ಕಮ್ಯುನಿಸ್ಟರ ಮಹೋಗ್ರ ದಾಳಿಯಿಂದ ಹೆಜ್ಜೆ ಹೆಜ್ಜೆಗೆ ಹಿಂಜರಿಯುತ್ತಿರುವ ಸುದ್ದಿ ಕ್ಷಣ ಕ್ಷಣಕ್ಕೆ ಜಗತ್ತಿನ ದಶದಿಕ್ಕುಗಳಿಗೂ ಮುಟ್ಟುತ್ತಿದೆ. ಹಿರಿಯಣ್ಣನಂತೆ ಅವ ರಿಗೆ ಬೆಂಬಲವಾಗಿ ನಿಂತು ಅಮೇರಿಕವು ಅನೇಕ ವರ್ಷಗಳಿಂದ ಜನ, ಧನ, ಶಸ್ತ್ರಾಸ್ತ್ರ, ಯಂತ್ರ ಮಂತ್ರಾಲೋಚನೆಗಳನ್ನು ಸಲ್ಲಿಸುತ್ತ ಬಂದರೂ ಅವೆಲ್ಲ "ಶತಾಸ್ತ್ರಾಣಿ ಹತಾನಿ ಮೇ" ಎಂಬಂತಾಗಲು ಚಿಯಾಂಗ್ ಸರಕಾರದ ಆಂತ ರಿಕ ಲೋಪದೋಷಗಳೇ ಕಾರಣ ಎಂಬುದನ್ನು ಈ ಕೆಳಗಿನ ಅಂಶಗಳಿಂದ ತಿಳಿಯಬಹುದು.

ಕಮ್ಯುನಿಸ್ಟರ ಮುಖಂಡತ್ವದಲ್ಲಿ ಚೀನೀಯರಿಂದು ಚಿಯಾಂಗ್ ಕೈಶೇಕರನ್ನ ಹಣಿಯುತ್ತಿದ್ದಾರೆ. ಈ ಮಾತನ್ನು ಈಗ ಒಂದು ವರ್ಷದಿಂದಲೂ ಹೇಳುತ್ತ ಬರಲಾಗಿದೆ. ಇಂದು ಇಂಗ್ಲೆಂಡಿನ ಟೋರಿಗಳು ಕೂಡ ಇದನ್ನು ನಂಬಲು ಸಿದ್ಧರಾಗಿದ್ದಾರೆ. ಇನ್ನೂ ಹೆಚ್ಚು ಪ್ರದೇಶವು ಕಮ್ಯುನಿಸ್ಟರ ಹಸ್ತಗತವಾಯಿತೆಂದರೆ ಕಬ್ಬಿಣದ ಪರದೆಯ ಮೂಲಕ ರಶಿಯ ಇವರಿಗೆ ನೆರವಿತ್ತಿತು ಅಥವಾ ಸ್ಟಾಲಿನ್ ಮತ್ತು ಕಮ್ಯುನಿಸ್ಟ ನೇತಾರ ಮಯೋತ್ಸೇತುಂಗ್ ಇವರು ಒಳಸಂಚು ಮಾಡಿಕೊಂಡು ಹೀಗೆ ವಿಜಯದ ಹಾದಿಯನ್ನು ಕಂಡುಕೊಂಡರು ಎಂದು ಹೇಳಿಕೊಳ್ಳುವುದು ಹೆಚ್ಚಾಗಬಹುದು. ಆದರೆ ಒಳಗಿನ ಸಂಗತಿಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸಿದರೆ ಇದು ಎಷ್ಟರ ಮಟ್ಟಿಗೆ ಸತ್ಯವೆಂಬುದು ಸ್ಪಷ್ಟವಾಗಿ ಬಿಡುವುದು.

ಅಪಪ್ರಚಾರ

ಚೀನೀ ಕಮ್ಯುನಿಸ್ಟರ ಬಗ್ಗೆ ಜಗತ್ತಿಗೆ ಸರಿಯಾದ ತಿಳುವಳಿಕೆಯಿಲ್ಲ. ಚೀನದಲ್ಲಿ ಇಂದು ಚಿಯಾಂಗರ ವಿರುದ್ಧ ದಾಳಿ ಮಾಡುತ್ತಿರುವವರೆಲ್ಲರೂ ಪಕ್ಕಾ ಕಮ್ಯುನಿಸ್ಟರೆಂದೂ ಅವರಿಗೆ ರಶಿಯದಿಂದ ಅಪಾರ ಸಹಾಯ ಬರುತ್ತಿದೆಯೆಂದೂ ಅವರು ರಶಿಯದವರಂತೆಯೇ ಉಗ್ರರೂ ತೀವ್ರವಾದಿಗಳೂ ಆಗಿರುವರೆಂದೂ ಜಗತ್ತಿನ ಅನೇಕ ಪತ್ರಿಕೆಗಳಲ್ಲಿ ವರದಿ ಮಾಡಲಾಗಿದೆ. ಆದರೆ ಹೀಗೆ ವರದಿ ಮಾಡಲಾದ ಆಗ್ನೇಯ ಏಶಿಯದ ಕಾಮಿನ್‌ಫಾರ್ಮ್" ಸಂಘವನ್ನು ಅತ್ಯಂತ ಕುಶಲರಾದ ಬ್ರಿಟಿಶ್ ಪತ್ತೆದಾರರಿಗೆ ಕೂಡ ಹುಡುಕಲು ಸಾಧ್ಯವಾಗಿಲ್ಲ. ರಶಿಯದ ಜನಧನ ಶಸ್ತ್ರಾಸ್ತ್ರಗಳ ಗುಪ್ತ ಸಹಾಯವೂ ಹೀಗೆಯೇ ಅವಾಸ್ತವವಾಗಿದೆ. ಆಗ್ನೇಯ ಏಶಿಯದ ಇಂಡೋಚೀನ ಇಂಡೊನೇಶಿಯಗಳಲ್ಲಿ ಫ್ರೆಂಚರೂ ಡಚ್ಚರೂ ತಮ್ಮ ವಿರುದ್ಧ ಎದ್ದಿರುವ ಎಲ್ಲ-ರಾಷ್ಟ್ರೀಯ ಆಂದೋಲನವನ್ನೂ ಕಮ್ಯುನಿಸ್ಟರದೆಂದು ಪ್ರಚಾರ ಮಾಡಿಸಿರುವಂತೆ ಚೀನದ ಕಮ್ಯುನಿಸ್ಟರ ಬಗ್ಗಾಗಿಯೂ ಅಪಪ್ರಚಾರವೇ ಹೆಚ್ಚಾಗಿದೆ. ರಾಷ್ಟ್ರೀಯವೆಂದು ಹೇಳಿಕೊಳ್ಳುವ ಇಂದಿನ ಕುಮಿಂಟಾಂಗ ಸರಕಾರದ ರಾಷ್ಟ್ರೀಯತೆಯು ಮುಂದಿರುವ ಪ್ರಶ್ನಾರ್ಥಕ ಚಿಹ್ನವನ್ನು ಗಮನಿಸಿದರೆ ಕಮ್ಯುನಿಸ್ಟರದೆಂದು ಕರೆಯಲಾಗುತ್ತಿರುವ … ಇದರಿಂದ ೧೭ … ದಿನ ಪೂರ್ವ … ಗಾರರು … ಲಾದ … ಹೇಳಲಾಗುತ್ತದು. ಈ ಚೀನೀ ಒಕ್ಕಲಿಗರ ಆಂದೋಲನದ ನಿಜವಾದ ಪರಿಚಯವಾಗುವದು.

ಚೀನದ ನಿಜಪರಿಸ್ಥಿತಿ

ಚೀನೀಯರಲ್ಲಿ ಬಹುಸಂಖ್ಯರು ಶಾಂತಿ, ಪ್ರಜಾಪ್ರಭುತ್ವ ಮತ್ತು ಉದಾರವಾದಗಳಲ್ಲಿ ಶ್ರದ್ಧೆಯುಳ್ಳವರು. ನೂರರಲ್ಲಿ ೯೫ಜನ ಬುದ್ಧಿವಂತರಿಗೆ ಚೀನದ ಇಂದಿನ ಪರಿಸ್ಥಿತಿಯ ಬಗ್ಗೆ ಅಸಮಾಧಾನವಿದೆ. ಅವರಿಗೆ ಅದರಲ್ಲಿ ಎಳ್ಳಷ್ಟು ತೃಪ್ತಿಯಿಲ್ಲ. ದಿವಂಗತ ಡಾ. ಸನ್ ಯೆತ್ ಸೇನರ ತತ್ವತ್ರಯವನ್ನು ಕುಮಿಂಟಾಂಗ್ ಸರಕಾರವು ಸರಿಯಾಗಿ ಆಚರಿಸುತ್ತಿಲ್ಲ. ಆದರಿಂದಲೇ ಕಮ್ಯುನಿಸ್ಟರು ಮತ್ತು ಅವರ ಬೆಂಬಲಕ್ಕೆ ನಿಂತ ಸಾಮಾನ್ಯಜನರು ಆ ತತ್ವಗಳ ಆಚರಣೆಯನ್ನು ತಾವು ಮಾಡುವೆವೆಂದು ಸಾರಿ ಚಿಯಾಂಗರ ವಿರುದ್ಧ ಖಡ್ಗವನ್ನು ಜಡಿದು ನಿಂತಿದ್ದಾರೆ. ಇತ್ತೀಚೆಗೆ ಚೀನಕ್ಕೆ ಹೋಗಿ ಬಂದ ಅನೇಕ ವಿದೇಶೀಯರಿಗೆ ವಸ್ತುಸ್ಥಿತಿಯ ಅರಿವು ಚೆನ್ನಾಗಿ ಆಗಿದೆ. ಕುಮಿಂಟಾಂಗ ಆಡಳಿತದಲ್ಲಿ ಚೀನೀ ರೈತನ ದುಃಸ್ಥಿತಿ ಎಳ್ಳಷ್ಟೂ ಸುಧಾರಿಸಲಿಲ್ಲ. ಅದರ ಬದಲು ದಿನೇ ದಿನೇ ಮತ್ತಷ್ಟು ಅಧೋಗತಿಯನ್ನು ಹಿಡಿಯುತ್ತ ಹೋಯಿತು. ರೈತ ಮತ್ತು ಜಮೀನುದಾರರ ನಡುವಿನ ತಂಟೆಯನ್ನು ಬಗೆಹರಿಸಲು ಕಮ್ಯುನಿಸ್ಟರು ಬಹಳ ಸಾಹಸ ಮಾಡಿ ಅವರ ಆಡಳಿತೆಯಲ್ಲಿರುವ ಪ್ರದೇಶಗಳಲ್ಲಿ ಅನೇಕ ಯಶಸ್ವಿ ಸುಧಾರಣೆಗಳನ್ನು ಮಾಡಿರುತ್ತಾರೆ. ಅದರಿಂದ ಜಮೀನುದಾರರಿಗೂ ಒಕ್ಕಲಿಗರಿಗೂ ತಂತಮ್ಮ ಹಿತಸಂಬಂಧಗಳ ಬಗ್ಗೆ ಸರಕಾರದ ಖಾತ್ರಿ ಸಿಕ್ಕಿದಂತಾಗಿ ಕಮ್ಯುನಿಸ್ಟ ಸರಕಾರಕ್ಕೆ ಅವರ ಬೆಂಬಲ ಒಮ್ಮಿಂದೊಮ್ಮೆ ದೊರೆಯಿತು.

ಚಿಯಾಂಗರ ಮೊಂಡತನ

ಅಧ್ಯಕ್ಷ ಚಿಯಾಂಗ ಕೈಶೇಕರು ಕೇವಲ ಸ್ವಾರ್ಥಿಗಳಷ್ಟೇ ಅಲ್ಲದೆ ಮೊಂಡರೂ ಹೌದು. ಅವರ ಭಯಪ್ರದರ್ಶನದ ಪರಿಣಾಮವಾಗಿ ವಿರುದ್ಧ ಪಕ್ಷಗಳ ಚಟುವಟಿಕೆಗಳೆಲ್ಲ ಗುಪ್ತವಾಗಿ ನಡೆಯುವಂತಾಯಿತು. ಪ್ರಗತಿಶೀಲ ಕುಮಿಂಟಾಂಗ ಗೆಳೆಯರ ಕೂಟ, ಪ್ರಜಾಸತ್ತಾ ಸಂಘ ಮುಂತಾದ ಪಕ್ಷಗಳ ಚಟುವಟಿಕೆ ಇಂದು ಹೀಗೆಯೇ ಸಾಗಿದೆ. ತಾವು ಉಗ್ರವಾಗಿ ಬಹಿಷ್ಕರಿಸಿದ ಎಲ್ಲರನ್ನೂ ಕಮ್ಯುನಿಸ್ಟರೆಂದು ಶಪಿಸಿ ಬಿಡುವುದು ಚಿಯಾಂಗರ ನಿರ್ಲಜ್ಜ ಮಿಥ್ಯಾಲಾಪವೇ ಸೈ, ಎಂದು ಈಗ ಆರುತಿಂಗಳ ಹಿಂದೆಯೇ ಚಿಯಾಂಗರ ಪಕ್ಷವನ್ನು ಬಿಟ್ಟು ಅಮೇರಿಕಕ್ಕೆ ಹೊರಟು ಹೋದ ಜನರಲ್ ಫೆಂಗಯು ಶ್ಯಾಂಗನು "ನೇಶನ್" ಪತ್ರಿಕೆಯಲ್ಲಿ ಬರೆಯುತ್ತಾನೆ. ಅಲ್ಲದೆ, ಚಿಯಾಂಗರ ಅಧೋಗತಿ ನಿಶ್ಚಿತವೆಂದೂ ಅವನು ಭವಿಷ್ಯ ನುಡಿದುಬಿಟ್ಟಿದ್ದಾನೆ. ಚಿಯಾಂಗರಿಗೆ ಜನರ ಬೆಂಬಲದ ಗುಟ್ಟೇ ಗೊತ್ತಿಲ್ಲ. ಕುಮಿಂಟಾಂಗ ಸರಕಾರ ಮೊದಲು ಬಗ್ಗುಬಡಿದ ಉತ್ತರದ ಪಾಳೆಯಗಾರರಂತೆ ಚಿಯಾಂಗರಾದರೂ ಸ್ವಶಕ್ತಿಪೋಷಣೆಯಲ್ಲಿ ಮಾತ್ರ ನಂಬಿಗೆಯುಳ್ಳವರು. ತಮ್ಮ ಇಷ್ಟಕ್ಕೆ ಬರದ ಯಾವ ಶಿಷ್ಯ ಮತ್ತು ಬಲಿಷ್ಠ ಅಧಿಕಾರಿಯನ್ನಾದರೂ ಹಿಂದೆಮುಂದೆ ನೋಡದೆ ಸಾರ್ವಜನಿಕವಾಗಿ ಗುಂಡಿನಿಂದ ಸುಡಿಸಿ ಬಿಡುವ ಹಿಟ್ಲರೀ ಪ್ರವೃತ್ತಿ ಅವರದು. ಎಂಥ ಗೆಳೆಯರ ಹಿತೋಕ್ತಿಯನ್ನೂ ಕಾರ್ಯತಃ ಆಚರಿಸುವ ಔದಾರ್ಯ, ಬುದ್ಧಿಮತ್ತೆ ಅವರಿಗಿಲ್ಲ. ತಮ್ಮ ಸೈನ್ಯದಲ್ಲೇ ಸ್ವತಃ ತಮ್ಮ ಕೈ ಕೆಳಗಿರುವ ವಿಭಾಗವೊಂದು … ಅಲ್ಲದ, … ನೋಟೀಸು … ದವರಿಗೆ ವಿಶೇಷ ಸವಲತ್ತುಗಳನ್ನು ಕೊಟ್ಟು ಜೊತೆಯ ಸೇನಾಪತಿಗಳ ಕೈಕೆಳಗಿನ ಸೈನಿಕರಿಗೆ ಸೊನ್ನೆ ಸುತ್ತುವ ಪಂಕ್ತಿಭೇದವನ್ನು ಕೂಡ ಅವರು ಮಾಡಿರುವರೆಂದು ಸುದ್ದಿ. ಇದರಿಂದ ಅವರ ಸೇನಾಪತಿಗಳು ಮತ್ತು ಸೈನಿಕರಿಗೇ ಅವರಲ್ಲಿ ಅಪ್ರೀತಿಯುಂಟಾಗುವಂತಾಗಿದೆ. ಈ ಸ್ವಾರ್ಥಪರತೆ ಅವರಿಗೆ ಶಲ್ಯವಾಗಿ ಪರಿಣಮಿಸದೆ ಸುಮ್ಮನೆ ಉಳಿದೀತೇ?

ಯುದ್ಧಕಲಾನಭಿಜ್ಞತೆ

ಸೈನಿಕರ ಅಪ್ರಿಯತೆಗೆ ಚಿಯಾಂಗರ ಸ್ವಾರ್ಥ ಮತ್ತು ಅವಿವೇಕ ಕಾರಣವಾದುದರ ಪರಿಣಾಮವಾಗಿ ಲಂಚಗುಳಿತನ, ಅವಿಧೇಯತೆ, ಕಾಪಟ್ಯ, ದ್ರೋಹ ಇವು ಅವರಲ್ಲಿ ತಲೆಹಾಕಿದವು. ಇದಲ್ಲದೆ ಸೈನಿಕರ ಯೋಗ್ಯತೆಗಿಂತ ಸೇನಾಪತಿಯ ಅತಿವಿಧೇಯತೆಗೇ ಚಿಯಾಂಗರು ಹೆಚ್ಚು ಮಹತ್ವ ಕೊಡುತ್ತಾರೆ. ಮತ್ತು ಸೈನಿಕರನ್ನು ಭರತಿಮಾಡುವ ಕ್ರಮವಾದರೂ ಅನಾಗರಿಕವೇ ಆಗಿದೆ. ಅಧಿಕಾರಿಗಳನ್ನು ಹಳ್ಳಿಗಳಿಗೆ ನುಗ್ಗಿಸಿ, ಅಲ್ಲಿಯ ಒಕ್ಕಲಿಗರನ್ನು ಬಲಾತ್ಕಾರದಿಂದ ರೈಲು ಮೋಟಾರು ಮುಂತಾದ ವಾಹನಗಳಲ್ಲಿ ಹೇರಿ ಬೇಡಿಹಾಕಿ ಕರೆದುಕೊಂಡು ಬಂದು, ಅವರಿಗೆ ಅಲ್ಪ ಕಾಲಿಕ ಇಲ್ಲವೆ ಶೂನ್ಯ ಶಿಕ್ಷಣ ಕೊಟ್ಟು ಅಸಜ್ಜಿತ ಸ್ಥಿತಿಯಲ್ಲಿ ಗುಂಡಿನ ದೆವರಿಕೆ ಹಾಕಿ ರಣರಂಗಕ್ಕೆ ಅಟ್ಟುವುದು. ಅವರು ಎದುರಾಳುಗಳಿಟ್ಟ ಆಮಿಷಕ್ಕೆ ಬಹುಬೇಗ ಬಲಿಯಾಗಿ ಅಸಜ್ಜಿತರಿರಲಿ, ಸುಸಜ್ಜಿತರಿರಲಿ,—ನೇರವಾಗಿ ಅತ್ತಕಡೆ ಸೇರಿಬಿಡುವರು. ಹೀಗಾಗಿ ಅಮೇರಿಕ ಮೇಲಿಂದ ಮೇಲೆ ಕೊಡುತ್ತ ಬಂದ ಅಪಾರ ಧನ ಮತ್ತು ಶಸ್ತ್ರಾಸ್ತ್ರಗಳಲ್ಲಿ ಎಷ್ಟೋ ಅಂಶ ಕಳ್ಳಪೇಟೆಯ ಮೂಲಕ ಮಾತ್ರವಲ್ಲದೆ, ಈ ಪ್ರಕಾರ ಕಳ್ಳ ಶಿಪಾಯಿಗಳ ದ್ರೋಹದಿಂದಲೂ ಕಮ್ಯುನಿಸ್ಟರ ಕೈಗೆ ಹೋಗುವಂತಾಗಿದೆ ಯೋಧರಿಗೆ ತಾವು ಯಾತ್ರದಕ್ಕಾಗಿ ಜೀವತೆರೆಬೇಕಾಗಿದೆಯೆಂಬ ಅರಿವೇ ಇಲ್ಲದಾಗ ಅವರಿಂದ ಪ್ರಾಮಾಣಿಕತೆಯನ್ನು ಹೇಗೆ ಅಪೇಕ್ಷಿಸಲು ಸಾಧ್ಯ? ಇದು ಚಿಯಾಂಗರಿಗೆ ಇನ್ನೂ ಬುದ್ಧಿಗತವಾಗಿಲ್ಲ. ಇದರ ಮೇಲೆ, ಚಿಯಾಂಗರ ಸೇನಾಪತಿಗಳ ವ್ಯೂಹರಚನೆ, ಆಕ್ರಮಣ ವ್ಯವಸ್ಥೆ ದಾಳಿಯ ಪದ್ಧತಿ ಇವುಗಳಲ್ಲಿ ಅನೇಕ ತಾಂತ್ರಿಕ ನ್ಯೂನತೆಗಳಿವೆ. ಇವರ ಜೊತೆಗಿದ್ದ ಅಮೇರಿಕನ್ ಮುತ್ಸದ್ದಿ ಸ್ಟಿಲ್‌ವೆಲ್ಲರ ಸುದೀರ್ಘ ವರದಿಯನ್ನೋದಿದರೆ ಈಯೆಲ್ಲ ಅಸ್ತವ್ಯಸ್ತತೆಗಳ ಪೂರ್ಣ ಪರಿಚಯವಾಗುವುದು. ಇವರ ಸೇನಾಪತಿಗಳು ಪಟ್ಟಣಗಳನ್ನೇ ಹಿಡಿಯುತ್ತ ಹೋಗುವರು. ವಿಶಾಲ ಪ್ರದೇಶವುಳ್ಳ ಚೀನದ ಜಿಲ್ಹೆ ಜಿಲ್ಹೆಗಳ ಪಟ್ಟಣೇತರ ಭಾಗಗಳಲ್ಲಿ ಕಮ್ಯುನಿಸ್ಟರು ತುಂಬಿಕೊಂಡು ಹಠಾತ್ತಾಗಿ ಇವರ ಠಾಣೆಯನ್ನು ಸುತ್ತಲಿನ ಜಗದಿಂದಬೇರ್ಪಡಿಸಿ, ನಿಂತಲ್ಲೇ ಇವರು ಕಾರಾವಾಸವನ್ನು ಅನುಭವಿಸುವಂತೆ ಅನೇಕ ಸಲ ಮಾಡಲಾಗಿದೆ. ಮತ್ತೂ ಒಂದು ಮೋಜಿದೆ: ಶತ್ರುಗಳು ಆಕಾಶದಿಂದ ದಾಳಿಮಾಡ ಬಂದಾಗ ಕವಚಿಮಲಗುವದಿಲ್ಲವೇಕೆಂದು ಅಮೇರಿಕದ ಸೇನಾಪತಿಗಳು ಕೇಳಿದರೆ, "ಚೀನೀ ಶಿಪಾಯಿಗೆ ಕವಚಿ ಮಲಗಿ ಯುದ್ಧಮಾಡಲು ಬರದು, ಸೆಟೆದುನಿಂತ ಪ್ರಾಣಾರ್ಪಣ ಮಾಡುವುದೊಂದನ್ನೇ ಅವನು ಬಲ್ಲ" ಎಂದು ಒಬ್ಬ ಚೀನೀ ಸೇನಾಪತಿ ಉತ್ತರ ಕೊಟ್ಟನಂತೆ!

ತ್ರಿಶಂಕುಸ್ವರ್ಗ

ಅಮೇರಿಕದ ಸಂಯುಕ್ತ ಸಂಸ್ಥಾನವು ಚೀನವು ರಶಿಯದ ವಿಸ್ತರಣದ ವಿರುದ್ಧ ಒಂದು ಅಡ್ಡಗೋಡೆಯಾಗಬಹುದೆಂಬ ಆಶೆಯಿಂದ ಅದಕ್ಕೆ ಮೊದಲಿಂದ ಸಹಾಯಮಾಡುತ್ತಲೇ ಬಂದಿತ್ತು. ಆ ಪ್ರಕಾರ ಮೊನ್ನಿನ ಮಹಾಯುದ್ಧದಲ್ಲಿ ೧,೪೬೯, ೪೦೦,೦೦೦ ಡಾಲರುಗಳನ್ನು ಸಾಲಕೊಟ್ಟಿತು. ಇಷ್ಟಲ್ಲದೆ ವಿಜಯದಿನಾಚರಣೆಯನಂತರ ಸಂ. ರಾ. ಸಂಘದ ಸಹಾಯ ಕೂಡಿಸಿ ಚೀನೀಸಹಾಯಕ ಕಾಯದೆ ಮೇರೆಗೆ ಮತ್ತೆ ೫೪೧, ೯೦೦, ೦೦೦ ಡಾಲರುಗಳ ನೆರವನ್ನಿತ್ತಿತು. ಇದರೊಟ್ಟಿಗೆ ೯೪ ಯುದ್ಧನೌಕೆ ಮುಂತಾದ ೨,೦೨೪, ೮೦೦೦, ೦೦೦ ಡಾಲರುಗಳಷ್ಟು ಬೆಲೆ ಬಾಳುವ ಸಾಮುಗ್ರಿಗಳನ್ನೂ ಅಮೇರಿಕ ಚೀನಕ್ಕೆ ಸಲ್ಲಿಸಿತು. ಈ ಸಹಾಯವೆಲ್ಲ ಹೋಯಿತು. ಚಿಯಾಂಗರಿಗೆ ವೈಯಕ್ತಿಕ ಖರ್ಚುಗಳು ಬಹಳ. ಗುಪ್ತಚಾರ ದಲಗಳನ್ನು ಇಟ್ಟುಕೊಳ್ಳುವುದು, ಹಟಮಾರಿ ಅಧಿಕಾರಿಗ… "ಬ… …ಗ "ಖುಶಿ" ಅಥವಾ "…ಸು" ಕೊಡುವುದು ಮುಂತಾದ ಹಲವಾರು ಕೆಲಸಗಳಿಗೆ ಅಪಾರ ಧನ ವ್ಯಯವಾಗುವುದು. ಅಲ್ಲದೆ ಸುಮಾರು ೪೦ ಕೋಟಿ ಜನಸಂಖ್ಯೆಯುಳ್ಳ ಚೀನ ಶಾಂತಿಕಾಲದಲ್ಲಿಯೇ ೫೩೦ ಸಾವಿರ ಟನ್ ಗೋದಿಯನ್ನೂ ೮೫೦ ಸಾವಿರ ಟನ್ ಅಕ್ಕಿಯನ್ನೂ ತರಿಸಿಕೊಳ್ಳಬೇಕಾಗಿರುವಾಗ ಯುದ್ಧಕಾಲದ ಆಹಾರಸಾಮುಗ್ರಿಗಳ ಕೊರತೆಯನ್ನು ವರ್ಣಿಸಲು ಸಾಧ್ಯವೇ? ಇದಲ್ಲದೆ, ಕಲ್ಪನಾತೀತ ಅತಿಪ್ರಸರಣ ರಾಜ್ಯದಲ್ಲಿ ತಾಂಡವವಾಡುತ್ತಿದೆ. ಅನ್ನವಸ್ತ್ರಕ್ಕೆ ಸೊನ್ನೆ ಬಂದುದರಿಂದ ಜನರು ರಾಷ್ಟ್ರೀಯ ಸರಕಾರವನ್ನು ಶಪಿಸುತ್ತಿದ್ದಾರೆ. ಇಂಥ ದುರ್ಧರ ಪರಿಸ್ಥಿತಿಯಲ್ಲಿ ಇಂದ್ರನು ಕೆಳಗೆ ತಳ್ಳಿದರೂ ಮತ್ತೆ ಮೇಲೆ ತ್ರಿಶಂಕುವಿನ ರಥವನ್ನು ವಿಶ್ವಾಮಿತ್ರ ಮೇಲೆ ಎಸೆದಂತೆ ಚಿಯಾಂಗರು ಹಿಂಜರಿದ ತಮ್ಮ ದಲಗಳನ್ನು ಪುನಃಪುನಃ ರಣರಂಗಕ್ಕೆ ನೂಕುತ್ತಿದ್ದಾರೆ. ಒಮ್ಮೆ ಅವರು ಪರಿಸ್ಥಿತಿಯ ದುರ್ಧರತೆಗೆ ಬಾಗಿ ರಾಜೀನಾಮೆ ಕೊಡುವರೆಂದೂ ಸುದ್ದಿಯಿದ್ದಿತು. ಆದರದಕ್ಕಿನ್ನೂ ಪುಟ ದೊರೆತಿಲ್ಲ, ಅಮೇರಿಕನ್ನರು ದೋಲಾಯಮಾನ ಚಿತ್ತದಿಂದ ಇತ್ತ ನೋಡುತ್ತಿದ್ದಾರೆ. … ಜೊತೆಗೆ ಮತ್ತೂ ಹಾಕಿ … ಬೇಡವೆಂಬ ವಿವೇಕ ಹಿಡಿದು … ಹೆಂಡತಿಯ ಯಾಚನೆಗೆ … ಅಷ್ಟೇನೂ ಪುರಸ್ಕಾರ ಕೊಡಲಿಲ್ಲ. … ನಿಸ್ಟರು ವಿಜಯಿಗಳಾದರೆ … ವ್ಯಾಪಾರ ವ್ಯವಹಾರದ ಸಂಬಂಧವಾಗಿ … ಸೌಹಾರ್ದಗಳನ್ನು ಇಟ್ಟುಕೊ… ಎಂದು ಅಮೇರಿಕದ ಮುತ್ಸದ್ದಿಗಳು … ಗರನ್ನು ಕೈಬಿಡುವ ವಿಚಾರ ಸರಣಿ … ಆಲೋಚಿಸಹತ್ತಿದ್ದಾರೆ! "… ನಂಟರೆಷ್ಟು ಹಿತರು" ಎಂಬ … ಚಿಯಾಂಗರಿಂದು ಕಲಿಯಬೇಕಾಯಿತು.

ಡಾ. ಸನ್ ಫೋ ಅವರ ಯುದ್ಧ… ಮಂತ್ರಿ ಮಂಡಲ ರಾಜೀನಾಮೆ… ಯಾಗಿದೆ ಎಂದು ಈಗ ತಿಳಿಯು… ಹೊಸ ಮಂತ್ರಿಮಂಡಲವು ಗೌರವ… ವಾದ ಶಾಂತಿ ಸ್ಥಾಪನೆ ಶಕ್ಯವಾಗುವ ವ… ಯುದ್ಧ ಮಾಡತಕ್ಕದ್ದೆಂಬ ನಿರ್ಧಾರ… ದ್ದಾಗಿದೆ ಎಂದು ಅವರು ಸಾರಿದ್ದಾರೆ. ಚಿಯಾಂ… ಗರು ಮತ್ತೆ ಮತ್ತೆ ಸೋಲುಗಳನ್ನು … ರಿಸುತ್ತಿದ್ದು, ಆ ಸಂಬಂಧವಾಗಿ ತಮ್ಮ ಸೇನಾ… ಪತಿಗಳೊಡನೆ ಚರ್ಚಿಸಿದರೆಂದು ಸು… ಕಮ್ಯುನಿಸ್ಟರು ಪೀಪಿಂಗಿನ ಉಪನಗರ… ಹಾಯಶಾನನ್ನು ಇತ್ತೀಚೆಗೆ ಆಕ್ರಮಿಸಿ… ಪೀಪಿಂಗ್–ಟೀಂಟ್ಸಿನ್ ರೇಲ್ವೆ ಮಾರ್ಗ… ಭೇದಿಸಿದ್ದಾರೆ. ರುದ್ರಗಣಗಳಂತೆ ಮುಂದೊ… ಬರುವ ಅವರ ವಿಜಯತಾಂಡವವು ರಾಷ್ಟ್ರೀಯ ಸೇನೆಯನ್ನು ದಿಕ್ಕುಗೆಡಿಸಿದೆ. "… ಚ್ಛತ್ಯುಪರಿಚದಶಾ ಚಕ್ರನೇಮಿ ಕ್ರಮೇಣ" ಎಂಬ ಕಾಳಿದಾಸೋಕ್ತಿ ನಿಜವಾಗುವ ಪ್ರಸಂಗ ಬರಬಹುದೇ?

— ಅರ್ಜುನ

ಡಚ್ಚರ ದ್ರೋಹ

ಜಾವಾ ಮತ್ತು ಸುಮಾತ್ರಗಳಲ್ಲಿ ಇಂಡೊನೇಶಿಯ ಪ್ರಜಾರಾಜ್ಯದ ಪ್ರದೇಶದ ಮೇಲೆ ಡಚ್ಚರೀಗ ಆಕಸ್ಮಿಕವಾಗಿ ದಾಳಿ … ಜೋಗ್‌ಜಕಾರ್ತದಲ್ಲಿ ಪ್ರಜಾರಾಜ್ಯದ ಮು… ಮುಂತಾದ ಅಧಿಕಾರಿಗಳನ್ನು ಸೆರೆ ಹಿಡಿದ… ದಾಗಿ ಸುದ್ದಿ. ಇದರಿಂದ ಸಂಯುಕ್ತ ರಾ… ಸಂಘದ ಸದಸ್ಯವರ್ಗದಲ್ಲಿ ಅಶಾಂತಿ ಉದ್ವೇ… ಗಳುಂಟಾಗಿವೆ. ಬಟೇವಿಯದಲ್ಲಿರುವ ಸಂ. ರಾ. ಸಂಘದ ಸತ್ಸಹಾಯಸಮಿತಿ… ೧೧ ತಿಂಗಳ ಹಿಂದಿನ ರೆನ್‌ವಿಲ್ ಒಪ್ಪಂದವ… ಡಚ್ಚರು ಭಂಗಿಸಿದರೆಂದು ಆರೋಪಿಸಿದೆ.

ಅನೇಕ ಕಡೆಗಳಲ್ಲಿ ಡಚ್ಚರ ಸೈನ್ಯ… ಬಂಡಾಯವೆದ್ದಿರುವದೆಂದೂ ಜನತಾ ಸೈ… ದಲದವರು ಡಚ್ಚರ ಸೈನಿಕರನ್ನು ಜೋ… ಕಾರ್ತದಿಂದ ೯ ಮೈಲು ದೂರ ಹಿಂದೂಡಿ… ರೆಂದೂ ಜಾವಾದಲ್ಲಿಯ ಗುಪ್ತ ಆಕಾಶ… ಯಿಂದ ತಿಳಿದು ಬರುತ್ತದೆ.

ಜಯಪುರದ ಕಾಂಗ್ರೆಸ್ ಸಮ್ಮೇಲನದಲ್ಲಿ ಪಂಡಿತ ನೆಹರು ಈ ಸಮಾಚಾರವನ್ನು … ಕಾಂಗ್ರೆಸ್ಸು ಏಶಿಯದಿಂದ ವಿದೇಶೀಯ … ಯನ್ನು ಕಿತ್ತೊಗೆವ ಪ್ರತಿಜ್ಞೆ ಮಾಡಿ… ಡಚ್ಚರ ಕೃತ್ಯ ಸಂ. ರಾ. ಸಂಘದ ತತ್ವ… ವಿರುದ್ಧವಾಗಿವೆ, ಡಚ್ಚರ ಈ ಕೃತ್ಯ… ಹಿಂದುಸ್ಥಾನ ಮತ್ತು ಇತರ ಏಶಿಯದ … ಗಳಲ್ಲಿ ಗಂಭೀರ ಪರಿಣಾಮವನ್ನುಂಟು… ದಿರದು.; ನಾವೆಲ್ಲ ಇದಕ್ಕೆ ತಕ್ಕ ಮ… ಆಲೋಚನೆ ಮಾಡುವಂತಾಗಿದೆ ಎಂದು … ಸರಕಾರಕ್ಕೆ ಬಲವಾದ ಎಚ್ಚರಿ… ತ್ತರು.

ಡಚ್ಚರ ಈ ಆಕಸ್ಮಿಕ ದಾಳಿಯ … ಕಾರ್ಯವನ್ನು ಚರ್ಚಿಸಲು … ಭದ್ರತಾ ಮಂಡಲದ ವಿಶೇಷ ಸಭೆ … ನಲ್ಲಿ ಸೇರಿ ಕೋರಂ ಇಲ್ಲದೆ ಮುಂದೂ… ಅಮೇರಿಕದ ಇಂಡಿಯಾ ಲೀಗ್ ಅಧ್ಯ… ಶ್ರೀ ಜೆ ಜೆ. ಸಿಂಗರು ಅಧ್ಯಕ್ಷ ಟ್ರೂಮ… ಮಾರ್ಶಲ್ ಯೋಜನೆಯ ಸಹಾಯ… ಡಚ್ಚರಿಗೆ ಕೊಡಬಾರದೆಂದು ಮನ… ಕೊಂಡಿದ್ದಾರೆ. ಅಲ್ಲದೆ ಅರಬ ಲೀಗ… ಯುದ್ಧವನ್ನು ಈಗಿಂದೀಗ ನಿಲ್ಲಿಸ… ಪಿಸಬೇಕೆಂದು ಭದ್ರತಾ ಮಂಡಲವ… ಕೊಂಡಿದೆ. ಈ ಸಂದರ್ಭದಲ್ಲಿ … ಮಂಡಲ ನ್ಯಾಯವಾದ ಆಜ್ಞೆಯನ್ನು … ಡಚ್ಚರನ್ನು ಪ್ರತಿಬಂಧಿಸದಿದ್ದರೆ … ಒಮ್ಮೆಲೇ ಕೆಳಗೆ ಬೀಳಲಿದೆ… ಮಂಡಲಕ್ಕಿದೊಂದು … ವೆಂದು ಬ್ರಿಟನ್ನಿನಲ್ಲಿಯ … ಡಾ. … ಪ್ರಜಾರಾಜ್ಯದ ಪ್ರತಿನಿಧಿ … ಬ್ರಾಂಡಿಯೋ ಸಾರಿದ್ದಾರೆ.

ಧರ್ಮ ಹಾಗು ರಾಷ್ಟ್ರೀಯತ್ವ

ಬರೆದವರು :— ಶ್ರೀ ಅರವಿಂದರು.
ಅನುವಾದಕರು :— ಶಿ. ಸಿ. ಲಿಂಗಣ್ಣ.
ಪ್ರಕಾಶಕರು :— ಬಾಳಾಚಾರ್ಯ ಗುರಾಚಾರ್ಯ ಅವಧಾನಿ. ಮಂಗಳವ ಪೇಟೆ, ಧಾರವಾಡ
ಬೆಲೆ: ೧—೪—೦ ಪುಟ ೧೩೪.

ಶ್ರೀ ಅರವಿಂದರ ಈ ಪ್ರಬಂಧದಲ್ಲಿ ಕಾಣುವ ವಿಚಾರಗಳು ಅತ್ಯಂತ ಶ್ರೇಷ್ಠವಾದವಾಗಿವೆ. ಅವರ ವಿಚಾರಸರಣಿಯಲ್ಲಿ ಮನುಷ್ಯನನ್ನು ಕತ್ತಲೆಯಿಂದ ಬಿಡಿಸಿ ಬೆಳಕಿನ ಮಾರ್ಗವನ್ನು ತೋರಿಸುವ ಶಕ್ತಿಯಿದೆ, ನವೀನತೆಯಿದೆ. ನಾವು ಇದನ್ನು ಓದುತ್ತಾ ಹೋದರೆ, ಇದಕ್ಕಿಂತಲೂ ಬೇರೆಯಾದ ಸತ್ಯಯುತವಾದ ಒಂದು ಪದಾರ್ಥ ಲೋಕದಲ್ಲಿರುವಂತೆ ಭಾಸವಾಗುವದು. ಅವರ ಮಾತುಗಳು ಇಡೀ ಜನಾಂಗಕ್ಕೆ ಬಂದು ಹೊಸ ಬಗೆಯ ದೃಷ್ಟಿಯನ್ನು ಕೊಡುತ್ತವೆ. ಜಾತಿ, ಪ್ರಾಂತ, ಮತ, ಧರ್ಮ ಇವುಗಳ ತೊಡಕನ್ನು ಬಿಡಿಸುವ ಒಂದು ಯೋಗ್ಯವಾದ ಹಾದಿಯನ್ನು ಅವರು ಇಲ್ಲಿ ಕೊಟ್ಟಿದ್ದಾರೆ. ಮತ್ತು ನಮ್ಮ ಹಿಂದಿನ, ಇಂದಿನ ಆರ್ಯಧರ್ಮ, ಸಂಸ್ಕೃತಿ, ರಾಷ್ಟ್ರೀಯತೆ ಇವೆಲ್ಲವರ ಬಗ್ಗೆ ಶ್ರೀ ಅರವಿಂದರು ಇದರಲ್ಲಿ ಒಳ್ಳೆಯ ವಿವರಣೆಯನ್ನು ಸಾರಿದ್ದಾರೆ. ಶ್ರೀಮಾನ್ ಸಿ. ಲಿಂಗಣ್ಣನವರು ಈ ಪ್ರಬಂಧವನ್ನು ಕನ್ನಡಕ್ಕೆ ಅನುವಾದಿಸಿ [illegible]ಗರಿಗೆ ತುಂಬಾ ಉಪಕಾರ ಮಾಡಿದ್ದಾರೆ. ಇದರಲ್ಲಿ ಸಂಸ್ಕೃತ ಶಬ್ದಗಳ ಪ್ರಯೋಗ ಬಹಳವಿದ್ದರೂ ಅವರ ಅರ್ಥ ವಿವರಣೆಯನ್ನು ಅದರಲ್ಲಿ ಕೊಟ್ಟಿದ್ದರಿಂದ ಓದುವವರಿಗೆ ಅಷ್ಟು ಕಷ್ಟವಾಗುವದಿಲ್ಲ. ಶ್ರೀಯುತರಿಂದ ಇನ್ನೂ ಇಂತಹ ಅನೇಕ [illegible] ಬರೆಯಲಿ [illegible] ಹಾರೈಸೋಣ.

ಬದುಕಿನ ಬಣ್ಣ

ಬರೆದವರು, ಶ್ರೀ [illegible]
ಪ್ರಕಾಶಕರು, ಸಹಿತ್ಯ[illegible] ಹುಬ್ಬಳ್ಳಿ. ಪುಟ [illegible] ಬೆಲೆ ರೂ. ೧||.

ಬದುಕಿನ ದಾರಿಯೊಂದು [illegible] ಸಾಹಿತ್ಯವು [illegible] ಪ್ರತಿಬಿಂಬ ಸಂಬಂಧವನ್ನು [illegible] Dignity of Labour [illegible] ಗೌರವವನ್ನು [illegible] ಕಥಾನಕ [illegible]

ಗಾಂಧೀ ಕಥಾವಳಿ

ಬರೆದವರು :— ಜಿ. ರಾ. ಶಿ. ಚಂದ್ರಶೇಖರ, ಪ್ರಕಾಶಕರು :— ಶ್ರೀ ರಂಗನಾಥ ರಾಮಚಂದ್ರ ದಿವಾಕರ. ಹಿಂದ್ ಕಿತಾಬ್ ಲಿಮಿಟೆಡ್ ಮುಂಬಯಿ: ಬೆಂಗಳೂರು ಬೆಲೆ:— ೧ ರೂ. ಪುಟ ೬೪.

ಈ ಗಾಂಧೀ ಕಥಾವಳಿಯು ಗಾಂಧೀಜಿಯು ಒಳ್ಳೆ ಮನಸ್ಸಿನ ಪರಿಚಯ ಎಷ್ಟು ಬರುವದು. ಇದು ಕಥೆಯಂತೆ ಇದ್ದು ಸರಿಯಾದ ಮಕ್ಕಳಿಗೂ ದೊಡ್ಡವರಿಗೂ ಕೂಡಿಯೇ ಮನಸ್ಸನ್ನು ಸೆಳೆಯುವಂತೆ ಬೋಧಿಸುತ್ತದೆ. ಇದರ ಪ್ರತಿಯೊಂದು ಕಥೆಯಲ್ಲಿಯೂ ಗಾಂಧೀಜಿಯವರ ಜೀವನ, ನಿಸ್ವಾರ್ಥ, ಕಾರ್ಯ ತತ್ಪರತೆ, ದಯಾಳುತ್ವ, ಎಂಥವರನ್ನೂ ಅವರ ಮನಸ್ಸನ್ನು ಕೂಡಲೇ ಮಾತಿನಿಂದಲೇ ತಿರುಗಿಸಿ ಮಿಡುಕುವ ಶಕ್ತಿ ಇವೆಲ್ಲವೂ ಅಡಕವಾಗಿವೆ. ಅಲ್ಲದೆ ಮನುಷ್ಯನಲ್ಲಿ ಚಕ್ರವರ್ತಿ ರಾಜಗೋಪಾಲಾಚಾರಿಯವರು ಹೇಳಿದಂತೆ "ಇಂಥ ನಿಜ ಕತೆಗಳನ್ನು ಯಾರೂ ಬರೆಯದೆ ಹೋದರೆ ದಂತಕತೆಗಳು ಹೆಚ್ಚಾಗಿ ಹಬ್ಬುತ್ತವೆ. ಆದ್ದರಿಂದ ನಿಜವಾದ ಈ ಕಥಾವಳಿಗಾಗಿ ಜನರೆಲ್ಲ ಕೃತಜ್ಞರಾಗಬೇಕು. ಇನ್ನೂ ಅನೇಕ ಇಂತಹ ನಿಜ ಕತೆಗಳು ಹೊರಬೀಳಲೆಂದು ಹಾರೈಸುವಾ.

ಮಹಾತ್ಮರ ಮರಣ

ಬರೆದವರು :— ಜಿ. ಬಿ. ರಾಜಶೇಖರ. ಹಿಂದ್ ಕಿತಾಬ್ಸ್ ಲಿಮಿಟೆಡ್ ಪ್ರೈವೇಟ್, ಬೆಂಗಳೂರು. ಬೆಲೆ [illegible]

ಈ ಪುಸ್ತಕ [illegible] ಗಾಂಧೀ ಮರಣದ ಸಂಬಂಧವಾಗಿ ಅನೇಕ [illegible] ಉದಾಹರಣೆಗಳಿಂದ ಕೂಡಿದ್ದಾಗಿದೆ [illegible] ತಿಳಿದು ಕೊಳ್ಳಬೇಕಾದ [illegible] ಮರಣವೆಂಬುದು [illegible]

ರಾಷ್ಟ್ರವಾಣಿ (ಹೊಸ ಸಾಪ್ತಾಹಿಕ)

ಸಂಪಾದಕರು, [illegible] ಬೆಂಗಳೂರು [illegible]

ಇದರಲ್ಲಿ ಭಾರತದ [illegible] ಸಂಸ್ಕೃತಿಯ [illegible] ಈ ಸಂಕಲನದಲ್ಲಿ ಕಾಣಬರುವದು.

ಪ್ರಭಾತ (ಪತ್ರಿಕೆ)

ಸಂಪಾದಕರು, ಮುದ್ರಕರು, ಪ್ರಕಾಶಕರು, ಶ್ರೀ ಕೆ. ಪಿ. [illegible], ಪ್ರಭಾತ ಕಚೇರಿ, ರಥಬೀದಿ, ಮಂಗಳೂರು. [illegible] ಬೆಲೆ [illegible]

ಸಚಿತ್ರವಾದ ಪ್ರಭಾತದ ಈ ವಿಶೇಷಾಂಕದಲ್ಲಿ ವಿವಿಧ ರುಚಿಯ ಲೇಖನಗಳಿದ್ದು ಹಲವು ಕವಿಗಳೂ ಅದನ್ನು ಬರೆದಿವೆ. ಲೇಖಕರಲ್ಲಿ ಮ. ಗಾಂಧಿಯವರ, ಡಾ. [illegible] ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ ಭಾವಚಿತ್ರಗಳೂ ಶ್ರೀ. ವಿ. ಜಿ. [illegible] ಅವರು ಬರೆದ [illegible] ಚಿತ್ರದ ಛಾಯಾ ಚಿತ್ರವೂ ಮನೋಹರವಾಗಿದೆ.

Karnatak College, Silver Jubilee souvenir

ಸಂಪಾದಕರು ಪ್ರೊ. ಎಲ್. ಎ. [illegible] ಪ್ರೊ. ವ್ಹಿ. ಎಂ. [illegible] ಪುಟಗಳು [illegible] ಬೆಲೆ [illegible]

ಧಾರವಾಡದ ಕರ್ನಾಟಕ ಕಾಲೇಜು [illegible] ಮಹೋತ್ಸವದ ಸ್ಮಾರಕವಾಗಿ [illegible] ಸಂಗ್ರಹ [illegible] ಸಮಗ್ರ ಕಲ್ಪನೆಯು ಇದರಿಂದ [illegible] ಬರುತ್ತದೆ.

ಸಾಧನಾ (ಹೊಸ ಸಾಪ್ತಾಹಿಕ)

ಸಂಪಾದಕರು, ಶ್ರೀ. ಕೆ. [illegible]

ಅರುಣ

ಸಂಪಾದಕರು, ಶ್ರೀ [illegible]

ಸ್ಮಾರಕ ಗ್ರಂಥ

[illegible]

ನಿಬಂಧನೆಗಳು [illegible]

ಪುರೋಹಿತ ಶ್ವಾಸಕಾರಿ
DR. PUROHIT PHARMACY

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟ್" ಪರವಾಗಿ [illegible]

ಗೃಹಿಣಿಯರಿಗೆ ಗಳಿಕೆಯ ಉಪಾಯ

ಗೃಹಿಣಿಯರಾದವರಿಗೆ ಇಷ್ಟೇ ದಿನ ಮನೆಗೆಲಸ ದಲ್ಲಿಯೇ ಕಳೆದು ಹೋಗುವುದು, ಸ್ವತಂತ್ರವಾಗಿ ಗಳಿಸುವ ಅವಕಾಶ ಸಿಗದು ಎಂದು ಇಲ್ಲಿ [illegible] ಮನೆವಾರ್ತೆಯ [illegible] ಹೊಣೆಗಾರಿಕೆಯನ್ನು ಹೊತ್ತು ನಿರ್ವಹಿಸುವ ಗೃಹಿಣಿಯರು [illegible] ಹೇಳುವುದುಂಟು. ಹಳ್ಳಿಯ [illegible] ಜೀವನದ ಪರಿಚಯವಿಲ್ಲದ ಇವರಿಗೆ [illegible] ಸೌಲಭ್ಯ [illegible] ಗೃಹಕಾರ್ಯಗಳ ಸೌಲಭ್ಯ ಪಟ್ಟ [illegible] ಭಾಗದ ಅರಿವೂ ಇರದು. ಇಂಥವರು [illegible] ಉದಾಹರಣೆಯನ್ನು ಪಟ್ಟಣದ [illegible] ಮನೆಗಳಲ್ಲಿ ಇರುವವರನ್ನು ಕೇಳಿಯೂ [illegible] ವುದನ್ನು ತಿದ್ದಿಕೊಳ್ಳಬಹುದಲ್ಲವೆ?

ಅಮೇರಿಕ ಹೊಸದಾಗಿ ಹುಟ್ಟಿ ಬೆಳೆಯುತ್ತಿರುವ ಒಂದು ಜನಾಂಗ ಅಲ್ಲಿ ರೂಢಿ ಪರಂಪರೆ [illegible] ಈಗ ತಾನೆ ರೂಪಿಸಲ್ಪಡುತ್ತಿವೆ. ಅಂಥ [illegible] ಗೃಹಿಣಿಯರು ಮೇಲಿನ ಪ್ರಶ್ನೆಯನ್ನು [illegible] ಉತ್ತರಿಸಲು ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಆ ಸಂಘದಲ್ಲಿ ಹೊಲಿಗೆ, ಕಸೂತಿ, [illegible] ಆರೋಗ್ಯ, ರೋಗನಿದಾನ, ಚಿಕಿತ್ಸೆ, ಪಾಕವಿಧಾನ, ಬೇರೆ ಬೇರೆ ಕೈಗಾರಿಕೆಗಳು ಮುಂತಾದವುಗಳ ಜ್ಞಾನವಿರುವ ಮಹಿಳೆಯರಿದ್ದಾರೆ. ಅವರ ಕೆಲಸವೇನೆಂದರೆ, ಯಾವಳಾದರೊಬ್ಬಳು ತನ್ನ ಕುಟುಂಬದ ಆದಾಯವನ್ನು ಹೆಚ್ಚಿಸಲು ಪ್ರಯತ್ನಿಸಲು ಯಾವುದಾದರೊಂದು ಕಲಾಕೌಶಲವನ್ನು ಅರಿಯಲು ಅಥವಾ ಕಲಿತುದನ್ನು ಪ್ರದರ್ಶಿಸಲು ಇಚ್ಛಿಸಿದ್ದ್ರ, ಅದಕ್ಕೆ ಬೇಕಾದ ಸೌಕರ್ಯಗಳಿಲ್ಲದೆ ತೊಳಲುತ್ತಿದ್ದರೆ ಈ ಸಂಘಕ್ಕೆ ಅವಳು ಅರ್ಜಿ ಹಾಕಿದರೆ ಸಾಕು, ಅವಳಿಗೆ ತಕ್ಕ ಅನುಕೂಲವನ್ನು ಒದಗಿಸಿ ಕೊಡುವರು. ಹೀಗೆ ಈ ಸಂಘ ೬ ಸಾವಿರ ಗರತಿಯರಿಗೆ ಸಹಾಯ ಮಾಡಿದೆ.

ಅಂಗಡಿ ಮತ್ತು ಕಾರಖಾನೆಗಳಲ್ಲಿ ತಯಾರಾಗುವ ಪದಾರ್ಥಗಳಿಗಿಂತ ಮನೆಯಲ್ಲಿ ತಯಾರಾಗುವ ಪದಾರ್ಥಗಳು ಶುಚಿಯಾಗಿಯೂ ರುಚಿಯಾಗಿಯೂ [illegible] ಅಗ್ಗವಾಗಿಯೂ ಇರುವುದರಿಂದ [illegible] ಪಡ್ಡ [illegible] ಅವರಿಗೆ [illegible] ದಿಂದ ಅಪಾರ ಸಹಾಯ ಬರುತ್ತಿದೆ [illegible] ಅವರು ರಶಿಯದವರೆಂತೆಯೇ [illegible] ತೀವ್ರವಾದಿಗಳೂ ಆಗಿರುವರೆಂದೂ [illegible] ಅನೇಕ ಪತ್ರಿಕೆಗಳಲ್ಲಿ ವರದಿ ಮಾಡ [illegible]. ಆದರೆ ಹೀಗೆ ವರದಿ ಮಾಡಲಾದ [illegible] ಯ ಏಶಿಯದ ಕಾಮಿನ್‌ಫಾರ್ಮ್" [illegible] ವನ್ನು ಅತ್ಯಂತ ಕುಶಲರಾದ ಬ್ರಿಟಿಶ್ [illegible] ಗಾರರಿಗೆ ಕೂಡ ಹುಡುಕಲು ಸಾಧ್ಯವಾ [illegible] ರಶಿಯದ ಜನರ [illegible] ಶಸ್ತ್ರಾಸ್ತ್ರಗಳ ಗುಪ್ತ [illegible] ಯವೂ ಹೀಗೆಯೇ ಅವಾಸ್ತವವಾಗಿದೆ. [illegible] ಯ ಏಶಿಯದ ಇಂಡೋಚೀನ ಇಂಡೊ [illegible] ಯುಗಳಲ್ಲಿ ಫ್ರೆಂಚರೂ ಡಚ್ಚರೂ ತಮ್ಮ [illegible] ಎದ್ದಿರುವ ಎಲ್ಲ ರಾಷ್ಟ್ರೀಯ ಆಂದೋ [illegible] ವನ್ನೂ ಕಮ್ಯುನಿಸ್ಟರದೆಂದು ಪ್ರಚಾರ [illegible] ರುವಂತೆ ಚೀನದ ಕಮ್ಯುನಿಸ್ಟರ ಬಗ್ಗ [illegible] ಅಪಪ್ರಚಾರವೇ ಹೆಚ್ಚಾಗಿದೆ. ರಾಷ್ಟ್ರೀ [illegible] ಎಂದು ಹೇಳಿಕೊಳ್ಳುವ ಇಂದಿನ [illegible] ಟಾಂಗ್ ಸರಕಾರದ ರಾಷ್ಟ್ರೀಯತೆಯ [illegible] ದಿರುವ ಪ್ರಸ್ತಾರ್ಥಕ ಚಿತ್ರವನ್ನು ಗಮ [illegible] ದರೆ, ಕಮ್ಯುನಿಸ್ಟರದೆಂದು ಕರೆಯ [illegible] ಚೀನೀ ಒಕ್ಕಲಿಗರ ಆಂದೋಲನದ ನಿಜ [illegible] ದ ಪರಿಚಯವಾಗುವದು.

ಚೀನದ ನಿಜಪರಿಸ್ಥಿತಿ

ಚೀನೀಯರಲ್ಲಿ ಬಹುಸಂಖ್ಯರು ಶಾಂತಿ, ಪ್ರಜಾಪ್ರಭುತ್ವ ಮತ್ತು ಉದಾರವಾದಗಳಲ್ಲಿ ಶ್ರದ್ಧೆಯುಳ್ಳವರು. ಸೂರರಲ್ಲಿ ೯೫ ಜನ ಬುದ್ಧಿವಂತರಿಗೆ ಚೀನದ ಇಂದಿನ ಪರಿಸ್ಥಿತಿಯ ಬಗ್ಗೆ ಅಸಮಾಧಾನವಿದೆ. ಅವರಿಗೆ ಅದರಲ್ಲಿ ಏಳ್ಳಷ್ಟೂ ತೃಪ್ತಿಯಿಲ್ಲ. ದಿವಂಗತ ಡಾ. ಸನ್ ಯತ್ ಸೇನರ ತತ್ವತ್ರಯವನ್ನು ಕುಮಿಂಟಾಂಗ್ ಸರಕಾರವು ಸರಿಯಾಗಿ ಆಚರಿಸುತ್ತಿಲ್ಲ. ಆದರಿಂದಲೇ ಕಮ್ಯುನಿಸ್ಟರು ಮತ್ತು ಅವರ ಬೆಂಬಲಕ್ಕೆ ನಿಂತ ಸಾಮಾನ್ಯಜನರು ಆ ತತ್ವಗಳ ಆಚರಣೆಯನ್ನು ತಾವು ಮಾಡುವೆವೆಂದು ಸಾರಿ ಚಿಯಾಂಗರ ವಿರುದ್ಧ ಖಡ್ಗವನ್ನು ಜಡಿದು ನಿಂತಿದ್ದಾರೆ. ಇತ್ತೀಚೆಗೆ ಚೀನಕ್ಕೆ ಹೋಗಿ ಬಂದ ಅನೇಕ ವಿದೇಶೀಯರು

ಅತಿ ಹೆಂಗಸರಿಗಿಂತ ಹೆಚ್ಚು ಕಳಕಳಿಯಲ್ಲಿ ಸಂತಾನ ನಿಯಂತ್ರಣ ಕೈಗೊಂಡಿದ್ದಾರೆ. ಸಂತಾನ ನಿರೋಧದ ಕಲ್ಪನೆ ಬೆಳೆಯುತ್ತಿದೆ. ಪರಿಶೀಲಕರು ವರದಿ ಮಾಡಿದ್ದಾರೆ. ಇದಕ್ಕೆ ಕಾರಣವೆಂದರೆ ವಿದ್ಯಾರ್ಥಿಯರು ಆಧುನಿಕ ಗರ್ಭನಿರೋಧಕ, ಗರ್ಭವಿನಾಶಕ ಸಾಧನಗಳನ್ನು ಬಳಸಿ ಸಂತಾನವನ್ನು ಹೆಂಗಳ ಹತೋಟಿಯಲ್ಲಿ ಇಟ್ಟುಕೊಳ್ಳಲು ಕಲಿಸಿದ್ದಾರೆ. ಇದನ್ನು ಹಿಂದೀ ಭಾಷೆಯಲ್ಲಿ ಭ್ರೂಣಹತ್ಯೆ ಎನಿಸು ಹೇಳಿ ಅದನ್ನು ಘೋರಪಾತಕವೆಂದು ಗಣಿಸುತ್ತಾರೆ. ಸಂತತಿನಿರೋಧದ ಪಾಪ ಪುಣ್ಯ ವಿವೇಕವು ಅತ್ಯಂತ ಸೂಕ್ಷ್ಮವಾದ ನ್ಯಾಯದೃಷ್ಟಿಗೆ ಮಾತ್ರ ಗೋಚರವಾಗತಕ್ಕದ್ದಾಗಿದೆ. ಕುಟುಂಬದಲ್ಲಿಂದ ತಂದೆ ತಾಯಿಯರ ದುಡಿಮೆಯ ಶಕ್ತಿಗನುಸಾರವಾಗಿ ಮಕ್ಕಳ ಸಂಖ್ಯೆಯನ್ನು ಮಿತಗೊಳಿಸಬೇಕೆಂಬುದು ಅಧುನಿಕವಾದವು. ಹುಟ್ಟಿ ಉಳಿದ ಮಕ್ಕಳ ದೃಷ್ಟಿಯಿಂದ ಬಹುಮುಖ್ಯವಾದದ್ದು ಎಷ್ಟು ಮಕ್ಕಳ ಪಾಲನೆಪೋಷಣೆಗಳನ್ನು ಸಮರ್ಥವಾಗಿ ಮಾಡಲು ತಾಯ್ತಂದೆಯರಿಗೆ ಶಕ್ತಿಯಿದೆಯೋ ಅಷ್ಟನ್ನೇ ಅವರು ಉಳಿಸಿಕೊಳ್ಳುವದು (ಅರ್ಥಾತ್ ಮಕ್ಕಳ ಜೀವ ಪ್ರವೇಶವಾಗದಿರುವ ಪಿಂಡಗಳನ್ನು ಪ್ರಾಥಮಿಕ ದಶೆಯಲ್ಲೇ ನಾಶಮಾಡುವದು) ನ್ಯಾಯವಾದುದು. ಹಾಗಲ್ಲದೆ ಮನುಷ್ಯ ಮವಿಲ್ಲದೆ ಹೋದರೂ (ಅಂಥವರೇ ಜಗತ್ತಿನಲ್ಲಿ ಹೆಚ್ಚು) ಕಾರಣ ವಿಘಟಕ ಸಾಧನಗಳಿಂದ ಬಹುಸಂತಾನವನು ಕಡೆಯದಿದ್ದಲ್ಲಿ ಹುಟ್ಟುವ ಮಕ್ಕಳ ಪಾಲನೆ, ಪೋಷಣೆ ವಿದ್ಯಾಭ್ಯಾಸ ಮುಂತಾದವು ತಾಯ್ತಂದೆಗಳ ಅರ್ಥಶಕ್ತಿಯನ್ನು ಮೀರಿಹೋಗಿ ಅವು ತಬ್ಬಲಿಗಳಂತೆ, ದರಿದ್ರರಂತೆ, ಅನಾಥರಂತೆ, ಅಲಕ್ಷ್ಯಕ್ಕೊಳಗಾಗಿ ಜೀವನದಲ್ಲಿ ದೈಹಿಕ ಮತ್ತು ಮಾನಸಿಕವಾದ ವಿವಿಧ ರೋಗಗಳಿಗೂ ಗುರಿಯಾಗಿ ನರಳಬೇಕಾಗುತ್ತದೆ. ಆದರೆ ಸಂತತಿ ನಿರೋಧಕ್ರಮವನ್ನು ಅನುಸರಿಸಲು ಸಂಪೂರ್ಣ ನ್ಯಾಯಾನ್ಯಾಯ ವಿವೇಕ, ದಯಾದೃಷ್ಟಿ, ಮತ್ತು ವೈಜ್ಞಾನಿಕ ಸಾಧನ ಇವು ಅವಶ್ಯ. ಅವುಗಳಿಲ್ಲದೆ ಜೀವತ್ಪಿಂಡದ ಕೊಲೆ ನಿರ್ದಯಿಗೆ ಪ್ರಚೋದಕವೂ ಕೇವಲ ಸ್ವಾರ್ಥಪರವೂ ಅವೈಜ್ಞಾನಿಕವೆನಿಸುವ [illegible] ಪಾಯಕರ ಸಾಧನಬಲ್ಲವೂ ಆಗುವುದರಿಂದ ಅಂಥ ಸಂತತಿ ನಿರೋಧವು ಖಂಡಿತವಾಗಿ ಪಾಪಕರ, ಅನ್ಯಾಯಕ ಎನ್ನುವುದನ್ನು ಮರೆಯತಕ್ಕದ್ದಲ್ಲ.

ಅಜ್ಞಾನಿಗಳು ಅವಿವೇಕದಿಂದ ಕೇವಲ ಸ್ವಾರ್ಥ ಮತ್ತು ಜೀವಹಿಂಸೆಗೆ ಕಾರಣವಾಗಿ [illegible] ದಿಂದಲೇ ನಮ್ಮ ಹಿಂದಿನ [illegible] ಧರ್ಮಜ್ಞರು ಸಂತತಿನಿರೋಧ [illegible] ಸಾಧನ [illegible] ಕರಣಗಳಿಂದ ಮಾಡುವುದನ್ನು ನಿಷೇಧಿಸಿ, [illegible] ಕೇವಲ (ಜಿತೇಂದ್ರಿಯತ್ವ) ಮನಃಸಂಯ [illegible] ವನ್ನು [illegible] ದಿಂದಲೇ ಬೇಕಾದರೆ ಮಾಡಬಹುದು [illegible] ಎಂದು ವಿಧಿಸಿದ್ದು. ಆದುದರಿಂದ ಸಾಮಾನ್ಯರು ಜನರಲ್ಲಿ [illegible] ಪತ್ರಿಕೆ [illegible] ಪ್ರಯೋಗಗಳನ್ನು ಗುಪ್ತ ರೀತ್ಯಾ [illegible] ಗರ ಅಥವಾ ಅನುಸರಿಸದೆ, ಶಾಡಾಡಿತನದ ನಾಚಿಕೆಯನ್ನು [illegible] ಭವಿಷ್ಯ [illegible] ಬಲ್ಲಿದರ ಸಲಹೆಯನ್ನು ಪಡೆದೇ ಜನರ ಬೇಕ್ಕವಿದ್ದಲ್ಲಿ ಆಚರಿಸಬೇಕು. ಇದಕ್ಕೆ ತಪ್ಪಿ ಟಾಂಗ ಸ [illegible] ಶಾಸ್ತ್ರದಲ್ಲಿರುವಂತೆ ಮನುಷ್ಯರು ಘೋರ ಉತ್ತರದ [illegible] ಗಳಾಗಿ ಸಮಾಜ ಘಾತಕರಾಗುತ್ತಾರೆ [illegible] ದರೂ [illegible] ದನ್ನು ಎಲ್ಲರಿಗಿಂತ ಹೆಚ್ಚಾಗಿ ಮಹಿಳೆ ನಂಬಿಗೆಯು ಅರಿತುಕೊಳ್ಳಬೇಕಾಗಿದೆ.

ರೂಪರೋಗ

ಯಾವ ಶಿಷ್ಟ [illegible] ನ್ನಾದರೂ ಹಿ [illegible] ನಿಕವಾಗಿ ಗುತ್ತಿನಲ್ಲಿಯ ಬಹುಸಂಖ್ಯ ಸ್ತ್ರೀಯರ ಹಿಟ್ಟಿರೀ ಪ್ರವೃತ್ತಿ ಕಾರಣವಾದ ರೂಪರೋಗವನ್ನು ಯರ ಹಿತೋ [illegible] ty Complex) ಅಮೇರಿಕದ ಕೆಲವು ಸುವ ಔದಾಯ [illegible] ದುರುಪಯೋಗ ಪಡಿಸಿಕೊಳ್ಳು ತಮ್ಮ ಸೈನ್ಯದಲ್ಲಿ ಡಾಂಭಿಕತೆಯನ್ನು ಬೆಳೆಸುವ ರುವ ವಿಜ್ಞಾ [illegible] ಆಕರ್ಷಣೆಗಳಲ್ಲಿ ಸ್ತನವರ್ಧನವೂ [illegible] ಅಮೇರಿಕನ್ ಮೆಡಿಕಲ್ ಗಳನ್ನು ಕೊಟ್ಟು [illegible] ಪತ್ರಿಕೆ ಬರೆಯುತ್ತದೆ. ಕೈಕೆಳಗಿನ ಸೈನಿ [illegible] ಸಂಘದವರು ಸ್ತನವರ್ಧಕ ಭೇದವನ್ನು ಕೂ [illegible] ಪರೀಕ್ಷೆ ಮಾಡಿದ್ದರಿಂದ ಅವರಿಗೆ ಸುದ್ದಿ. ಇದರಿಂದ [illegible] ತಾತ್ಕಾಲಿಕ ಚಿಕಿತ್ಸೆಗಳಿಂದೂ ಮತ್ತು ಸೈನಿಕರಿಗೆ [illegible] ಶರೀರಕ್ಕೆ ಅಪಾಯ ಗುವಂತಾಗಿದೆ. ಈ [illegible] ಕಾಣು ಬಾಧಿದ. ಶಲ್ಯವಾಗಿ ಪರಿ [illegible] ಬುದ್ಧಿಗಳು ಸ್ತ್ರೀಯರ ದೀಕೇ?

ಯುದ್ಧ [illegible] ಗಳನ್ನು ಮಾಡಿ ಮಾಡುವ ಸೈನಿಕರ ಅಪ್ರಿಯ [illegible] ರು ಎಚ್ಚರಿಸಿದ್ದಾರೆ. ಮತ್ತು ಅವಿವೇಕ [illegible] ಸ್ತ್ರೀಯರಿಗೂ ಪುರುಷ ರಾಗಿ ಲಂಡಗುಳಿ [illegible] ಗಳನ್ನು ಜಾಹೀರಾತು ಕಾಪಟ್ಯ, ದ್ರೋಹ [illegible] ಔಷಧ ಲೇಪನಾದಿ ಪವು. ಇದಲ್ಲದೆ ಸೈನಿ [illegible] ಸೇನಾಪತಿಯ ಅತಿ [illegible] ಆರೋಗ್ಯವನ್ನು ಕಾಯ್ದು ಗರು ಹೆಚ್ಚು ಮುತ್ತ [illegible] ಜಾಗ್ರತೆ ವಹಿಸಬೇಕು. ಸೈನಿಕರನ್ನು ಭರತಿ [illegible] ಅನಾಗರಿಕವೇ ಆಗಿದೆ. ಅ [illegible] ಗಳಿಗೆ ಸುಗ್ಗಿಸಿ, ಅಲ್ಲಿ [illegible]

